BUDGET ESTIMATES FOR 1967—68

General Discussion

(Debate Continued)

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ದೇಶದ ಆಯವ್ಯಯವನ್ನು ಸ್ವಾಗತಿಸುತ್ತಾ, ನಾಲ್ಕಾರು ಸಲಹೆಗಳನ್ನು ಕೊಡಬೇಕೆಂದು ಇದ್ದೇನೆ. ಈ ಆಯವ್ಯಯ ವಿಮರ್ಶಿಸಿದರೆ "ಭಂಗಪಟ್ಟುಂಬಾ ಬಿಸಿಗಿಂತ, ತಂಗಳ ಅಂಬಲಿ ಲೇಸೆಂ"ಬಂತೆ ಮನಸ್ಸಿಗೆ ನೆಮ್ಮದಿ ದೊರೆಯುವ ತಂಗಳ ಅಂಬಲಿಯನ್ನೇ ವಿತರಣೆಯಿಂದ ಕೊಡಿರೆಂದು ನಮ್ಮ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಮಾತು ಸರ್ಕಾರದವರಿಗೆ ಅರ್ಥವಾಗುವುದಿಲ್ಲ, ಸರ್ಕಾರದ ಮಾತು ನಮಗೆ ಅರ್ಥವಾಗುವುದಿಲ್ಲ. ಅರ್ಥವಿಲ್ಲದ ನಮ್ಮಿಬ್ಬರ ಮಾತುಗಳಿಂದ ಜನತೆ ವ್ಯರ್ಥವಾಗಿ ಕಂಗೆಡಬೇಕಾಗುತ್ತದೆ. ಅಂತೆಯೇ, 'ಹೇಳಲಾರೆನು ನಾನು. ಹೇಳದೆಯೂ ಇರಲಾರೆ. ಹೇಳಿದರೆ ನಿಮಗೆ ಕಡುಕೋಪ. ಜನತೆಗೆ ಹೇಳಿದರೆ ಕಷ್ಟ ಮರ್ಯಾದೆ' ಎಂಬಂತೆ ಆಯವ್ಯಯದ ಕುಂದುಕೊರತೆಗಳನ್ನು ಜನತೆಯ ಹಿತದೃಷ್ಟಿಯಿಂದ ಹೇಳ ಬಯಸುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಾನು ಯಾರ ದಯಾದಾಕ್ಷಿಣ್ಯವೂ ಇಲ್ಲದೆ, ಸತ್ಯವೆಂದು ಇರುವುದನ್ನೆಲ್ಲಾ ಹೇಳುತ್ತಾ ಬಂದಿದ್ದೇನೆ. ರಾಮ ಬರಲಿ, ರಾವಣ ಬರಲಿ, ಕೌರವರೇ ಬರಲಿ, ಪಾಂಡವ ಪಕ್ಷದವರೇ ಅಧಿಕಾರಕ್ಕೆ ಬರಲಿ ಯಾರ ಹಂಗೂ ಇಲ್ಲದೆ, ದೇಶದ ಹಿತದೃಷ್ಟಿಯಿಂದ ಹೇಳುತ್ತಾ ಬಂದಿದ್ದೇನೆ. ಕರ್ತವ್ಯ ಮಾಡು, ಕರ್ತವ್ಯದ ಫಲ ಇಂದಲ್ಲ ನಾಳೆ ದೊರೆಯುತ್ತದೆಂಬಂತೆ, ಜನತೆಯ ಅಪೇಕ್ಷೆಯೆಂಬ ಸಸಿಗಳನ್ನು ನಾಟುತ್ತಾ ಬಂದಿದ್ದೇನೆ. ನೆಟ್ಟ ಸಸಿಗಳಲ್ಲಿ ಕೆಲವು ವ್ಯರ್ಥವಾದರೂ, ಕೆಲವು ಫಲ ಕೊಡುತ್ತವೆ ಎಂಬ ಆಶಾಭಾವನೆಯಿಂದ ಆಯವ್ಯಯದ ಮೇಲೆ ಮಾತನಾಡುತ್ತಿದ್ದೇನೆ. ಮೊನ್ನೆ ಮಾನ್ಯ ಸದಸ್ಯರಾದ ಮಾನ್ಯ ಚೆನ್ನಬಸಪ್ಪನವರು ಭ್ರಷ್ಟಾಚಾರದ ಮೇಲೆ ಮಾತನಾಡುತ್ತಾ ಶ್ರೀ ನಿಜಲಿಂಗಪ್ಪನವರ ಅವಿಚ್ಛಿನ್ನ ಭಕ್ತರಾದ ಶ್ರೀಮತಿ ನಾಗರತ್ನಮ್ಮನವರು ಭ್ರಷ್ಟಾಚಾರದ ಬಗ್ಗೆ ಮೂರು ನಾಲ್ಕು ವರ್ಷಗಳ ಹಿಂದೆ ಹೇಳಿದ್ದಕ್ಕಿಂತಲೂ ಈಗ ಇನ್ನೂ ಹೆಚ್ಚಾಗಿದೆ ಎಂದು ಹೇಳುತ್ತಾ ಅಪ್ರಾಸಂಗಿಕ ಉದಾಹರಣೆ ಕೊಡುತ್ತಾ ನಾನು ನಿಜಲಿಂಗಪ್ಪನವರ ಅವಿಚ್ಛಿನ್ನ ಭಕ್ತರೆಂದು ವ್ಯವಹಾರ ಜ್ಞಾನ ಶೂನ್ಯತೆಯಿಂದ ಹೇಳಿದ್ದಾರೆ.

ಧಾರ್ಮಿಕವಾಗಿ ನಾವು ಗುರುಗಳು ಯಾರ ಭಕ್ತರೂ ಅಲ್ಲ, ಹಾಗೆ ನೋಡಿದರೆ, ಧಾರ್ಮಿಕವಾಗಿ, ನಾವು ಚೆನ್ನಬಸಪ್ಪನವರಿಗೂ, ನಿಜಲಿಂಗಪ್ಪನವರಿಗೂ ಸಹಾ ಗುರುಗಳೇ, ರಾಜಕೀಯವಾಗಿಯೂ ನಾವು ಯಾರ ಭಕ್ತರೂ ಅಲ್ಲ. ಹಾಗೆ ಭಕ್ತರಾಗಿದ್ದಿದ್ದರೆ, ಕೆಲವರು ಹೇಳುತ್ತಾರಲ್ಲ, ಮಂತ್ರಿ ಪದವಿ ದೊಡ್ಡದು ಎಂದು, ಅದು ಎಂದೋ ಬರುತ್ತಿತ್ತು. ನನ್ನ ಸ್ವಂತ ದೃಷ್ಟಿಯಲ್ಲಿ ಮಂತ್ರಿ ಪದವಿ ಸಾಮಾನ್ಯ. ನಾನು ಯಾರ ಹಂಗಿಗೂ ಒಳಗಾಗಿಲ್ಲ. ನಮ್ಮತನ ಉಳಿಸಿಕೊಂಡು, ಬೆಳಸಿಕೊಂಡು ಬಂದಿದ್ದೇವೆ. ಅದೇ ನಮ್ಮ ಸ್ಥಾನ, ಮಾನ, ಎಂಬುದನ್ನು ಮಾನ್ಯ ಚೆನ್ನಬಸಪ್ಪನವರು ತಿಳಿದುಕೊಳ್ಳಲೆಂದು ಅಪೇಕ್ಷಿಸುತ್ತೇನೆ.

ಇನ್ನು ಕೆಲವು ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. 'ಉದರ ದೈವಕೆ ಜಗದಿ ಎದುರು ದೈವವೆ ಇಲ್ಲ । ಮೊದಲದರ ಪೂಜೆ । ಮಿಕ್ಕೆಲ್ಲ ದೈವ ಸಂತೃಪ್ತಿ ಪಡೆಯುವರು' ಎಂದಿರುವುದರಿಂದ ನಮಗೆ ಸಿಕ್ಕಷ್ಟೇ ಸಿಗಲಿ, ಸಿಗಬೇಕಾದ ಆಹಾರ ಧಾನ್ಯವನ್ನು ಶುದ್ಧವಾದ್ದನ್ನು ಕೊಡಿರಿ, ಕೃಪವಾಗಿ ಕೊಡಿರಿ ಎಂದು ಆಹಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅಲ್ಲಿಂದ ಇಷ್ಟು ಸಾವಿರ ಪಲ್ಲ ಗೋಧಿ ಬಂತು, ಇಲ್ಲಿಂದ ಇಷ್ಟು ಸಾವಿರ ಪಲ್ಲ ಕಾಳ ಸಂತೆ ಕೋರರಿಂದ ಸಿಕ್ಕಿತು, ವೈಗರೆ ಪತ್ರಿಕೆಗಳಲ್ಲಿ ವರದಿ ನೋಡುತ್ತೇವೆ. ಅಲ್ಲಿಂದ ಬಂದ ಗೋಧಿ ಸರಿಯಾಗಿ ಹಂಚಿಕೆಯಾಯ್ತೆ ? ಇದರಲ್ಲಿ ಎಷ್ಟು ಪರ್ಸೆಂಟ್ ಕಲ್ಲು ಮಣ್ಣು, ಬೆರಕೆ ಇದ್ದಿತು ಎಂಬುದನ್ನೂ ಇಲ್ಲಿಂದ ಕಾಳಸಂತೆ ಕೋರರಿಂದ ಸಿಕ್ಕಿದ್ದು ಏನಾಯ್ತು ? ಕಾಳಸಂತೆ ಕೋರರಿಗೆ, ಶಿಕ್ಷೆಯಾಯಿತೇ? ಇದು ಆಹಾರ ಮಂತ್ರಿಗಳಿಗೂ ಗೊತ್ತಾಗುವುದಿಲ್ಲವೆಂದು ಮೇಲೆ ಸಾರ್ವಜನಿಕರಿಗಂತೂ ದೂರದ ಮಾತು. ವ್ಯಾಪಾರಸ್ಥರು ಅನ್ಯಾಯದ ಪರಮಾವಧಿಯಲ್ಲಿದ್ದಾರೆ, ಧಾನ್ಯದ ಬೆಲೆ ವಿಚಾರ ಆಕಾಶವಾಣಿಯಲ್ಲಿ ಎಷ್ಟು ಮಧುರವಾಗಿ ಹೇಳುತ್ತಾರೆ ಸಣ್ಣಕ್ಕಿ, ದಪ್ಪಕ್ಕಿ, ಹುಣಿಸೆಹಣ್ಣು, ಮೆಣಸಿನಕಾಯಿ ನೀರುಳ್ಳಿ ವಗೈರೆ ಹೇಳುತ್ತಾರಲ್ಲ, ಆ ಬೆಲೆಗಳು ಒಂದೂ ಹೇಳಿದಂತಿಲ್ಲ. ಇದನ್ನು ಯಾತಕ್ಕೆ ಹೇಳಿಸುತ್ತೀರಿ, ನಮಗೆ ನಿಲುಕುವುದಲ್ಲ ಎಂದು, ಜನ ತಿಳಿದಿರುವುದರಿಂದ ನಮಗೆ ಅದನ್ನು ಕೇಳುವುದೆಷ್ಟೋ ಅಷ್ಟೇ, ಆದರೆ ಒಂದು ಮಾತು, ಆಗದ ಹೋಗದ ಇಂತಹ ಧಾರಣೆ ರಾಸಿಗಳನ್ನು ಆಕಾಶವಾಣಿಯವರು ಹೇಳದೇ ಇದ್ದರೆ, ಒಂದು ಹೆಚ್ಚಿಗೆ ಚಿತ್ರಗೀತೆಗೆ ಕಾಲ ಕೂಡಿಬರುತ್ತದೆಂದು ನಮ್ರತೆಯಿಂದ ವಿಧಾನಸೌಧದ ಆಕಾಶವಾಣಿಯ ಮೂಲಕ ಹೇಳಬಯಸುತ್ತೇನೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಒಟ್ಟಿನಲ್ಲಿ ಈ ಆಹಾರ ಇಲಾಖೆ ಏನಾಗಿದೆ ಎಂದರೆ "ವ್ಯಾಪಾರಿ ಪುಡಾರಿ ಇಬ್ಬರೂ ಕೂಡಿ। ಆಹಾರ ಧಾನ್ಯವೇ ಸಿಗದಂತೆ ಮಾಡಿ। ಸಿಕ್ಕಿದರೂ ಕೂಡ ಅದರ ಬೆಲೆ ದುಬಾರಿ। ಬಡ ಜನರಿಗಾದರೋ ಬಹು ದೊಡ್ಡ ಮಾರಿ" ಎಂಬಂತಾಗಿದೆ ಆಹಾರ ವ್ಯವಹಾರ. ಈ ವ್ಯವಹಾರದಲ್ಲಿರುವ ಅಕ್ರಮ ಅನ್ಯಾಯಗಳನ್ನು ತೊಡೆಯುವ ಸಂಕಲ್ಪ ಮಾಡಿರೆಂದು ಆಹಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. "ನ್ಯಾಯವಾದ ಬೆಲೆಗೆ ಆಹಾರ ಪೂರೈಕೆ। ಆಗಲೆನ್ನುವುದೇ ಈಗ ಜನತೆಯಾ ಬಯಕೆ" ಎಂಬ ಕೋರಿಕೆಯನ್ನು ನೆರವೇರಿಸಿ ಆಹಾರ ಪೂರೈಕಾ ಜಟ್ಟಿಯಾಗಿರೆಂದು ಮಾನ್ಯ ಜತ್ತಿಯವರಲ್ಲಿ ವಿನಂತಿಸುತ್ತೇನೆ. ಬರೀ ಹೇಳುವುದು ಆಗಬಾರದು. ಆಹಾರ ಧಾನ್ಯಗಳ ಕಳ್ಳ ದಾಸ್ತಾನು ಪತ್ತೆ ಹಚ್ಚಲು ಕೈಕೊಂಡ ಕ್ರಮವೇನು ? ಪೋಲೀಸರಿಗೆ ಮತ್ತೆ ವ್ಯಾಪಾರಿಗೆ ಕುಸ್ತಿ। ಈ ಕುಸ್ತಿ ಹೊರಗಡೆಗೆ। ಒಳಗಡೆಗೆ ದೋಸ್ತಿ।

ಮಂತ್ರಿಗಳು ಶಾಸಕರು ಆಹಾರ ಧಾನ್ಯಗಳ ಚರ್ಚೆ ನಡೆಸಿದರು
ಹೊರಟು ಹೋದರು ತಮ್ಮ ತಮ್ಮ ಊರುಗಳಿಗೆ
ಮುಂದೆ ಆದದ್ದೇನು ಗೊತ್ತುಂಟೆ ಶೆಟ್ಟಿ
ಪೇಟೆಯಲಿ ಕಾಳು ಕಡಿ ಮತ್ತಷ್ಟು ತುಟ್ಟಿ
ಒಂದಲ್ಲ ಎರಡಲ್ಲ ಮೂರು ಮಧ್ಯಾಹ್ನ
ಕ್ಯೂ ಹಿಡಿದು ನಿಂತರೂ ಸಿಗಲಿಲ್ಲ ಧಾನ್ಯ
ಮುಂಜಾನೆ ಬಾ ಎಂದು ಹೇಳುವರು ಮತ್ತೆ
ಮುಂಜಾನೆ ಹೋದಾಗ ಕಾಳು ನಾಪತ್ತೆ.

ಹೀಗಾಗಬಾರದು ಎಂದು ಆಹಾರ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಹಾರ ಬೆಲೆಗಳು ಏರುತ್ತಾ ಹೋಗುತ್ತಿರುವುದು ಜನಸಾಮಾನ್ಯರಿಗೆ ಜೀವನ ತುಂಬಾ ಕಷ್ಟವಾಗಿದೆ. ಕೆಲವು ರಾಜಕೀಯ ಮುಖಂಡರು ವಿಧಾನ ಸೌಧ ಚಲೋ—ಘೇರಾವೋ ವಗೈರೆ ಚಳವಳಿ ಮಾಡುತ್ತಾರಲ್ಲ ಅವರು 'ಕಾಳಸಂತೆ ಡಿಪೋ ಚಲೋ—ಕಾಳಸಂತೆ ಕೋರ ಘೇರಾವೋ' ಚಳವಳಿ ಹೂಡಿ ಜನತೆಗೆ ನಿಜವಾದ ಉಪಕಾರ ಮಾಡಲೆಂದು ಹಾರೈಸುತ್ತೇನೆ. ನಾನು ಇನ್ನು ವೈದ್ಯ ಇಲಾಖೆಯ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ: ಇತ್ತೀಚೆಗೆ ವೈದ್ಯ ಇಲಾಖೆ, ನಾನು ಹೆಚ್ಚು, ತಾನು ಹೆಚ್ಚು ಎಂಬ ಪ್ರತಿಷ್ಠೆಯಲ್ಲಿ ಹೋಗುತ್ತಿದೆ. ಹಣವನ್ನು ಹೆಚ್ಚಿಗೆ ಖರ್ಚು ಮಾಡಿದರೂ ಉಪಯೋಗ ಸರಿಯಾಗಿ ಆಗುತ್ತಿಲ್ಲ ಅನ್ನುವ ಮಾತನ್ನು ಹೇಳಬೇಕಾಗಿದೆ. ಇಲ್ಲಿ ಕಾನೂನುಗಳೆಲ್ಲಾ ತಿರುಗು ಮುರುಗಾಗಿ ಬೇಕಾದವರಿಗೆ ಹೊಸ ಹೊಸ ಜಾಗಗಳನ್ನು ಹುಟ್ಟಿಸಲಾಗುತ್ತಿದೆ, ಒಬ್ಬ ಮಂತ್ರಿಗಳಿದ್ದಾಗ ಒಂದು ಕಾನೂನು, ಇನ್ನೊಬ್ಬ ಮಂತ್ರಿಗಳು ಬಂದಾಗ ಇನ್ನೊಂದು ಕಾನೂನು ಇದೇಕೆ ? ಇದರಿಂದ ವೈದ್ಯರಲ್ಲಿ ನಿರಾಸೆ, ವೈಮನಸ್ಸು ಹುಟ್ಟಿ ರೋಗಿಗಳಿಗೆ ತೊಂದರೆ ಆಗುತ್ತಿದೆ. ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವುದರಲ್ಲೇನೋ ಸರ್ಕಾರಕ್ಕೆ ಆಸಕ್ತಿ ಇದೆ. ಆದರೆ ಉತ್ತಮ ತರದ ಸಲಕರಣೆಗಳು ಎಲ್ಲಿಯೂ ಇಲ್ಲ. ಕೆಲವು ಸಾಮಾನುಗಳನ್ನು ಅಂದರೆ ಬ್ಲಡ್‌ಪ್ರೆಜರ್ ಅಪರೇಟರ್, ಆಕ್ಸಿಜನ್ ಸಿಲೆಂಡರ್ ಮತ್ತು ಬಟ್ಟೆ ಇಂಥವುಗಳನ್ನು ತಂದರೆ ಅವು ಆರು ತಿಂಗಳು ಸಹಾ ಬರುತ್ತಿಲ್ಲ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಖಾದಿ ಬಟ್ಟೆಯನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ನಾನೂ ಕೂಡ ಖಾದಿಪ್ರೇಮಿಯೇ ಹೌದು. 30 ವರ್ಷಗಳಿಂದ ಖಾದಿ ಹಾಕುತ್ತಿದ್ದೇನೆ. ಇದನ್ನು ಅಲ್ಲಿರತಕ್ಕ ವೈದ್ಯರುಗಳಿಗೆ ಧರಿಸುವುದಕ್ಕೆ ಒತ್ತಾಯ ಮಾಡಿ ಇದನ್ನು ರೋಗಿಗಳು ಧರಿಸುತ್ತಿರುವುದರಿಂದ ಅವುಗಳನ್ನು ಸರಿಯಾಗಿ ತೊಳೆದು ಶುಚಿಯಾಗಿಡಲು ಆಗುವುದಿಲ್ಲ. ವಾಸನೆ ಬರುತ್ತಿರುತ್ತದೆ. ಎರಡು ಸಾರಿ ಒಗೆದರೆ ಆರು ತಿಂಗಳಿಗೆ ಒಂದು ಸಾರಿ ಬಟ್ಟೆ ಕೊಳ್ಳಬೇಕಾಗುತ್ತದೆ. ಆ ಬಟ್ಟೆ ಬಾಳಿಕೆ ಬರುವುದಿಲ್ಲ. ಇದನ್ನು ಕೊಡುತ್ತಿರುವುದರಿಂದ ಘನ ಸರ್ಕಾರಕ್ಕೆ ಹಣ ಉಳಿಯುವುದಿಲ್ಲ. ಆದುದರಿಂದ ಇದನ್ನು ಬದಲಾಯಿಸಿ ಇದರ ಬದಲು ಬಿಳಿ ಮಿಲ್ ಬಟ್ಟೆಯನ್ನು ಉಪಯೋಗ ಮಾಡಿದರೆ ಹಣ ಉಳಿತಾಯವಾಗುತ್ತದೆ ಎಂದು ಇದನ್ನು ಸಲಹೆ ಮಾಡುತ್ತೇನೆ. ಹೀಗೇ ಇನ್ನೂ ಕೆಲವು ಸಾಮಾನುಗಳನ್ನು ಒಳ್ಳೆಯದಲ್ಲವುಗಳನ್ನು ಕೊಂಡುಕೊಳ್ಳುವುದರಿಂದ ಅವುಗಳನ್ನು ಮೂರು ತಿಂಗಳಿಗೊಮ್ಮೆ ಬದಲಾಯಿಸಬೇಕಾಗುವುದು. ಇದರ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಆಂಬ್ಯುಲೆನ್ಸ್ ವ್ಯವಸ್ಥೆ ಸರಿಯಾಗಿಲ್ಲ. ಒಂದು ಆಂಬ್ಯುಲೆನ್ಸಿಗೆ ಒಬ್ಬ ಡ್ರೈವರ್ ಇದ್ದಾನೆ. ಅವನು 24 ಗಂಟೆಗಳ ಕಾಲ ಕೆಲಸ ಮಾಡುವುದಕ್ಕಾಗುವುದಿಲ್ಲ. ಸೆಂಟ್ರಲ್ ಆಂಬ್ಯುಲೆನ್ಸ್ ಸರ್ವೀಸ್ ಎಂದರೆ ಅದು ಫೈರೆಂಜಿನ್ ಸರ್ವೀಸ್‌ನಂತೆ ಇರಬೇಕು. ಡ್ರೈವರುಗಳು 8 ಗಂಟೆಗೆ ಒಂದು ಸಾರಿ ಬದಲಾಗುವಂತೆ ವ್ಯವಸ್ಥೆ ಇರಬೇಕು. ಇದರಂತೆ ಒಂದು ವ್ಯವಸ್ಥೆಯನ್ನು ಮಾಡಿ ಎಲ್ಲಾ ಕಡೆಗಳಲ್ಲೂ ಇವುಗಳನ್ನಿಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಹೀಗೆ ಮಾಡದಿದ್ದರೆ ಆ ಡ್ರೈವರುಗಳು ನಾನು ಸುಸ್ತಾಗಿದ್ದೇನೆ, ನನಗೆ ಸಾಕಾಗಿದೆ ಎಂದು ಹೇಳುತ್ತಾನೆ. ಒಳ್ಳೆ ಸಮಯದಲ್ಲಿ ನಮಗೆ ಅನುಕೂಲ ಸಿಗುವುದಿಲ್ಲ.

ಇನ್ನೊಂದು ವಿಷಯ : ಆಸ್ಪತ್ರೆಯಲ್ಲಿ ಡೆಡ್‌ಬಾಡಿಗಳನ್ನು ಸಾಗಿಸುವುದಕ್ಕೆ ಯಾವ ಒಂದು ವಾಹನ ಸೌಕರ್ಯದ ವ್ಯವಸ್ಥೆಯನ್ನೂ ಮಾಡಿಲ್ಲ. ಜನರಿಗೆ ಆ ಬಾಡಿಗಳನ್ನು ಸಾಗಿಸಲು ಟ್ಯಾಕ್ಸಿಗಳಾಗಲೀ ಜಟಕಾಗಳಾಗಲಿ ಸಿಕ್ಕುವುದಿಲ್ಲ. ಇದನ್ನು ಪೂರ್ಣವಾಗಿ ಒಳಹೊಕ್ಕು ನೋಡತಕ್ಕವರಿಗೆ ಇದರ ಕಷ್ಟವೇನೆಂದು ಗೊತ್ತಾಗುತ್ತದೆ. ಆದುದರಿಂದ ಅಲ್ಲಿ ಇದಕ್ಕೇ ಒಂದು ಪ್ರತ್ಯೇಕ ಆಂಬ್ಯುಲೆನ್ಸನ್ನು ಇಟ್ಟು ಅದಕ್ಕೆ ಇಂತಿಷ್ಟು ಬಾಡಿಗೆ ಕೊಡಬೇಕು ಎಂದು ನಿಗದಿ ಮಾಡಿ ಇಟ್ಟರೆ ಬಹಳ ಅನುಕೂಲವಾಗುತ್ತದೆ. ಇದನ್ನು ಜಾರಿಗೆ ತರಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಇದರಂತೆಯೇ ಆಸ್ಪತ್ರೆಯ ಕೆಲವು ಪ್ರಾಮುಖ್ಯ ಬಾಬುಗಳಲ್ಲಿ ಅಂದರೆ ಅನಸ್ತೇಷಿಯ ಕೊಡತಕ್ಕ ಕಡೆ ಇಬ್ಬರನ್ನು ನೇಮಕ ಮಾಡಬೇಕು. ಎಮರ್ಜೆನ್ಸಿ ಪೇಷಂಟುಗಳನ್ನು ನೋಡುವುದಕ್ಕೂ, ಅರ್ಜೆಂಟ್ ಪೇಷಂಟುಗಳನ್ನು ನೋಡುವುದಕ್ಕೂ ಅನುಕೂಲವಾಗುತ್ತದೆ. ಹಾಗೇನೆ ಇನ್ನು ಲ್ಯಾಬೊರೇಟರಿ ಟೆಕ್ನಿಷೀಯನ್‌ಗಳನ್ನೂ ಇಬ್ಬರನ್ನು ಇಡಬೇಕಾದ್ದು ಅತ್ಯವಶ್ಯಕ. ಇದನ್ನು ಜಾರಿಗೆ ತರಬೇಕೆಂದು ನಾನು ಕಳೆದ 10 ವರ್ಷಗಳಿಂದಲೂ ಹೇಳುತ್ತಲೇ ಬಂದಿದ್ದೇನೆ. ಇದಿನ್ನೂ ಆಗಿಲ್ಲ. ಸರ್ಕಾರದವರು ಈಗಲಾದರೂ ಕೂಡ ಇತ್ತ ಕಡೆ ಗಮನಕೊಟ್ಟು ಕೂಡಲೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಹೌಸ್ ಸರ್ಜನ್‌ಗಳಿಗೆ ಸ್ಟೈಪೆಂಡನ್ನು ಇನ್ನೂ ಕೊಟ್ಟಿಲ್ಲ ಅವರು ಇದಕ್ಕಾಗಿ ಅಲೆಯುತ್ತಿದ್ದಾರೆ. ಹೀಗಾಗಬಾರದು. ಇದನ್ನು ಕೂಡಲೆ ಮಾನ್ಯ ಮಂತ್ರಿಗಳು ಸರಿಪಡಿಸಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮೂರು ಮತ್ತು ನಾಲ್ಕನೇ ವರ್ಗದ ನೌಕರರನ್ನು ನಿವೃತ್ತಿಯಾದವರ ಸ್ಥಳದಲ್ಲಿ ಮತ್ತೊಬ್ಬರನ್ನು ತೆಗೆದುಕೊಳ್ಳಬಾರದೆಂದು ಮಾಡಿದ್ದೀರಿ. ಹಾಗಾದರೆ ಆ ಕೆಲಸ ಮಾಡುವರು ಯಾರು ? ಆರೋಗ್ಯ ಇಲಾಖೆ, ವೈದ್ಯ ಇಲಾಖೆಯ ಒಬ್ಬರು ಮುಖ್ಯಾಧಿಕಾರಿಗಳ ಅಹಂಭಾವ ದೇಶಕ್ಕೆ ಹಂಚುವಷ್ಟಿದೆ. ದೇವರು ಕ್ಷಮಿಸಿದರೂ ಜನತೆ ಕ್ಷಮಿಸಲಾರದು. ಈ ಬಗ್ಗೆ ಸರ್ಕಾರ ನಿಗಾ ಕೊಡಲೇಬೇಕು. ಹಿಮಗಿರಿಯೊಡಯನ ಸಂಬಂಧಿಯೇ ಇರಲಿ, ಮಂದರಗಿರಿಧಾರಿಯ ಸಂಬಂಧವೇ ಇರಲಿ, ನ್ಯಾಯಕ್ಕೆ ಯಾರಾದರೇನು ? ಕಾರಣ ಸರ್ಕಾರ ಕಟ್ಟುನಿಟ್ಟಾದ ಶಿಸ್ತನ್ನು ಆರೋಗ್ಯ ಇಲಾಖೆಯಲ್ಲಿ ಜಾರಿಗೆ ತರಬೇಕೆಂದು ಆರೋಗ್ಯ ಮಂತ್ರಿಗಳಿಗೆ ವಿನಂತಿಸುತ್ತೇನೆ. ''ನಿಗಾ ಕೊಡದಿದ್ದರೆ ನಾವು ಮಾಡಿದ ಪಾಪಗಳನ್ನು ಕ್ಷಮಿಸೆಂದು ದೇವರನ್ನು ಕೇಳುವ ಮೊದಲು ಏನು ಮಾಡಬೇಕಮ್ಮಾ ಎಂದು ಒಬ್ಬ ಪಾದ್ರಿಗಳು ಒಬ್ಬ ಚಿಕ್ಕ ಹುಡುಗಿಯನ್ನು ಕೇಳಿದರು, ಅದಕ್ಕೆ ಆ ಹುಡುಗಿ ''ಮಾಡುವುದೇನು ಪಾಪ ಮಾಡಬೇಕು ಕ್ಷಮಿಸೆಂದು ಕೇಳಬೇಕೆಂದು'' ಉತ್ತರ ಕೊಟ್ಟಳು. ಈ ರೀತಿಯಾಗುತ್ತಿದೆ.

ವಿದ್ಯಾ ಇಲಾಖೆ, ಇದರಲ್ಲಿ ಒಂದೊಂದು ಆಡಳಿತ ಕಾಲಕ್ಕೆ ಒಂದೊಂದು ರೀತಿ ನಮ್ಮ ಮಕ್ಕಳು, '' ವಿದ್ಯಾದಾನಂ ಚ ದೇಹಿಮೆ '' ಎಂದು ಬಿಕ್ಷೆ ಬೇಡಬೇಕಾಗಿದೆ. ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಕೊಡಲು ಕಪ್ಪು ಹಣವಿಲ್ಲ. ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ಸ್ಥಳವಿಲ್ಲ. ಹುಡುಗರು ಏನು ಮಾಡಬೇಕು ? ಎಲ್ಲಿ ಹೋಗಬೇಕು. ಒಬ್ಬೊಬ್ಬ ವಿದ್ಯಾ ಮಂತ್ರಿಗಳ ಕಾಲಕ್ಕೆ ಒಂದೊಂದು ನೀತಿ ಏನಿದು ? ಜನತೆ ಏನಂದೀತು ! ಇದು ಜನಸಾಮಾನ್ಯರನ್ನು ಕೆರಳಿಸುವ ಪ್ರಶ್ನೆಯಾಗಿದೆ. ಖಾಸಗಿ ಸಂಸ್ಥೆಗಳ ಕಾಳ ವಿದ್ಯಾ ವ್ಯಾಪಾರ ನಿಲ್ಲಬೇಕು. ಹಣ ಕೊಡುವವರಿಗೆ ಇಂತಿಷ್ಟೇ ಎಂದು ನಿಗದಿ ಮಾಡಬೇಕು. ಮೊದಲು ಕರ್ನಾಟಕದ ಮಕ್ಕಳಿಗೆ ಸೀಟು ಕೊಟ್ಟು ಉಳಿದರೆ ಹೊರಗಿನವರಿಗೆ ಕೊಡುವಂತೆ ಮಾಡಿ, ಮನೆಗೆ ಮಾರಿ, ಪರರಿಗೆ ಉಪಕಾರಿಯಂತೆ ಆಗಬಾರದು. ಶಾಲೆ ಕಾಲೇಜುಗಳಲ್ಲಿ ಪ್ರತಿಯೊಬ್ಬ ವಿದ್ಯಾಕಾಂಕ್ಷಿಗೂ ಅವಕಾಶ ದೊರೆಯಬೇಕು. ಈ ರೀತಿ ನೀತಿಗಳನ್ನು ಅನುಷ್ಠಾನಕ್ಕೆ ತರದಿದ್ದರೆ ವಿದ್ಯಾ ಇಲಾಖೆ ಏಕಿರಬೇಕು ? ವಿದ್ಯಾ ಮಂತ್ರಿಗಳು ಏಕಿರಬೇಕು ಎಂದು ಜನತೆ ಪ್ರಶ್ನಿಸುತ್ತಿದ್ದಾರೆ. ಕಾರಣ—ಒಳ್ಳೆ ಉತ್ಸಾಹ ಶಾಲಿ ವಿದ್ಯಾ ಮಂತ್ರಿಗಳು ಬಂದಿದ್ದಾರೆ, ಗಣಪತಿ ಮಾಡುತ್ತಾರೋ, ಅಪ್ಪನನ್ನು ಮಾಡುತ್ತಾರೋ ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಈಗಾಗಲೇ ಒಂದು ಸುಧಾರಣೆ ಮಾಡಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಹಾಕಿದರು ಅವರ ಕಾಲದಲ್ಲಿ ಬಿ.ಎಸ್‌ಸಿ. ಯಾವುದೂ ಇಲ್ಲದಂತೆ ಮಾಡುತ್ತಾರೊ ಏನೊ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಗಣಪತಿ ಮಾಡಿ ಗಣ್ಯರೆನಿಸಿಕೊಳ್ಳಿರೆಂದು ವಿದ್ಯಾ ಮಂತ್ರಿಗಳನ್ನು ವಿನಂತಿಸುತ್ತೇನೆ.

ಕಾರ್ಪೊರೇಶನ್ ಆಡಳಿತ ಕಲಸುಮೇಲೋಗರ. ಅದು ನಡಿಗೆಯಾಗಿದೆ. ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರಿನ ಸಮಸ್ಯೆಗಳು ಬೃಹದಾಕಾರವಾಗಿಯೇ ನಿಂತಿವೆ. ಕೊಳಕು ಪ್ರದೇಶ ನಿರ್ಮೂಲನಕ್ಕಾಗಿ ಕೇಂದ್ರ ಸರ್ಕಾರ ಕೊಟ್ಟ ಹಣ ಉಪಯೋಗಿಸದೆ ಹಾಗೇ ಹೋಯಿತು. ಸಂಬಂಧ ಪಟ್ಟ ಅಧಿಕಾರಿಗಳಿಗೇನು ಕಡಿಮೆಯಿಲ್ಲ. ಆಳು ಮೇಲೆ ಆಳು ಬಿದ್ದು ಗೋಣಿ ಬರಿದಾಯ್ತು ಎಂಬಂತಾಗಿದೆ. ಒಂದು ಸಾರ್ವಜನಿಕನಲ್ಲಿ ಹಾಕಬೇಕಾದರೆ ಕಾರ್ಪೊರೇಶನ್ ಒಪ್ಪಿಗೆ ಕೊಡಬೇಕು. ವಾಟರ್ ಬೋರ್ಡಿನವರು ನಲ್ಲಿ ಹಾಕಬೇಕು. ದೀಪಗಳನ್ನು ಹಾಕಬೇಕಾದರೂ ಅಷ್ಟೆ. ಅವರನ್ನು ಕೇಳಿದರೆ ಇವರ ಮೇಲೆ ಹೇಳುತ್ತಾರೆ ಇವರನ್ನು ಕೇಳಿದರೆ ಅವರ ಮೇಲೆ ಹೇಳುತ್ತಾರೆ. ನೀರು ಹೋಗುತ್ತದೆ ರಿಪೇರಿ ಮಾಡಿರೆಂದರೆ ನಲ್ಲಿಯನ್ನೇ ಕಿತ್ತು ಹಾಕುತ್ತಾರೆ. ಇದರಿಂದ ಜನತೆಗೆ, ಕಷ್ಟ ನಷ್ಟ ಎರಡೂ ಆಗುತ್ತದೆ. ಕಾರಣ ನೀರಿನ ವ್ಯವಸ್ಥೆ, ವ್ಯವಹಾರ—ಸಂಪೂರ್ಣ ವಾಟರ್ ಬೋರ್ಡಿಗೆ ವಹಿಸಿದರೆ ಅನುಕೂಲವಾದೀತೆಂದು ನನ್ನ ನಿರೀಕ್ಷೆ, ನನ್ನ ಕ್ಷೇತ್ರದಲ್ಲಿ ಏಳು ಡಿವಿಜನ್‌ಗಳಿವೆ. ಏಳು ಕಾರ್ಪೊರೇಟರ್ ಕೆಲಸ ನೋಡಿಕೊಳ್ಳಬೇಕಾಗುತ್ತದೆ. ಅನೇಕ ಕೆಲಸಗಳನ್ನು ಆಗದೆ ಅನೇಕ ತೊಂದರೆಗಳನ್ನು ನಗರವಾಸಿಗಳು ಅನುಭವಿಸಬೇಕಾಗಿದೆ. ಕಾರ್ಪೊರೇಟರ್ ಹೋದರು—ಅಡ್ಮಿನಿಸ್ಟ್ರೇಟರ್ ಬಂದರು—ಕಮಿಷನರ್ ಕೇಳರು, ಎಂದು ಜನತೆ ಹೇಳುವ ಪ್ರಸಂಗ ಬರದಂತೆ ನೋಡಿಕೊಳ್ಳಿ. ಒಂದೊಂದು ಡಿವಿಜನ್ನಿಗೆ ಅವಶ್ಯಕ ಕೆಲಸ ಆಗದಿದ್ದರೆ, ನಾವೇಕೆ ಇರಬೇಕು ? ಕಾರ್ಪೊರೇಶನ್ ಏಕೆ ಇರಬೇಕು ? ಸರ್ಕಾರದ ಯಾವುದಾದರೂ ಇಲಾಖೆ ನೋಡಿಕೊಳ್ಳ ಬಹುದಲ್ಲ. ಎಷ್ಟೋ ಹಣ ಉಳಿತಾಯವಾಗುತ್ತದೆ. ಒಟ್ಟಿನಲ್ಲಿ ಕಾರ್ಪೊರೇಷನ್ನಿನಿಂದ ಅವಶ್ಯ ಆಗುವ ಕೆಲಸಗಳು ಆಗದಿದ್ದರೆ, ಅವಶ್ಯ ಹಿತರಕ್ಷಣೆ ಆಗದಿದ್ದರೆ ಕಾರ್ಪೊರೇಶನ್ ಚಲೋ—ಚಳವಳಿ ಹೂಡಬೇಕಾದೀತೆಂದು ವಿಷಾದದಿಂದ ಹೇಳಬಯಸುತ್ತೇನೆ. ಇನ್ನು ಎಲೆಕ್ಟ್ರಿಸಿಟಿ ಬೋರ್ಡ್. ಕಾರ್ಡುಗಳು ಸರಿಯಾಗಿ ಬರುವುದಿಲ್ಲ. ದುಡ್ಡನ್ನು ನೀವೇ ಬಂದು ಕಟ್ಟಬೇಕೆಂದು ಹೇಳುತ್ತಿದ್ದಾರೆ. ಹೀಗಿದ್ದರೆ, ಅಲ್ಲಿ ಅಧಿಕಾರಿಗಳು, ನೌಕರರುಗಳು ಎಲ್ಲಾ ಏತಕ್ಕೆ ಇರಬೇಕು ?

ಇನ್ನು ಟ್ರಸ್ಟ್ ಬೋರ್ಡ್, ಹೌಸಿಂಗ್ ಬೋರ್ಡುಗಳನ್ನು ಜನತೆಯ ವಸತಿ ಸೌಕರ್ಯಕ್ಕಾಗಿ ಯೇನೋ ಮಾಡಿದಿರಿ. ಅಲ್ಲಿ, ಅನ್ಯಾಯ, ಅಕ್ರಮ, ಜಾಗವಿದ್ದವರಿಗೆ ಜಾಗ, ಮನೆ ಇದ್ದವರಿಗೆ ಮನೆ ಇಂಥಾ ಸಂಸ್ಥೆಗಳು ಇದ್ದರೇನು ? ಇಲ್ಲದಿದ್ದರೇನು ? ಇವುಗಳಲ್ಲಿ ಭ್ರಷ್ಟಾಚಾರಕ್ಕೆ ಪುರಸ್ಕಾರ. ಶಿಷ್ಟಾಚಾರಕ್ಕೆ ತಿರಸ್ಕಾರ. ಓಕಳಿಪುರದಲ್ಲಿ ನೌಕರರಿಗೆಂದು ಕಟ್ಟಡ ಕಟ್ಟಿದ್ದಾರೆ. ಅದು ನಿರ್ವಸತಿಯಾಗಿ ಹಲವಾರು ವರ್ಷಗಳಿಂದ ಇದೆ. ಅವುಗಳು 10 ವರ್ಷವಾದರೂ ಖಾಲಿ ಬಿದ್ದಿವೆ. ಹತ್ತು ವರ್ಷಗಳಲ್ಲಿ ಎಷ್ಟು ಹಣ ಬರುತ್ತಿತ್ತು. ಈ ವಿಚಾರದಲ್ಲಿ ಕಾಗದ ಬರೆದರೂ ಸಹ ಒಬ್ಬರೂ ನಿಗಾ ಕೊಡುವುದಿಲ್ಲ ಹೀಗೇಕೆ ಎಂದು ಪ್ರಶ್ನಿಸುತ್ತೇನೆ.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಸರ್ಕಾರದವರು ಹೆಚ್ಚಿನ ನಿಗಾ ತೆಗೆದುಕೊಂಡಿರುವುದಷ್ಟೇ ಅಲ್ಲ, ಹಣವನ್ನೂ ಖರ್ಚು ಮಾಡುತ್ತಿದ್ದಾರೆ. ಆದರೆ ಅವಶ್ಯ ಸಾಮಾನು ಅಂದರೆ (ಟ್ರ್ಯಾಕ್ಟರ್‌ಗಳು ಮುಂತಾದ ಸಾಮಾನುಗಳ ಬಗ್ಗೆ) ಅಧಿಕಾರಿಗಳು ಪಕ್ಷಪಾತ ತೋರಿಸುತ್ತಿದ್ದಾರೆ ಕೆಲವು ಅಧಿಕಾರಿಗಳು ಮಾತ್ರ ಈ ರೀತಿ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಆದ್ದರಿಂದ ವ್ಯವಸಾಯ ಇಲಾಖೆಯತ್ತ ಹೆಚ್ಚು ನಿಗಾ ಕೊಡಬೇಕಾಗಿ ವಿನಂತಿಸುತ್ತೇನೆ.

ಇನ್ನು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದು ಶಿಷ್ಟಾಚಾರವೇ ಆಗಿರುವುದರಿಂದ ಶಿಷ್ಟಾಚಾರದಂತೆ ನಾನೂ ನಡೆಯಬೇಕಾಗಿದೆ. ಎಲ್ಲಾ ಬೆರೆತ ಸಾಮಾನುಗಳೇ ಸಿಗುತ್ತಿರುವ ಈ ಪರಿಸ್ಥಿತಿಯಲ್ಲಿ ಅಪ್ಪಟ ದೊರೆಯುವ ಒಂದೇ ಒಂದು ವಸ್ತು ಅಂದರೆ ಭ್ರಷ್ಟಾಚಾರ. ಯಾರು ತಾ ಭ್ರಷ್ಟ ಎಂದು ಹೇಳುವುದೇ ಕಷ್ಟ. ಕೊಟ್ಟವರೋ, ಕೊಡುವವರೋ ಹುಡುಕುವುದೇ ಕಷ್ಟವಾಗಿರುವುದರಿಂದ ಈ ಬಗ್ಗೆ ಏನು ಹೇಳುವುದೂ ತುಂಬಾ ಕಷ್ಟವಾಗಿದೆ. ಈ ಕಷ್ಟ ನಿವಾರಣೆಗೆ, ಸಾರ್ವಜನಿಕರು ಆಡಳಿತ ವರ್ಗದವರು, ಶಾಸಕರು ಎಲ್ಲರೂ ಶಿಷ್ಟಾಚಾರಿಗಳಾದರೆ ಮಾತ್ರ ಸಾಧ್ಯ.

ಇನ್ನು ಉಳಿತಾಯ ಮತ್ತು ದುಂದು ವ್ಯಯದ ಬಗ್ಗೆ ಸರ್ಕಾರ ಬಣ್ಣ ಬಣ್ಣದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರೂ ಕೂಡ ಎಲ್ಲಾ ಬಣ್ಣದ ರಂಜನೆಯೇ ಆಗಿದೆ. ಸಣ್ಣ ನೌಕರರನ್ನು ಕಡಿಮೆ ಮಾಡುವುದರಿಂದ, ಉಳಿತಾಯವಾಗುವುದಿಲ್ಲ. ದುಂದುವೆಚ್ಚ, ದೊಡ್ಡ ದೊಡ್ಡ ಅಂದರೆ ಸಾವಿರ, ಎರಡು ಸಾವಿರ ರೂಪಾಯಿಗಳ ಸ್ಥಳಗಳನ್ನು ಹುಟ್ಟಿಸಿ ಅಧಿಕಾರಿಗಳನ್ನು ನೇಮಕ ಮಾಡುವುದು, ಛೇರ್ಮನ್ ಹುದ್ದೆಗಳು, ಕೊಟ್ಟಂಥ ಸಾಲಗಳು ಸರಿಯಾಗಿ ವಸೂಲಿಯಾಗದೆ ಇರುವುದು, ಇವೆಲ್ಲಾ

ದುಂದು ವೆಚ್ಚ ಹೋಗಬೇಕು. ದೊಡ್ಡ ಅಧಿಕಾರಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವೈದ್ಯಕೀಯ ಸೌಕರ್ಯ ಸಿಗುತ್ತದೆ. ಬಡ ನೌಕರರಿಗೆ ಸಿಗುತ್ತಿಲ್ಲ. ಇವುಗಳ ಕಡೆ ಹೆಚ್ಚಿನ ನಿಗಾ ಇಟ್ಟು ಉಳಿತಾಯ ಮಾಡಲೆಂದು ಹಾರೈಸುತ್ತೇನೆ.

ಇನ್ನು ಪಬ್ಲಿಸಿಟಿ ಮತ್ತು ಇನ್‌ಫರ್‌ಮೇಷನ್ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚು ಹಣ ಖರ್ಚಾಗುತ್ತಿದೆ. ಸರ್ಕಾರ ಮತ್ತು ಸದಸ್ಯರುಗಳು ಮಾಡುವ ಕೆಲಸಗಳು ಅವರ ಕ್ಷೇತ್ರದ ಜನರಿಗೆ ಮುಟ್ಟಬೇಕು. ಈ ಇಲಾಖೆಗೆ ಕೊಡುವ ಹಣ ಬರೀ ಫೋಟೋಗಳಿಗೆ ಖರ್ಚಾಗುತ್ತಿದೆ. ಈ ಇಲಾಖೆಯವರು ಮಾಡುವ ಕೆಲಸ ಗ್ರಾಮಾಂತರ ಜನರಿಗೆ ಆಗಿಂದಾಗ್ಗೆ ತಿಳಿಯಬೇಕು.

ಇಷ್ಟು ಹೇಳಿದ ಮೇಲೆ ಸಚಿವ ವೃಂದಂ ಸ್ವಸ್ತಿ—ಸರ್ಕಾರಂ ಸ್ವಸ್ತಿ ಎಂದು ಹೇಳಿ ಈ ಸಾಲಿನ ಆಯವ್ಯಯವನ್ನು ಸ್ವಾಗತಿಸಿ, ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸ್ವಾಮಿ, ಸರ್ಕಾರದವರು ನಮ್ಮ ಮುಂದೆ ಇಟ್ಟಿರುವಂತಹ ಈ ಬಡ್ಜೆಟ್ ಏನಿದೆ, ಅದು ಸತ್ಯಾಂಶದಿಂದ ದೂರವಾಗಿದೆ. ಸರ್ಕಾರ ಈಗ ಸುಮಾರು 600 ಕೋಟಿ ರೂಪಾಯಿಗಳನ್ನು ತೀರಿಸಬೇಕಾಗಿದೆ. ಸರ್ಕಾರಕ್ಕೆ 80 ಕೋಟಿ ರೂಪಾಯಿಗಳಷ್ಟು ಬರಬೇಕಾಗಿದೆ. 1965-66ನೇ ಸಾಲಿನಲ್ಲಿ ಮಂಜೂರಾದ ಒಟ್ಟು ಹಣದಲ್ಲಿ 26·47 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಸರ್ಕಾರದವರು 1965-66ರಲ್ಲಿ ಜಾಯಿಂಟ್ ಸ್ಟಾಕ್ ಕಂಪನಿಗಳ ಮೇಲೆ, ಸ್ಟಾಚುಟರಿ ಕಂಪನಿಗಳ ಮೇಲೆ ಒಟ್ಟು 21·57 ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ಹಾಕಿ, ಆ ಹಣಕ್ಕೆ ಬಂದ ಪ್ರತಿಫಲ ಕೇವಲ 7·5 ಲಕ್ಷ ರೂಪಾಯಿಗಳು ಮಾತ್ರ. ಸರ್ಕಾರದವರು ಹಾಕಿರುವ ಹಣಕ್ಕೆ ಬರಬೇಕಾದಂಥ ಪ್ರತಿಫಲ ಬಹಳ ಕನಿಷ್ಟವಾಗಿದೆ. ಸರ್ಕಾರದವರು ಸರಿಯಾದ ವಿವೇಚನೆಯಿಂದ ವಿತರಣೆ ಮಾಡಿಲ್ಲವೆಂದು ಗೊತ್ತಾಗುತ್ತದೆ. ಸರ್ಕಾರದಲ್ಲಿ ಸರಿಯಾದ ದಕ್ಷತೆಯಿಲ್ಲವೆಂದು ಗೊತ್ತಾಗುತ್ತದೆ. ಕಂಪನಿಗಳಿಗೆ ಮತ್ತು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಿಗೆ ಸರ್ಕಾರದವರು ಕೊಟ್ಟಿರುವುದು 46·68 ಕೋಟಿ ರೂಪಾಯಿಗಳು. ಒಟ್ಟು 31 ಕಮರ್ಷಿಯಲ್ ಕನ್‌ಸರನ್‌ಗಳು ಇವೆ. ಲೆಕ್ಕದ ಪ್ರಕಾರ 13 ಕನ್‌ಸರನ್‌ಗಳಲ್ಲಿ ಎಂಟು ಕನ್‌ಸರನ್‌ಗಳು ಲಾಸ್‌ನಲ್ಲಿ ಕೆಲಸ ಮಾಡುತ್ತಿವೆಯೆಂದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಸರ್ಕಾರದವರು ಕೊಟ್ಟಿರುವ ಸಾಲಗಳು ಎಷ್ಟು ವಿಚಿತ್ರವಾಗಿ ವಿನಿಯೋಗವಾಗಿದೆ ಎಂಬುದನ್ನು ನೋಡೋಣ. ಶೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಕೋ-ಅಪರೇಟಿವ್ ಹೌಸಿಂಗ್ ಕಾರ್ಪೊರೇಷನ್‌ಗೆ 340 ಲಕ್ಷ ರೂಪಾಯಿಗಳನ್ನು ಮೂರು ಪರ್‌ಸೆಂಟ್ ಬಡ್ಡಿಯಂತೆ ಸರ್ಕಾರದವರು ಕೊಟ್ಟಿದ್ದಾರೆ. ಈ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಿಲ್ಲದೆ ಹೌಸಿಂಗ್ ಕಾರ್ಪೊರೇಷನ್ ಅವರು ಆ ಹಣವನ್ನು ಬ್ಯಾಂಕ್‌ನಲ್ಲಿ ಡಿಪಾಸಿಟ್ ಇಟ್ಟಿದ್ದಾರೆ. ಈ 340 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಿಂದ ಆರೂವರೆ ಪರ್‌ಸೆಂಟ್‌ನಂತೆ ಸಾಲವಾಗಿ ತೆಗೆದುಕೊಂಡು 92 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಕೊಡುತ್ತಿದ್ದಾರೆ. 1966ರ ಜೂನ್‌ವರೆಗೆ ಈ ಹಣದಲ್ಲಿ ಈ ಕಾರ್ಪೊರೇಷನ್ ಅವರು ಒಂದು ಕಾಸನ್ನೂ ಉಪಯೋಗಿಸಿಲ್ಲ. 1966ರಲ್ಲಿ 122·1 ಲಕ್ಷ ರೂಪಾಯಿಗಳನ್ನು ಮೈಸೂರು ಸ್ಟೇಟ್ ಹೌಸಿಂಗ್ ಬೋರ್ಡ್‌ನವರಿಗೆ ಸಾಲವಾಗಿ ಕೊಟ್ಟಿದ್ದಾರೆ. ಇದರಲ್ಲಿ ಅವರು ಉಪಯೋಗಿಸಿಕೊಂಡಿರುವುದು ಬಹಳ ಕಮ್ಮಿ. ಉಳಿದ ಹಣವನ್ನು ಅವರು ಷೆಡ್ಯೂಲ್ ಬ್ಯಾಂಕ್‌ನಲ್ಲಿ ಡೆಪಾಜಿಟ್ ಇಟ್ಟಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಒಂದು ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ಇದರಲ್ಲಿ ಅವರು 44 ಲಕ್ಷ ರೂಪಾಯಿಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದಾರೆ. ಉಳಿದ ಹಣವನ್ನು ಡಿಪಾಜಿಟ್ ಇಟ್ಟಿದ್ದಾರೆ.

ಇನ್ನು ವ್ಯವಸಾಯದ ಬಗ್ಗೆ ಬಹಳವಾಗಿ ಮಾತನಾಡುವ ಈ ಸರ್ಕಾರದವರು, ಫರ್ಟಿಲೈಸರ್ಸ್ ಕೊಂಡುಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರದವರು ಕೊಟ್ಟ ಒಂದು ಕೋಟಿ ರೂಪಾಯಿಗಳನ್ನು ಯಾವ ರೀತಿ ಉಪಯೋಗಿಸಿಕೊಂಡಿದ್ದಾರೆಂದರೆ, ಅದರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಶಿವಮೊಗ್ಗಾದ ಜಿಲ್ಲಾಧಿಕಾರಿಯವರಿಗೆ ಕೊಟ್ಟರು. ಉಳಿದ ಹಣವನ್ನು ಉಪಯೋಗಿಸಿಕೊಳ್ಳದೆ ಕೇಂದ್ರ ಸರ್ಕಾರಕ್ಕೆ ವಾಪಸ್ಸ್ ಕೊಟ್ಟರು. ಈ ಹಣಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಬಡ್ಡಿ ಕೊಟ್ಟರು. ಶಿವಮೊಗ್ಗಾಕ್ಕೆ ಕೊಟ್ಟ ಎರಡು ಲಕ್ಷ ರೂಪಾಯಿಗಳಲ್ಲಿ, ಅಲ್ಲಿಯ ಜಿಲ್ಲಾಧಿಕಾರಿಯವರು ಕೇವಲ 17 ಸಾವಿರ ರೂಪಾಯಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಫರ್ಟಿಲೈಸರ್ಸ್ ಮತ್ತು ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರು ಕೊಟ್ಟ ಒಂದು ಕೋಟಿ ರೂಪಾಯಿಗಳನ್ನು ವಾಪಸ್ ಕೊಟ್ಟು, ಈಗ ವ್ಯವಸಾಯಕ್ಕೆ ಹೆಚ್ಚು ಹಣ ಬೇಕು ಎಂದು ಕೇಳುತ್ತಿರುವುದು ಆಶ್ಚರ್ಯವಾಗಿ ಕಾಣುತ್ತಿದೆ. ವ್ಯವಸಾಯದ ಇಲಾಖೆಗೆ, ವ್ಯವಸಾಯನ್ನು ಅಭಿವೃದ್ಧಿ

(ಶ್ರೀ ಎಚ್. ಬಿ ಜ್ವಾಲನಯ್ಯ)

ಮಾಡುವುದಕ್ಕೆ ಅದರ ಎಸ್ಟಾಬ್ಲಿಷ್‌ಮೆಂಟ್‌ಖರ್ಚಿಗೆ 1962ರಿಂದ 1966ರವರೆಗೆ 5·64 ಲಕ್ಷರೂಪಾಯಿಗಳನ್ನು ಮಂಜೂರು ಮಾಡಿದ್ದು, ಅದಕ್ಕಿಂತ ಹೆಚ್ಚಾಗಿ ಅಂದರೆ 6·80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗಾಗಿ ಮಂಜೂರು ಮಾಡಿದ್ದು 14½ ಲಕ್ಷ ರೂಪಾಯಿಗಳು. ಖರ್ಚು ಮಾಡಿದ್ದು ಕೇವಲ ಐದು ಲಕ್ಷ ಐದು ಸಾವಿರ ರೂಪಾಯಿಗಳು. ಇದರಲ್ಲಿ ಸಿಬ್ಬಂದಿಗೇ ಅಭಿವೃದ್ಧಿ ಕಾರ್ಯಗಳಿಂತ ಹೆಚ್ಚಾಗಿ ಖರ್ಚು ಮಾಡಿದ್ದಾರೆ. ಹಿಂದಿನಿಂದಲೂ ಇವರು ಹೇಳಿಕೊಂಡು ಬಂದಂತೆ ನಡೆಯಲಿಲ್ಲ. ಯಾವ್ಯಾವ ಯೋಜನೆಗಳಲ್ಲಿ ಕೈಗಾರಿಕೆಗಳಲ್ಲಿಯಾಗಲೀ, ಅಥವಾ ಇತರ ಯಾವ ಪ್ರಾಜೆಕ್ಟುಗಳಿಗಾಗಲೀ ಎಷ್ಟೆಷ್ಟು ಖರ್ಚಾಗಿದೆ ಎಂಬ ಬಗ್ಗೆ ಖಚಿತವಾದ ವಿವರಣೆ ನೀಡಬೇಕೆಂದು ಹಿಂದಿನಿಂದಲೂ ಒತ್ತಾಯ ಮಾಡುತ್ತಿದ್ದರೂ ಇದುವರೆಗೂ ಅದರಿಂದೇನೂ ಪ್ರಯೋಜನವಾಗಲಿಲ್ಲ. ಅವುಗಳ ಬಗ್ಗೆ ಲಾಭ, ನಷ್ಟವೆಷ್ಟಾಯಿತು ಎಂಬುದನ್ನೂ ಸಹ ಇವರು ಸ್ಪಷ್ಟಪಡಿಸಿಲ್ಲ. ಇದರಿಂದ ಏನು ಗೊತ್ತಾಗುತ್ತದೆಂದರೆ, ಈ ಸರ್ಕಾರದ ಆರ್ಥಿಕ ಧೋರಣೆ ನಮ್ಮನ್ನು ಯಾವ ಅಧೋಗತಿಗೆ ತೆಗೆದುಕೊಂಡು ಹೋಗುತ್ತದೆ ಎಂಬುದಾಗಿ ಅರ್ಥವಾಗುತ್ತದೆ.

1-30 P.M.

ಇನ್ನೊಂದು ವಿಚಿತ್ರವಾದ ಸಂಗತಿ. ರಿಜರ್ವ್ ಬ್ಯಾಂಕಿಗೂ ಮತ್ತು ಸ್ಟೇಟ್ ಗೌರ್ನಮೆಂಟಿಗೂ ಓವರ್ ಡ್ರಾಫ್ಟ್ ಅಡ್ವಾನ್ಸ್‌ಗೋಸ್ಕರವಾಗಿ ಒಂದು ಕರಾರು ಆಗಿತ್ತು. ಅದರ ಪ್ರಕಾರ ಒಂದು ವರ್ಷದಲ್ಲಿ ಪ್ರತಿ ಶುಕ್ರವಾರ 25 ಲಕ್ಷ ರೂಪಾಯಿಗಳನ್ನೂ, ಇತರ ದಿನಗಳಲ್ಲಿ 20 ಲಕ್ಷ ರೂಪಾಯಿಗಳನ್ನು Cash Balance ಇಡಬೇಕೆಂಬ ಒಂದು ಕಂಡೀಷನ್ ಇದ್ದರೂ ಆ ಕಂಡೀಷನ್ನನ್ನು ಇವರು 43 ಸಾರಿ ಉಲ್ಲಂಘನೆ ಮಾಡಿದ್ದಾರೆ. ಈಗಾಗಲೇ 110·38 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಕೊಟ್ಟಿದ್ದಾರೆ. ಓ.ಡಿ. ಏನು ಕೊಟ್ಟಿದ್ದಾರೋ ಅದಕ್ಕಿಂತಲೂ ಹೆಚ್ಚಿಗೆ ಹಣವನ್ನು ಕಟ್ಟದೇ ಇದ್ದರೂ, ಕರಾರಿನ ಪ್ರಕಾರ ಎಷ್ಟು ಹಣವನ್ನು ಅಲ್ಲಿ ಇಡಬೇಕಾಗಿತ್ತೋ ಅದು 277 ಸಾರಿ ಕಡಿಮೆಯಾಗಿತ್ತು. ಈಗಾಗಲೇ ಮತ್ತೆ 70 ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಕೊಟ್ಟಿದ್ದಾರೆ. ಈಗಾಗಿರತಕ್ಕ ಷಾರ್ಟ್ ಫಾಲನ್ನು ಭರ್ತಿ ಮಾಡುವುದಕ್ಕೋಸ್ಕರ 19.90 ಕೋಟಿ ರೂಪಾಯಿಗಳನ್ನು ಅಲ್ಲಿ ಕಟ್ಟಬೇಕಾಗಿದೆ. ಅದಕ್ಕಾಗಿ ಗೌರ್ನಮೆಂಟ್ ಸೆಕ್ಯೂರಿಟಿಗಳನ್ನು ಮಾರಾಟ ಮಾಡಿದ್ದಾರೆ. ಈಗ ಅದರಲ್ಲಿ 17 ಕೋಟಿ 59 ಲಕ್ಷ ರೂಪಾಯಿಗಳಷ್ಟು ದುಡ್ಡು ಬೇಕು ಎಂದು ಹೇಳುವ ಸರ್ಕಾರ ಯಾವ ರೀತಿಯಲ್ಲಿ ಮುಂದೆ ಈ ಹಣವನ್ನು ತರಬಯಸುವುದಕ್ಕೆ ಪ್ರಯತ್ನ ಮಾಡುತ್ತದೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಿಜವಾಗಿ ಈ ಸರ್ಕಾರಕ್ಕೆ ಅಷ್ಟೊಂದು ಹಣವನ್ನು ಮುಂದೆ ಭರ್ತಿ ಮಾಡಲು ಸಾಧ್ಯವೇ ಎಂದು ಕೇಳುತ್ತೇನೆ. ಅದರ ಜೊತೆಗೆ ಸರ್ಕಾರೀ ನೌಕರರ ಪ್ರಾವಿಡೆಂಟ್ ಫಂಡ್‌ನಲ್ಲಿರತಕ್ಕ ಡಿಪಾಜಿಟ್ 21 ಕೋಟಿ 69 ಲಕ್ಷ ರೂಪಾಯಿಗಳನ್ನೂ ಮತ್ತು ಇತರ ಡಿಪಾಸಿಟ್ 61 ಕೋಟಿ 36 ಲಕ್ಷ ರೂಪಾಯಿಗಳನ್ನು ಜನರಲ್ ಕ್ಯಾಷಿಗೆ ಮರ್ಜ್ ಮಾಡಿದ್ದಾರೆ. ಈ ದುಡ್ಡಿನಿಂದ ಇವರು ಯಾವ ರೀತಿ ದೊಂಬರ ಆಟವನ್ನು ಆಡುತ್ತಿದ್ದಾರೆಂಬುದನ್ನು ನೋಡಬಹುದು. ಸೆಕ್ಯೂರಿಟಿ ಹಣ ಹಾಗೂ ನೌಕರರ ಪ್ರಾವಿಡೆಂಟ್ ಫಂಡ್ ಮತ್ತು ಇತರ ಡಿಪಾಸಿಟ್ಟುಗಳನ್ನು ಯಾವ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆಂಬುದನ್ನು ನಾನು ಇಲ್ಲಿ ವಿವರಿಸಿ ಹೇಳುತ್ತಿದ್ದೇನೆ. ಅದರ ಜೊತೆಗೆ ಓಪನ್ ಮಾರ್ಕೆಟ್ಟಿನಲ್ಲಿ ಪಡೆದ ಸಾಲದ ಕ್ಷೇಮಕ್ಕಾಗಿ ಸಿಂಕಿಂಗ್ ಫಂಡನ್ನು ಪ್ರಾರಂಭಿಸಿ ಅದರ ಪೈಕಿ 26 ಕೋಟಿ ರೂಪಾಯಿಗಳಲ್ಲಿ, 20 ಕೋಟಿ ರೂಪಾಯಿಗಳ ಸೆಕ್ಯೂರಿಟಿಗಳಲ್ಲಿ 6-8 ಕೋಟಿ ರೂಪಾಯಿಗಳನ್ನು ಜನರಲ್ ಕ್ಯಾಷಿಗೆ ಮರ್ಜ್ ಮಾಡಿದ್ದಾರೆ. ಈಗಿರುವ ಪ್ರಕಾರ ಯಾವ ರೀತಿ ಹಣದ ಚಿತ್ರವನ್ನು ನಮ್ಮ ಮುಂದೆ ತೋರಿಸಿದ್ದಾರೆ ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಹಿಂದಿನ ಚಿತ್ರವೇ ಬೇರೆ, ಈಗ ನೀಡಿರುವ ಚಿತ್ರವೇ ಬೇರೆ.

ಇನ್ನು ಸರ್ಕಾರ ನಡೆಸುತ್ತಿರುವ ಕೈಗಾರಿಕೆಗಳ ನೀತಿ ಹೇಗಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಬೆಂಗಳೂರು ಡೈರಿಗಾಗಿ 2 ಕೋಟಿ ರೂಪಾಯಿಗಳನ್ನು ಇವರು ಖರ್ಚು ಮಾಡುವಾಗ ಒಂದು ದಿವಸಕ್ಕೆ 10 ಸಾವಿರ ಲೀಟರುಗಳಷ್ಟು ಹಾಲನ್ನು ಪಡೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇದರಿಂದ ನನಗೆ ಆಶ್ಚರ್ಯವಾಗುತ್ತದೆ. ಇದು ನಾಚಿಕೆಗೇಡು. ಕೇವಲ 25 ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿ ಖಾಸಗೀ ಕ್ಷೇತ್ರದವರ್‍ಯಾರಾದರೂ ಈ ಯೋಜನೆಯನ್ನು ಕೈಗೊಂಡಿದ್ದರೆ ಇಷ್ಟು ಹಾಲನ್ನು ಬಹು ಸುಲಭವಾಗಿ ಪಡೆಯಬಹುದಾಗಿತ್ತು. ಕೆಲವು ಕಡೆ ಹಾಲಿನ ಖರ್ಚಿಗಿಂತ ಪೆಟ್ರೋಲ್ ಬಗ್ಗೆ ಜಾಸ್ತಿ ಖರ್ಚಾಗಿರುತ್ತದೆ. ಹಿಂದೆ ಸಕ್ಕರೆ ಕಾರ್ಖಾನೆಯನ್ನು ಮಂಡ್ಯದಲ್ಲಿ ಸ್ಥಾಪನೆ ಮಾಡಿದ್ದಾರೆ. ಈ ಪುಣ್ಯಾತ್ಮರು ಬಂದಿದ್ದೇ ಆ ಸಕ್ಕರೆ ಕಾರ್ಖಾನೆ ಮುಚ್ಚಿಹೋಯಿತು.

ಗೌರಿಬಿದನೂರಿನಲ್ಲಿ ಇರತಕ್ಕ ಸಕ್ಕರೆ ಕಾರ್ಖಾನೆ ಅಷ್ಟು ಚೆನ್ನಾಗಿ ನಡೆಯುತ್ತಾ ಇಲ್ಲ. ಕಾಂಪ್ಲಿಯಲ್ಲಿರತಕ್ಕ ಸಕ್ಕರೆ ಕಾರ್ಖಾನೆಯೂ ಸಹ ಮುಚ್ಚಿಹೋಯಿತು. ಇದಕ್ಕಿಂತಲೂ ಅತಿ ವಿಚಿತ್ರವಾದುದು ಇನ್ನೊಂದು ಇದೆ. ಬೆಳಗೊಳದಲ್ಲಿ ಒಂದು ಸಲ್ಫ್ಯೂರಿಕ್ ಆಸಿಡ್ ಫ್ಯಾಕ್ಟರಿ ಇದೆ. ಆ ಕಾರ್ಖಾನೆಯನ್ನು ಅತ್ಯುತ್ತಮ ಕಾರ್ಖಾನೆಯನ್ನಾಗಿ ಮಾಡಬೇಕೆಂದು ದಕ್ಷತೆಯುಳ್ಳ ಕೆಲಸಗಾರರೂ ಹಾಗೂ ಟೆಕ್ನಿಷಿಯನ್ಸ್ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹ ಕಾರ್ಖಾನೆಯನ್ನು ಮುಚ್ಚುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದು ಸರಿಯಲ್ಲ.

ಇನ್ನು ಪಿ.ಡಬ್ಲ್ಯು.ಡಿ. ಇಲಾಖೆ ಸರ್ಕಾರದ ಬಹು ಪಾಲಿನ ಹಣವನ್ನು ಖರ್ಚು ಮಾಡುತ್ತಾ ಇದೆ. ಅದು ಶ್ರೀಮಾನ್ ರಾಜಗೋಪಾಲಾಚಾರಿಯವರು ಹೇಳಿದ ಹಾಗೆ ಪಿ.ಡಬ್ಲ್ಯು.ಡಿ. ಶಾಖೆ ಎನಿಮಿ ನಂಬರ್ ಒಂದು ಎನ್ನುವುದು ಸಹಜವಾಗಿದೆ. ಕೋಟ್ಯಾಂತರ ರೂಪಾಯಿಗಳ ಲೆಕ್ಕವನ್ನು ಸರಿಯಾಗಿ ಇಟ್ಟಿಲ್ಲ. ಎಷ್ಟು ಹಣವನ್ನು ಖರ್ಚುಮಾಡುತ್ತಾ ಇದ್ದರೂ ಫೈನಾನ್ಷಿಯಲ್ ಡಿಸಿಪ್ಲಿನ್ ಎಂಬುದೇ ಅಲ್ಲಿ ಕಾಣುತ್ತಾ ಇಲ್ಲ. ಅಕೌಂಟೆಂಟ್ ಜನರಲ್ ಎಷ್ಟೋ ಆದೇಶವಿತ್ತರೂ ಕೆಲವು ಚೀಫ್ ಕಂಟ್ರೋಲಿಂಗ್ ಆಫೀಸರ್ ಅವರು ಪಿ.ಡಬ್ಲ್ಯು.ಡಿ. ಶಾಖೆಯವರನ್ನು ಲೆಕ್ಕ ಕೊಟ್ಟಿಲ್ಲ. ಅಕೌಂಟೆಂಟ್ ಜನರಲ್ ಆಫೀಸಿನಿಂದ ಪಿ.ಡಬ್ಲ್ಯು.ಡಿ. ಶಾಖೆಯವರು ಲೆಕ್ಕಗಳನ್ನು ಕೊಟ್ಟಿಲ್ಲವೆಂದು ಆಕ್ಷೇಪಣೆಯನ್ನು ಮಾಡುತ್ತಿದ್ದರೂ ಸರ್ಕಾರ ಆ ವಿಷಯದಲ್ಲಿ ಮೌನವಾಗಿದೆ. ಸರ್ಕಾರದ ಅನೇಕ ಕಾರ್ಖಾನೆಗಳಲ್ಲಿ ಎಷ್ಟೋ ಹಣದ ಮೂಲ ಬಂಡವಾಳವನ್ನು ಹಾಕಿದ್ದರೂ ಕೂಡ ಅವುಗಳನ್ನು ನಡೆಸುವ ಅಧಿಕಾರಿಗಳಿಗೆ ಬಿಸಿನೆಸ್ ಆಟಿಟ್ಯೂಡ್, ಇಂಡಸ್ಟ್ರಿಯಲ್ ಆಟಿಟ್ಯೂಡ್ ಎಂಬುದೇ ಇಲ್ಲ. ತಮಗೆ ಎಷ್ಟು ಬೇಕೋ ಅಷ್ಟು ಕೆಲಸ ಮಾಡುತ್ತಾರೆ. ತಮಗೆ ಯಾರು ಶಿಫಾರ್ಸು ಮಾಡುತ್ತಾರೋ ಅವರ ಬಗ್ಗೆ ತಮ್ಮ ಇಷ್ಟ ಬಂದಂತೆ ನಡೆಯುತ್ತಿದ್ದಾರೆ. ಇದೇರೀತಿ ಕಾರ್ಖಾನೆಗಳು ಮುಂದುವರಿದರೆ ನಿಜವಾಗಿ ಇನ್ನು 10 ವರ್ಷಗಳಲ್ಲಿ ಅನೇಕ ಕಾರ್ಖಾನೆಗಳು ದಿವಾಳಿಯಾಗುವುದು ಖಂಡಿತ ಎಂದು ನಾನು ಹೇಳುತ್ತೇನೆ.

ಇನ್ನು ಆಹಾರ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ನಮ್ಮ ಆರ್ಥಿಕ ಮಂತ್ರಿಗಳು ಹಾಗೂ ಆಹಾರ ಮಂತ್ರಿಗಳು ಹೇಳಿದರು. ಒಂದು ವಿಚಾರವನ್ನು ಆಹಾರ ಮಂತ್ರಿಗಳಿಗೂ, ಆರ್ಥಿಕ ಮಂತ್ರಿಗಳಿಗೂ ಹಾಗೂ ಮುಖ್ಯ ಮಂತ್ರಿಗಳಿಗೂ ಹೇಳಬೇಕಾಗಿದೆ. ನಮ್ಮ ಕ್ಷೇತ್ರಕ್ಕೆ ಒಂದು ಕಡೆ ಒದಗಿಸಿದ ಅರ್ಧ ಕ್ವಿಂಟಾಲ್ ಅಕ್ಕಿಯಲ್ಲಿ ಎಷ್ಟರಮಟ್ಟಿಗೆ ಕಲ್ಲುಗಳನ್ನು ಬೆರೆಸಿದ್ದಾರೆಂಬುದನ್ನು ತಾವು ನೋಡಬೇಕು (ಕಲ್ಲುಗಳು ಬೆರೆತಿರತಕ್ಕ ಒಂದು ಚೀಲವನ್ನು ಸಭೆಯಲ್ಲಿ ತೋರಿಸಿದರು). ಇಂತಹ ಅಕ್ಕಿಯನ್ನು ಜನಗಳಿಗೆ ಹಂಚುತ್ತೀರಿ. ಸರ್ಕಾರ ಬೆರಸುವ ಕಲ್ಲುತಯಾರಿಸುವ ಕೈಗಾರಿಕೆಗೆ ಲೈಸೆನ್ಸ್ ಕೊಟ್ಟಿದ್ದಾರೆ. ಇದರ ಜೊತೆಗೆ ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟುಗಳ ಬಗ್ಗೆ ಡೊನೇಷನ್ಸ್ ತಗೆದುಕೊಳ್ಳುವುದು ಬೇರೆ. ಇದರಿಂದ ಬಡಮಕ್ಕಳು ವಿದ್ಯಾರ್ಥಿಗಳಾಗಿ ಓದುವುದಕ್ಕೆ ಸಾಧ್ಯವಿಲ್ಲ. ಮೆರಿಟ್ ಸ್ಟೂಡೆಂಟ್ಸ್ ಬೇರೆ ಕಡೆ ಇರುತ್ತಾರೆ. ಆದರೆ ಶೇಕಡ 35ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಬರತಕ್ಕ ಅನೇಕ ಹುಡುಗರಿಗೆ ಅವಕಾಶವಿಲ್ಲದೇ ಇರುವ ರೀತಿಯಲ್ಲಿ ಸೀಟುಗಳನ್ನು ಹಂಚುತ್ತಾರೆ. ವಿದ್ಯಾ ಇಲಾಖೆಯಲ್ಲಿ ಬಡಜನರ ರಕ್ತವನ್ನು ಹೀರುತ್ತಿದ್ದಾರೆ. ವಿದ್ಯಾ ಸಾಹಿತ್ಯ ಸರಸ್ವತಿ ಇರತಕ್ಕ ಸ್ಥಳದಲ್ಲಿ ಆಶಾ ಪಿಶಾಚಿ ಎಂಬುದು ತಾಂಡವನೃತ್ಯ ಮಾಡುತ್ತಿದೆ. ಹಾಸನ ಕಾಲೇಜುಗಳಲ್ಲಿ ಪಿ.ಯು.ಸಿ.ಗೆ ಹಾಗೂ ಡಿಗ್ರಿಗಳಿಗೆ ಸೀಟುಗಳೇ ಇಲ್ಲ. ವಿದ್ಯಾರ್ಥಿಗಳು ಸೀಟಿಗಾಗಿ ತುಂಬಾ ತೊಂದರೆಪಡುತ್ತಿದ್ದಾರೆ.

ಇನ್ನು ಎಂ. ಎಸ್. ಆರ್. ಟಿ. ಸಿ. ಯವರು ಹಾಸನ ಡಿವಿಷನ್ನಿನಲ್ಲಿ ಬಸ್ಸುಗಳ ರಾಷ್ಟ್ರೀಕರಣ ಮಾಡುವ ಸಂದರ್ಭದಲ್ಲಿ ಮಾನ್ಯ ಶ್ರೀ ಜತ್ತಿಯವರ ಮುಖ್ಯ ಮಂತ್ರಿಗಳಾಗಿದ್ದರು. ಅವತ್ತೂ ಸಾರಿಗೆ ಸಂಪರ್ಕದ ಬಗ್ಗೆ ಹಾಸನ ಡಿವಿಜನ್ನಿನಲ್ಲಿ ಆದ್ಯತೆ ಕೊಡುತ್ತೇವೆಂದು ಭರವಸೆ ಕೊಟ್ಟಿದರು. ಆಗ 162 ಲೈನುಗಳನ್ನು ರಾಷ್ಟ್ರೀಕಾರಣ ಮಾಡಿದರು. ಅದು ಈಗ 113-114ಕ್ಕೆ ಇಳಿದಿದೆ. ಎಲ್ಲೆಲ್ಲಿ ಲಾಭ ಬರುತ್ತದೋ ಆ ಲೈನುಗಳಲ್ಲಿ ಮಾತ್ರ ಓಡಿಸುತ್ತಿದ್ದಾರೆ. ಇನ್ನು ಪ್ರೈವೇಟ್ ಬಸ್ಸುಗಳು ಓಡುತ್ತಿದ್ದ ರಸ್ತೆಯಲ್ಲಿ ಸರ್ಕಾರೀ ಬಸ್ಸುಗಳನ್ನು ಸಹ ಅಂತಹ ಕಡೆಗಳಲ್ಲಿ ನಡೆಸುತ್ತಾ ಇಲ್ಲ. ಆದ್ದರಿಂದ ಈ ಸರ್ಕಾರೀ ಬಸ್ಸುಗಳ ವ್ಯವಸ್ಥೆ ತುಂಬಾ ಅವ್ಯವಸ್ಥೆಯಿಂದ ಕೂಡಿದೆ. ಬೆಂಗಳೂರು ಡಿಪೋವಿನಲ್ಲಿ ಯಂತ್ರ ಸಾಮಗ್ರಿಗಳನ್ನು ಕೊಂಡುಕೊಳ್ಳುವುದೇ ಇಲ್ಲ. ಬರೀ ಓಚರ್ಸ್ ಮಾತ್ರ ಬರುತ್ತಿವೆ ಎಂಬುದಾಗಿ ಅನೇಕ ಜನರು ಆಡಿಕೊಳ್ಳುತ್ತಿದ್ದಾರೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ವಿಷಯ. ಮಾನ್ಯಮಂತ್ರಿಗಳು ಬಹಳ ಚೆನ್ನಾಗಿ ಅವರ ಭಾಷಣದಲ್ಲಿ ಮಾತನಾಡುತ್ತಾ ಈಗಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ್ತೇವೆಂದು ಹೇಳಿದರು. ಈಗಿನ ಸಂದರ್ಭದಲ್ಲಿ ಅವರು ಮಾಡಿರತಕ್ಕ ವ್ಯವಸ್ಥೆ ಏನೇನೂ ಸಾಲದು. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 1965-66ರಲ್ಲಿ 1,14,767 ಇತ್ತು. 1966-67ರಲ್ಲಿ,

(ಶ್ರೀ ಎಚ್. ಬಿ. ಜ್ವಾಲನಯ್ಯ)

1,33,054ಕ್ಕೆ ಏರಿದೆ. ಸುಮಾರು 2½ ಲಕ್ಷ ಜನರಿಗೆ ಉದ್ಯೋಗವಿಲ್ಲ. ಕೇವಲ 37 ಸಾವಿರ ಜನರಿಗೆ ನೌಕರಿಗಳನ್ನು ಕೊಟ್ಟಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳೇ ಇಷ್ಟು ಜನರು ಇರುವಾಗ ಇನ್ನು ಅವಿದ್ಯಾವಂತ ನಿರುದ್ಯೋಗಿಗಳು ಇನ್ನೆಷ್ಟು ಜನರಿದ್ದಾರೆಂಬುದನ್ನು ಯೋಚಿಸಬೇಕು. ಈ ನಿರುದ್ಯೋಗ ಸಮಸ್ಯೆ ಹಾಗೂ ಹಸಿವು ಇವುಗಳನ್ನು ಈಗಲೇ ಸರ್ಕಾರ ತಡೆಯುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡದಿದ್ದರೆ ಅವು ಇವರನ್ನೆಲ್ಲಾ ನುಂಗೀತು, ತಿಂದೀತು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).—ಮಾನ್ಯ ಅಧ್ಯಕ್ಷರೆ, 1967-68 ನೇ ಸಾಲಿನ ಬಜೆಟ್ಟನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನೂ, ಕೆಲವು ಸೂಚನೆಗಳನ್ನೂ ಮಾಡಲು ನಾನು ಇಚ್ಛಿಸುತ್ತೇನೆ. ಈಗ ಜನತೆಗೆ ಆಹಾರಧಾನ್ಯಗಳ ಕೊರತೆ ಬಹಳ ದೊಡ್ಡದಾಗಿದೆ. ಆದರೆ ಈಗ 5—6 ವರ್ಷಗಳಿಂದ ವ್ಯವಸಾಯದಲ್ಲಿ ಏನೂ ಪ್ರಗತಿ ಆಗಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಲಿಫ್ಟ್ ಇರಿಗೇಷನ್ ಮಾಡಬೇಕಾದರೆ ಸರ್ಕಾರದವರು ಪ್ಲಾನು ಮತ್ತು ಎಸ್ಟಿಮೇಟ್ ಮಾಡಬೇಕಾಗಿದ್ದರೆ 2—3 ವರ್ಷಗಳನ್ನು ತೆಗೆದುಕೊಂಡರು. ಈ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗಿ ಈ ಬಜೆಟ್ಟಿನಲ್ಲಿ ಹಣವನ್ನು ಮಂಜೂರು ಮಾಡಬೇಕಾಗಿತ್ತು. ನನ್ನ ಏರಿಯಾದಲ್ಲಿ ಆದರೆ ಒಂದು ಲಿಫ್ಟ್ ಇರಿಗೇಷನ್ ಯೋಜನೆಗಾದರೂ ಈ ಬಜೆಟ್ಟಿನಲ್ಲಿ ಮಂಜೂರಾತಿಯನ್ನು ಕೊಟ್ಟು ಹಣವನ್ನು ಒದಗಿಸಿಲ್ಲ. ಇದರ ಸಲುವಾಗಿ ನನಗೆ ವ್ಯಥೆಯಾಗುತ್ತಿದೆ. ಕೃಷ್ಣಾನದಿಯ ತೀರದಲ್ಲಿರುವ ಪ್ರದೇಶ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಅಲ್ಲಿ ಸುಮಾರು 46 ಹಳ್ಳಿಗಳಿಗೆ 20 ಸಾವಿರ ಎಕರೆಗಳಿಗೆ ಇರಿಗೇಷನ್ ಸೌಲಭ್ಯ ಸಿಕ್ಕುವುದು ಇದೆ. ಸುಮಾರು 20 ವರ್ಷಗಳಾದರೂ ಸಹ ಆ ಯೋಜನೆಯನ್ನು ಮಾಡದೆ ಇಲ್ಲಿಯ ತನಕ ಹಾಗೆಯೇ ಇವೆ. ಇದು ಬಹಳ ವಿಷಾದದ ಸಂಗತಿ, ಏತಕ್ಕೆಂದರೆ, ಏತಕ್ಕೆಂದರೆ ನನ್ನ ಸರಿಯಾದಲ್ಲಿ ಮಳೆಯ ಅಭಾವ ಬಹಳ ಇದೆ. ಇದರ ಸಲುವಾಗಿ ಸರ್ಕಾರದವರು ಮೊದಲು ಒಂದು ಯೋಜನೆಯನ್ನು ಹಾಕಿದ್ದರು. ಅದು ಇಲ್ಲಿಯ ತನಕ ಕಾರ್ಯಗತ ಆಗಿಲ್ಲ. ಆದ್ದರಿಂದ ಈಗ ಅಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಾಡಿ ಅದನ್ನು ಕಾರ್ಯಗತ ಮಾಡಿದರೆ, ಆ ಪ್ರದೇಶದ ರೈತರಿಗೆ ನೀರಾವರಿ ಸೌಲಭ್ಯ ದೊರೆತು ಅವರು ಜೋಳವನ್ನು ಬೆಳೆದು ಇಡೀ ಮೈಸೂರು ದೇಶಕ್ಕೆ ಒದಗಿಸಬಹುದು. ಆ ಪ್ರದೇಶವನ್ನು ಜೋಳದ ಕಣಜ ಎಂದು ಕರೆಯಬಹುದು ಎಂದು ಅನಿಸುತ್ತದೆ. ಏತಕ್ಕೆಂದರೆ ಅಲ್ಲಿ ಜೋಳದ ಉತ್ಪತ್ತಿ ಹೆಚ್ಚಿಗೆ ಇದೆ. ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಿದರೆ ಜೋಳವನ್ನು ಇಡೀ ಮೈಸೂರು ಸ್ಟೇಟಿಗೆ ಹಂಚುವ ಯೋಜನೆ ಇದೆ. ಅದರ ಸಲುವಾಗಿ ದಯವಿಟ್ಟು ಸರ್ಕಾರದವರು ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಗೆ ಸರಿಯಾಗಿ ಗೊಬ್ಬರವನ್ನು ಕೊಡದೆ, ತಕಾವಿ ಸಾಲವನ್ನು ಕೊಡದೆ ಬೀಜವನ್ನು ಕೊಡದೆ ಆಹಾರ ಧಾನ್ಯವನ್ನು ಮಾತ್ರ ಬೆಳೆಯಿರಿ ಎಂದು ಹೇಳಿದರೆ ಹೇಗೆ ? ರೈತರಿಗೆ ಗೊಬ್ಬರ ಮತ್ತು ತಕಾವಿ ಸಾಲ, ಬೀಜ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು ಬರಿ ಬಾಯಲ್ಲಿ ಮಾತ್ರ ನಡೆದಿದೆ. ಕಾಳಸಂತೆಗಾರರು ರೈತರಿಗೆ ಮೋಸಮಾಡುವುದಕ್ಕೆ ಹತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವವರು ಹೆಚ್ಚು ಗಮನ ಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಈಗ ಮಾನ್ಯ ಸದಸ್ಯರು ಹೇಳಿದ್ದನ್ನು ನೋಟ್ ಮಾಡಿಕೊಳ್ಳಲು ಯಾರೂ ಮಂತ್ರಿಗಳು ಇಲ್ಲವೇ ಇಲ್ಲ. ಅವರು ಯಾರಿಗೆ ಹೇಳಬೇಕು ?

ಶ್ರೀಮತಿ ಚಂಪಾಬಾಯಿ ಭೋಗಲೆ.—ಕಾಂಗ್ರೆಸ್ ಸದಸ್ಯರು ಅದರಲ್ಲಿಯೂ ಹೆಣ್ಣುಮಕ್ಕಳು ಮಾತನಾಡುವಾಗ ಮಾನ್ಯ ವಿರೋಧಪಕ್ಷದ ಸದಸ್ಯರು ಸ್ವಲ್ಪ ಸಹಕಾರ ಮಾಡಬೇಕು. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ದೇಶದ ಹಿತದ ಸಲುವಾಗಿ ಮಾನ್ಯಸದಸ್ಯರು ಮಾತನಾಡದೇ ಕುಳಿತುಕೊಳ್ಳಬೇಕು, ನಾನು ಹೇಳುವುದನ್ನು ಶಾಂತಿಯಿಂದ ಕೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ ನಾನು ಲಿಫ್ಟ್ ಇರಿಗೇಷನ್ನಿನ ವಿಷಯವನ್ನು ಹೇಳುತ್ತಿದ್ದೆ. ಲಿಫ್ಟ್ ಇರಿಗೇಷನ್ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಅದಕ್ಕೆ ಹಣವನ್ನು ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ ಕ್ಲಾಸ್ಸಿಗೆ ಸಂಬಂಧಪಟ್ಟಹಾಗೆ ಏನೇನು ಯೋಜನೆಗಳನ್ನು ಸರ್ಕಾರದವರು ಮಾಡಿದ್ದಾರೆಯೋ ಅವುಗಳನ್ನು ಕಾರ್ಯಗತ ಮಾಡಿಲ್ಲ. ನಾನು ಬಹಳ ವಿಷಾದದಿಂದ ಈ ವಿಷಯವನ್ನು ಹೇಳಬೇಕಾಗಿದೆ. ಏತಕ್ಕೆಂದರೆ ಪ್ರತಿಯೊಂದು ಷೆಡ್ಯೂಲ್ ಕಾಸ್ಟಿನವರಿಗೆ ಸಂಬಂಧಪಟ್ಟ ಹಾಗೆ ಯಾವುದೇ ಯೋಜನೆಗಳನ್ನು ಮಾಡಿ ಅದಕ್ಕೆ ಹಣವನ್ನು ಒದಗಿಸಿದ್ದರೂ ಕೂಡ ಅದು ಹರಿ

ಜನರಿಗೆ ಎಷ್ಟರ ಮಟ್ಟಿಗೆ ಮುಟ್ಟಿ ಅವರಿಗೆ ಅನುಕೂಲವಾಗಬೇಕೋ ಅಷ್ಟರ ಮಟ್ಟಿಗೆ ಮುಟ್ಟಿಲ್ಲ. ಅವರಿಗೆ ಅನುಕೂಲವಾಗಿಲ್ಲ. ಹರಿಜನರಿಗೆ ಕೊಟ್ಟ ಹಣ ದುರುಪಯೋಗವಾಗಿದೆ ಮತ್ತು ಕೆಲವು ಕೊಟ್ಟ ಹಣ ಲ್ಯಾಪ್ಸ್ ಆಗಿವೆ. ಎಷ್ಟೋ ಸಂದರ್ಭಗಳಲ್ಲಿ ಹರಿಜನರಿಗಾಗಿ ಕೊಟ್ಟಂತಹ ಹಣ ಖರ್ಚಾಗದೆ ಅದು ಸರ್ಕಾರಕ್ಕೆ ಜಮಾ ಆಗುತ್ತಿದೆ. ಇಂಥಾ ಒಂದು ಪರಿಸ್ಥಿತಿ ಇದೆ.

ಇನ್ನು ಮೈಸೂರು ರಾಜ್ಯಕ್ಕೆಲ್ಲಾ ಒಂದೇ ಕಾನೂನು ಇರಬೇಕು, ಈ ರೀತಿ ಮೈಸೂರು ರಾಜ್ಯಕ್ಕೆಲ್ಲಾ ಒಂದೇ ಒಂದು ಕಾನೂನು ಇರಬೇಕೆಂದು ನಾನು 3-4 ಸಲ ಅಸೆಂಬ್ಲಿಯಲ್ಲಿ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಈ ಬಗ್ಗೆ ಸರ್ಕಾರಕ್ಕೂ ಕೂಡ ನಾನು ಬರೆದಿದ್ದೇನೆ. ಆದಕ್ಕೆ ನನಗೆ ಸರ್ಕಾರದಕಡೆಯಿಂದ ಇನ್ನೂ ಉತ್ತರ ಬಂದಿಲ್ಲ. ಹೈದರಾಬಾದ್ ಕರ್ಣಾಟಕಕ್ಕೆ ಒಂದು ಕಾಯಿದೆ, ಬೊಂಬಾಯಿ ಕರ್ನಾಟಕಕ್ಕೆ ಒಂದು ಕಾಯಿದೆ ಕೂರ್ಗಿಗೆ ಒಂದು ಕಾಯಿದೆ, ಹಳೇ ಮೈಸೂರಿಗೆ ಒಂದು ಕಾಯಿದೆ ಅನ್ವಯಿಸುವಂಥಾದ್ದು ಬಹಳ ಕೆಡುಕಾಗಿದೆ ಅನಿಸುತ್ತದೆ. ಏತಕ್ಕೆಂದರೆ ಷೆಡ್ಯೂಲ್ ಕ್ಯಾಸ್ಟಿನವರ ಹಾಸ್ಟಲಿನಲ್ಲಿ ಗ್ರ್ಯಾಂಟು ಕೊಡುವಾಗ ಒಬ್ಬ ಹುಡುಗನಿಗೆ ಅಥವಾ ಒಬ್ಬ ವಿದ್ಯಾರ್ಥಿಗೆ ಹಳೆಯ ಮೈಸೂರು ಕಾನೂನು ಪ್ರಕಾರ ಒಂದು ತಿಂಗಳಿಗೆ 25 ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಾರೆ. ಆದರೆ ಬೊಂಬಾಯಿ ಕರ್ನಾಟಕದ ಕಾನೂನು ಪ್ರಕಾರ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ 18 ರೂಪಾಯಿಗಳ ಗ್ರ್ಯಾಂಟನ್ನು ಕೊಡುತ್ತಾರೆ. ಇದರ ಸಲುವಾಗಿ ಬೊಂಬಾಯಿ ಕರ್ನಾಟಕದ ಕಾನೂನು ಮತ್ತು ಹಳೆಯ ಮೈಸೂರು ಕಾನೂನು ಎಲ್ಲಾ ಒಂದೇ ಕಾನೂನು ಮಾಡಿ ಎಲ್ಲರಿಗೂ ಒಂದೇ ಕಾನೂನು ಅನ್ವಯಿಸುವ ಹಾಗೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. 10 ವರ್ಷಗಳಿಂದ ಇಲ್ಲಿಯ ತನಕ ರಾಜ್ಯಕ್ಕೆಲ್ಲಾ ಅನ್ವಯಿಸುವ ಹಾಗೆ ಒಂದೇ ಕಾನೂನು ಮಾಡಿಲ್ಲ. ನಿಜವಾಗಿಯೂ ಇದು ಬಹಳ ವಿಷಾದದ ಸಂಗತಿಯಾಗಿದೆ. 20 ವರ್ಷಗಳ ಅವಧಿಯಲ್ಲಿ ಅಸ್ಪೃಶ್ಯತೆ ಹೋಗುತ್ತದೆ ಎಂದು ನಾವೇನು ತಿಳಿದುಕೊಂಡಿದ್ದೆವು ಅದು ಇನ್ನೂ ಸಂಪೂರ್ಣವಾಗಿ ಹೋಗಿಲ್ಲ. ಹರಿಜನರ ಉದ್ಧಾರ ಎಷ್ಟರ ಮಟ್ಟಿಗೆ ಆಗಬೇಕಾಗಿತ್ತೋ ಅಷ್ಟರ ಮಟ್ಟಿಗೆ ಆಗಿಲ್ಲ ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಈ ಮಾನ್ಯ ಸಭೆಯಲ್ಲಿ ಮಹಾತ್ಮ ಗಾಂಧೀಜಿಯವರ ಫೋಟೋ ಇದೆ, ಪಂಡಿತ ನೆಹರೂ ಅವರ ಫೋಟೋ ಇದೆ, ಆದರೆ ಡಾ. ಅಂಬೇಡ್ಕರ್ ಅವರ ಫೋಟೋ ಇಲ್ಲದೇ ಇರುವುದು ನನಗೆ ಬಹಳ ವಿಷಾದವಾಗುತ್ತದೆ. ಹೀಗಾದರೆ ಎಷ್ಟರ ಮಟ್ಟಿಗೆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುತ್ತಾರೆ? ಒಂದು ರಾಷ್ಟ್ರದ ಘಟನಾವಳಿಯನ್ನು ಬರೆದ ವ್ಯಕ್ತಿಯ ಫೋಟೋವನ್ನು ಇಲ್ಲಿ ಹಾಕಿದರೆ ಹರಿಜನರಿಗೆ ಒಂದು ಸಮಾಧಾನವಾಗುತ್ತದೆ.

ಇನ್ನು ಸರ್ಕಾರದವರು ಷೆಡ್ಯೂಲ್ ಕ್ಯಾಸ್ಟಿನವರಿಗೆ ಸರ್ಕಾರಿ ನೌಕರಿಯಲ್ಲಿ 18 ಪರ್ಸೆಂಟ್ ಅಪಾಯಿಂಟ್‌ಮೆಂಟುಗಳನ್ನು ಕೊಡಬೇಕೆಂದು ಏನೊಂದು ಆಜ್ಞೆಯನ್ನು ಮಾಡಿದ್ದಾರೆ ಅದರ ಪ್ರಕಾರ ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೆಲಸಗಳು ಸಿಕ್ಕುತ್ತಿಲ್ಲ. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಜನ ಷೆಡ್ಯೂಲ್ ಕ್ಯಾಸ್ಟಿನವರು ಇದ್ದಾರೆ, ಎಲ್ಲೆಲ್ಲಿ ಕೆಲಸಗಳು ಖಾಲಿ ಇವೆ ಎನ್ನುವಂತಹ ಒಂದು ಪಟ್ಟಿಯನ್ನು ಸರ್ಕಾರದವರು ಕೊಟ್ಟರೆ ಒಳ್ಳೆಯದು. ಹರಿಜನರಿಗೆ ಸಪೋರ್ಟ್ ಮಾಡುವ ಸಲುವಾಗಿ ಅವರಿಗೆ ಅನುಕೂಲತೆಯನ್ನು ಮಾಡುವ ಬಗ್ಗೆ ಸರ್ಕಾರದವರು ಯಾವುದೇ ಕಾನೂನನ್ನು ಮಾಡುವುದಿಲ್ಲ. 100 ಕ್ಕೆ 18 ರಂತೆ ಹರಿಜನರಿಗೆ ಸರ್ಕಾರಿ ನೌಕರಿಯನ್ನು ಕೊಡಬೇಕೆಂದು ಕಾನೂನು ಇದ್ದರೂ ಸಹ ಅದರಂತೆ ಕೆಲಸಗಳು ಸಿಕ್ಕುತ್ತಿಲ್ಲ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಕಾನೂನು ಪ್ರಕಾರ ಷೆಡ್ಯೂಲ್ ಕ್ಯಾಸ್ಟಿನವರಿಗೆ 100 ಕ್ಕೆ 18 ರಂತೆ ಸರ್ಕಾರಿ ನೌಕರಿಯಲ್ಲಿ ಕೆಲಸ ಸಿಕ್ಕುವಂತೆ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಆಮೇಲೆ ಹಾಗೆಯೇ ಹರಿಜನರಿಗೆ ಗ್ರ್ಯಾಂಟ್ ಕೊಡುವ ವಿಷಯದಲ್ಲಿ 18 ರೂಪಾಯಿ ಇದ್ದದ್ದು 25 ರೂಪಾಯಿಗಳನ್ನು ಕೊಡುವಂತೆ ಸರ್ಕಾರದವರು ಮಾಡಿದ್ದಾರೆಂದು ಹೇಳುತ್ತಾರೆ. ಆದರೆ ಅದು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಬರಬೇಕಾದರೆ ಎಷ್ಟೋ ವ್ಯಾಳ್ಯವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ದಯವಿಟ್ಟು ಹಾಗೆ ಮಾಡದೆ ಈ ಸಲ ಇಡೀ ಮೈಸೂರು ದೇಶಕ್ಕೆಲ್ಲಾ ಅನ್ವಯಿಸತಕ್ಕಂತ ಒಂದು ಏಕರೂಪವಾದ ಕಾನೂನು ಮಾಡಿ ಹರಿಜನರ ಅಭಿವೃದ್ಧಿಗಾಗಿ ಸರ್ಕಾರದವರು ಕೊಡತಕ್ಕಂಥ ಗ್ರ್ಯಾಂಟು, ಇತ್ಯಾದಿ ಸವಲತ್ತುಗಳನ್ನು ಅವರಿಗೆ ಕೊಟ್ಟು ಅದು ಅವರಿಗೆ ಮುಟ್ಟುವ ಹಾಗೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಶ್ರೀ ನಾರಾಯಣಗೌಡರು ಸೋಷಿಯಲ್ ವೆಲ್‌ಫೇರ್ ಖಾತೆಗೆ ಹೊಸದಾಗಿ ಬಂದಿದ್ದಾರೆ. ಅವರು ಈ ಖಾತೆಯಲ್ಲಿ ಹೆಚ್ಚಿನ ನಿಗಾ ತೆಗೆದುಕೊಂಡು ಹರಿಜನರ ಅಭಿವೃದ್ಧಿಯ ವಿಚಾರದಲ್ಲಿ ಒಂದು ಹೆಚ್ಚಿನ ಕೆಲಸವನ್ನು ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀಮತಿ ಚಂಪಾಬಾಯಿ ಭೋಗಲೆ)

ಇನ್ನು ಷೆಡ್ಯೂಲ್ ಕ್ಯಾಸ್ಟಿನವರಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಗ್ರಾಂಟು ಕೊಡುವಾಗ ಮಕ್ಕಳಿಗೆ 100 ಕ್ಕೆ 50 ನಂಬರು ಬಂದವರಿಗೆ ಮಾತ್ರ ಸ್ಕಾಲರ್‌ಷಿಪ್ ಕೊಡುತ್ತೇವೆ ಎಂದು ವಿದ್ಯಾಭ್ಯಾಸ ಇಲಾಖೆಯಲ್ಲಿ ಹೇಳುತ್ತಿದ್ದಾರೆ. ಆ ರೀತಿ ಮಾಡುವುದಾದರೆ ವಿದ್ಯಾಭ್ಯಾಸ ಇಲಾಖೆಯಲ್ಲಿ ಹರಿಜನರ ಮಕ್ಕಳಿಗೆ 100 ಕ್ಕೆ 5 ಮಂದಿಗೂ ಸಹ ಸ್ಕಾಲರ್‌ಷಿಪ್ ಸಿಕ್ಕುವುದಿಲ್ಲ ಎಂದು ನಾನು ಹೇಳಬೇಕಾಗಿದೆ. ಹರಿಜನರಿಗೆ ಕೊಡತಕ್ಕಂಥ ಗ್ರಾಂಟು ಪ್ರತಿಯೊಂದು ಇಲಾಖೆಗೂ ಹಂಚಿಹೋಗಿದೆ. ಪ್ರತಿಯೊಂದು ಇಲಾಖೆಗೂ ಹಂಚುವುದಕ್ಕೆ ಕೊಟ್ಟಿರತಕ್ಕಂಥ ಗ್ರಾಂಟು ಅದರ ಪಾಲು ಸರಿಯಾಗಿ ಹರಿಜನರಿಗೆ ದೊರೆಯುವ ಹಾಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ನಾನು ಹೇಳಿಕೊಳ್ಳುತ್ತೇನೆ. ಷೆಡ್ಯೂಲ್ ಕ್ಯಾಸ್ಟಿನವರಿಗೆ ಹೆಚ್ಚು ಗ್ರಾಂಟು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಅದು ಇಲ್ಲಿಯ ತನಕ ಸಿಕ್ಕಿಲ್ಲ. ಇದರ ಸಲುವಾಗಿ ವಿದ್ಯಾ ಇಲಾಖೆಯಲ್ಲಿ ಹರಿಜನರಿಗೆ ಪೂರ್ತಿಯಾಗಿ ಗ್ರಾಂಟು ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಣ್ಣ ಪಗಾರದ ನೌಕರರನ್ನು ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ವರ್ಗ ಮಾಡಿದರೆ ಬಹಳ ತೊಂದರೆಯಾಗುತ್ತದೆ. ಅವರಿಗೆ ಇರುವುದಕ್ಕೆ ಮನೆ ದೊರೆಯುವುದಿಲ್ಲ. ಬೆಳಗಾಂವಿಯಿಂದ ಗುಲಬುರ್ಗಕ್ಕೆ ವರ್ಗ ಮಾಡಿದರೆ ಅವರ ಗತಿ ಏನು ? ಆದುದರಿಂದ ಈ ರೀತಿ ವರ್ಗಾವರ್ಗಿ ಮಾಡಬಾರದು ಎಂದು ಸೂಚಿಸುತ್ತೇನೆ. ಹೊಸ ಮಂತ್ರಿಗಳು ಬರುತ್ತಾರೆ, ಹೊಸ ಕಾನೂನು ಮಾಡುತ್ತಾರೆ. ಮಿನಿಸ್ಟರ್ ಒಬ್ಬ ಡ್ರೈವರನ್ನು ಬೆಂಗಳೂರಿನಿಂದ ಕಾರವಾರಕ್ಕೆ ವರ್ಗಮಾಡಿದ್ದಾರೆ. ಇದರಿಂದ ಅನ್ಯಾಯವಾಗುತ್ತದೆ, ಅವರಿಗೆ ತೊಂದರೆಯಾಗುತ್ತದೆ. ಈ ರೀತಿ ಮಾಡಬಾರದು ಎಂದು ಇಪ್ಪತ್ತು ಸಲ ಭೇಟಿಯಾಗಿ ಕೇಳಿಕೊಂಡಿದ್ದೇನೆ. ಇದಕ್ಕೆ ಸರಕಾರ ತೀವ್ರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವನಿಗೆ ಬೆಂಗಳೂರಿಗೆ ವರ್ಗಮಾಡಿರಿ, ಅನುಕೂಲ ಮಾಡಿರಿ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಮಲೇರಿಯಾ ಡಿಪಾರ್ಟುಮೆಂಟಿನಲ್ಲಿ ಆಡಳಿತದ ಬಿಗಿ ಇಲ್ಲ. ಆಡಳಿತ ಕೆಟ್ಟು ಹೋಗಿದೆ. ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಯವರು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಗೆ ಹೆಚ್ಚು ಹಣ ಒದಗಿಸಬೇಕೆಂದು ಸಹ ಸೂಚಿಸುತ್ತೇನೆ. ಆಸ್ಪತ್ರೆಗಳನ್ನು ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನನ್ನ ಏರಿಯಾ ಹಿಂದುಳಿದ ಪ್ರದೇಶವಾಗಿದೆ. ಅಲ್ಲಿ ರಸ್ತೆಗಳ ಅನುಕೂಲತೆ ಇಲ್ಲ. ಅಭಿವೃದ್ಧಿ ಯೋಜನೆಯಲ್ಲಿ ರಸ್ತೆ ಕೆಲಸ ಆಗುತ್ತಿಲ್ಲ. ಪಿ.ಡಬ್ಲ್ಯೂ.ಡಿ. ಯವರು ಸಹ ರೋಡ್ಸ್ ಮಾಡುವುದಿಲ್ಲ. ದಯವಿಟ್ಟು ರೋಡ್ ಕೆಲಸಕ್ಕಾಗಿ ಹೆಚ್ಚು ಹಣ ಒದಗಿಸಿ ನನ್ನ ಏರಿಯಾದಲ್ಲಿ ಪಿ.ಡಬ್ಲ್ಯೂ.ಡಿ. ನಿಂದ ರಸ್ತೆ ಕೆಲಸ ಮಾಡಿಕೊಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟುದುದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ. ಆರ್. ಧನಂಜಯ (ರಾಮನಗರಂ).—ಸ್ವಾಮಿ, 1967-68 ನೇ ಸಾಲಿನ ಈ ಅಂದಾಜು ಪತ್ರಿಕೆಯನ್ನು ವಿಷಾದದಿಂದ ವಿರೋಧಿಸುತ್ತೇನೆ. ಇಂದು ನಮ್ಮ ದೇಶದ ಮುಂದೆ ಬಹು ಮುಖ್ಯವಾದ ಅನೇಕ ಸಮಸ್ಯೆಗಳಿವೆ. ಮುಖ್ಯವಾಗಿ ಆಹಾರ ಅಭಾವ ಇದೆ. ಕುಂದುಕೊರತೆಗಳು ಅನೇಕವಾಗಿವೆ. ಆರ್ಥಿಕ ಪರಿಸ್ಥಿತಿಯು ಮಟ್ಟ ಸರಿಯಾಗಿ ಇಲ್ಲದೆ ಜನಜೀವನ ಕಷ್ಟವಾಗಿದೆ. ಇಂಥ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ಜರೂರು ಕಾರ್ಯ ಕ್ರಮ ಕೈಕೊಳ್ಳಬೇಕಾಗಿದೆ. 1967-68ನೇ ಸಾಲಿನ ಆದಾಯ ಮತ್ತು ವೆಚ್ಚದ ಅಂದಾಜು ಪತ್ರಿಕೆ ನೋಡಿದರೆ ನಮ್ಮ ಮುಂದೆ ಇರುವ ಜರೂರು ಸಮಸ್ಯೆಗಳ ಪರಿಹಾರಕ್ಕೆ ಬಹು ಮುಖ್ಯವಾಗಿ ಸಹಾಯವಾಗದೆ ಕೆಲಸಗಳು ಉಳಿದಿರುವುದು ಕಂಡು ಬರುತ್ತದೆ. ಆದುದರಿಂದ ಈ ಆಯವ್ಯಯ ಪಟ್ಟಿಯನ್ನು ವಿಷಾದದಿಂದ ವಿರೋಧಿಸಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಇರತಕ್ಕ ಮಂಚನಬೆಲೆ ಪ್ರಾಜೆಕ್ಟ್ ಜರೂರಾಗಿ ನಡೆಸಿಕೊಡಬೇಕಾಗಿರುವುದು ಬಜೆಟ್ಟಿನಲ್ಲಿ ಸೇರಿಲ್ಲ. ಈ ಯೋಜನೆಯಿಂದ 7,500 ಎಕರೆ ಭೂಮಿ ನೀರಾವರಿಯಾಗಿ ದೇಶದಲ್ಲಿ ಇಂದು ಇರತಕ್ಕ ಆಹಾರ ಅಭಾವವನ್ನು ಬಗೆಹರಿಸುವುದಕ್ಕೂ ಮತ್ತು ಜನಜೀವನದ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೂ ಸಹಾಯಕವಾಗುತ್ತದೆ. ಕಣ್ವ ಪ್ರೊಜೆಕ್ಟಿನಿಂದಲೂ ಸಹ ಬಹಳ ಸಹಾಯವಾಗುತ್ತದೆ. ಈ ಯೋಜನೆಗಳಿಂದ ರೈತರು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಿ ಆಹಾರ ಧಾನ್ಯ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಈ ಮಾತನ್ನು ಒತ್ತಿ ಹೇಳುತ್ತೇನೆ. ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿಯ ಮಂಚನಬೆಲೆ ಪ್ರಾಜೆಕ್ಟು 10—15 ವರ್ಷಗಳಿಂದ ಕಾರ್ಯಗತವಾಗಿಲ್ಲ. ಕೆಲವು ತಿಂಗಳ ಹಿಂದೆ ಮಂತ್ರಿಗಳ ಹತ್ತಿರ ಹೋಗಿ ಈ ಬಗ್ಗೆ ಕೇಳಿದೆ. ಅವರು ಹೇಳಿದ್ದೇನೆಂದರೆ, ಈ ಯೋಜನೆಗೆ ಎರಡು ಕೋಟಿ ರೂಪಾಯಿ ವೆಚ್ಚವಾಗುತ್ತದೆ ಎಂದು. ಕೇಂದ್ರ ಸರಕಾರಕ್ಕೆ

ಬರೆದಿದ್ದೇವೆ. ನಮ್ಮಲ್ಲಿ ಹಣವಿಲ್ಲ ಎಂದು ಹೇಳಿದರು. ನಾವು 20 ಲಕ್ಷ ರೂಪಾಯಿ ಕೊಟ್ಟರೆ ಕೇಂದ್ರದವರು ಒಂದು-ಒಂದೂವರೆ ಕೋಟಿ ಕೊಡುತ್ತಾರೆಂದು ಹೇಳಿದರು. 20 ಲಕ್ಷ ಕೊಡುವುದಕ್ಕೆ ಹಣವಿಲ್ಲ ಎಂದು ಹೇಳಿದರು. ಆದರೆ ಈ ಬಡ್ಜೆಟಿನಲ್ಲಿ ನೋಡಿದರೆ 13—14 ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡುತ್ತಿದ್ದಾರೆ ಎಂದು ಕಂಡು ಬರುತ್ತದೆ. ಎಲ್ಲಾ ಯೋಜನೆಗಳನ್ನು ಅತ್ತ ಕಡೆ ಮಾಡುತ್ತಿದ್ದಾರೆ. ಹಳೇ ಮೈಸೂರು ಪ್ರದೇಶದಲ್ಲಿ ಬೆಂಗಳೂರು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿ ಒಂದೂ ಸಹ ದೊಡ್ಡ ಪ್ರಾಜೆಕ್ಟ್ ಮಾಡುತ್ತಿಲ್ಲ. ಇಲ್ಲಿಯ ಜನಸಾಮಾನ್ಯರು ಹೇಳುವುದೇನೆಂದರೆ, ಚುನಾವಣೆಯಾದ ನಂತರ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬರುವುದಿಲ್ಲ, ಜನರ ಕಷ್ಟ ಸುಖ ನೋಡುವುದಿಲ್ಲ ಎಂದು. ನನ್ನ ಮಿತ್ರರಾದ ಸದಸ್ಯರಿಗೆ ನಾನು ವಿನಂತಿ ಮಾಡಿ ಹೇಳುವುದೇನೆಂದರೆ, ಮೂರು ತಿಂಗಳಿಗೊಮ್ಮೆ ಇಲ್ಲವೆ ಆರು ತಿಂಗಳಿಗಾದರೂ ಅವರವರ ಕ್ಷೇತ್ರಕ್ಕೆ ಹೋಗಿ ಜನಸಾಮಾನ್ಯರ ಕಷ್ಟ ಸುಖ ವಿಚಾರಣೆ ಮಾಡಿ ಅದನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೆಲ್ಲಿಗುಡ್ಡ ಪ್ರದೇಶದ ರೈತರಿಗೆ ನೀರಾವರಿ ಸೌಲಭ್ಯ ದೊರೆಯಬೇಕಾಗಿರುವುದರಿಂದ ಅಲ್ಲಿ ಒಂದು ಫೀಡರ್ ಚಾನೆಲ್ ಅವಶ್ಯಕತೆ ಇದೆ. ಆದಷ್ಟು ತೀವ್ರವಾಗಿ ಇದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ವ್ಯವಸಾಯ ಅಭಿವೃದ್ಧಿಗೆ ಒಳ್ಳೆ ಬೀಜ ಗೊಬ್ಬರ ಬುಲ್‌ಡೋಜರ್ಸ್ ಟ್ರಾಕ್ಟರ್ಸ್ ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ದೊರೆಯುವ ಹಾಗೆ ಏರ್ಪಾಡು ಮಾಡಬೇಕು. ಫರ್ಟಿಲೈಸರ್ಸ್, ನೀರು, ವ್ಯವಸಾಯಕ್ಕೆ ಬೇಕಾಗುವ ಸಲಕರಣೆ ಒದಗಿಸುವುದರ ಜೊತೆಗೆ ಬಾವಿ ತೆಗೆಸಲು ಹಣ ಒದಗಿಸಿ ಸಾಕಷ್ಟು ಪಂಪ್‌ಸೆಟ್ಸ್ ಕೂಡ ಒದಗಿಸುವ ವ್ಯವಸ್ಥೆ ಮಾಡಬೇಕು. ಒಂದು ಹಸು ಅಂಬಾ ಎಂದು ಕೂಗಿದರೆ ಅತ್ತ ಗಮನ ಹೋಗುತ್ತದೆ. ಆದರೆ ರೈತರು ಕೂಗಬೇಕೆಂಬ ತಿಳುವಳಿಕೆ ಅವರಿಗಿಲ್ಲ. ರೈತರು ಬಾವಿ ತೆಗೆಯುವುದಕ್ಕೆ ಎರಡು ಸಾವಿರ ರೂಪಾಯಿ ಸಾಲಕ್ಕೆ ಅರ್ಜಿಹಾಕಿದರೆ 500 ರೂಪಾಯಿ ಖರ್ಚು ಮಾಡಿದರೆ ಅವನಿಗೆ ಸಾಲ ದೊರೆಯುತ್ತದೆ. ಅಧಿಕಾರಿಗಳನ್ನು ಕಂಡರೆ ರೈತರಿಗೆ ಹೆದರಿಕೆ ಇರುತ್ತದೆ. ರೈತರು ವಿದ್ಯಾವಂತರಾಗಿಲ್ಲ. ಅಧಿಕಾರಿಗಳು ಅವರಿಗೆ ಸೂಕ್ತ ಸಲಹೆ ಕೊಡುವುದಿಲ್ಲ. ರೈತರ ಪರಿಸ್ಥಿತಿ ಮತ್ತು ಅವರ ಆರ್ಥಿಕ ಮಟ್ಟ ಬಹಳ ಕೆಳಗಡೆ ಇದೆ. ದೇಶದಲ್ಲಿ ಜನಗಳ ಆರ್ಥಿಕ ಮಟ್ಟ ಹೆಚ್ಚಾಗಬೇಕಾದರೆ ಎಲ್ಲಕಡೆ ಕೈಗಾರಿಕೆಗಳು ಬೆಳೆದುಕೊಳ್ಳಬೇಕು. ರಾಮನಗರಂ ಕ್ಷೇತ್ರದಲ್ಲಿ ಕೈಗಾರಿಕೆ ಪ್ರಾರಂಭಿಸುವುದಕ್ಕೆ ಜಮೀನು ಇದೆ, ಅರ್ಕಾವತಿ ನೀರಿನ ಸೌಲಭ್ಯವಿದೆ. ಕಡಿಮೆ ದರದಲ್ಲಿ ಕೆಲಸಗಾರರು ಸಿಕ್ಕುವ ಸೌಕರ್ಯ ಇರುತ್ತದೆ. ಅದೂ ಅಲ್ಲದೆ ಬೆಂಗಳೂರಿಗೆ ಸಮೀಪಲ್ಲಿ ವಿದ್ಯುಚ್ಛಕ್ತಿಯು ಅನುಕೂಲವಿರುತ್ತದೆ. ಈಗ ಸರ್ಕಾರದವರು ನಿರ್ಮಿಸಬೇಕೆಂದಿರುವ ಸಣ್ಣ ಕಾರಿನ ಪ್ರಾಜೆಕ್ಟನ್ನು ರಾಮನಗರ ತಾಲ್ಲೂಕಿನಲ್ಲಿ ಸ್ಥಾಪಿಸಬೇಕೆಂದು ಬಹಳ ಖಂಡಿತವಾಗಿ, ಗಂಭೀರವಾಗಿ ಕೇಳುತ್ತೇನೆ.

2-00 P.M.

ಸ್ವಾಮಿ, ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪಟ್ಟಣದಲ್ಲಿ ಹಣವಂತರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ದೊಡ್ಡ ದೊಡ್ಡ ಕಾನ್ವೆಂಟುಗಳಲ್ಲಿ, ಹೈಸ್ಕೂಲುಗಳಲ್ಲಿ ಹೆಚ್ಚು ಹಣ ವೆಚ್ಚ ಮಾಡಿ ಕೊಡಿಸುತ್ತಾರೆ. ಅವರು ನೂರಕ್ಕೆ 60, 70, 80 ಅಂಕಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ ಬಡ ರೈತರಿಗೆ ಅಂಥ ಅನುಕೂಲವಿಲ್ಲದೆ ಹೋಗಿ ಅವರು 35, 40 ಅಂಕಗಳನ್ನು ತೆಗೆದುಕೊಳ್ಳುತ್ತಾರೆ. ಅವರಿಗೆ ಕಾಲೇಜುಗಳಲ್ಲಿ ಜಾಗವಿಲ್ಲ. ಹೆಚ್ಚಿಗೆ ಮಂತ್ರಿಗಳು ಮತ್ತು ದೊಡ್ಡ ದೊಡ್ಡ ಅಧಿಕಾರಿಗಳ ಶಿಫಾರಸಿನ ಮೇಲೆ ಈ ಸಮಸ್ಯೆ ಪರಿಹಾರವಾಗುತ್ತದೆ. ಬಡಜನರಿಗೆ ವಿದ್ಯಾಭ್ಯಾಸದ ಸೌಕರ್ಯಗಳು ಬೇಕು. ಈ ಬಗ್ಗೆ ವಿದ್ಯಾ ಮಂತ್ರಿಗಳು ಅದಷ್ಟು ಜಾಗ್ರತೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ನೂರಕ್ಕೆ 80 ರಷ್ಟು ಮತ್ತು ಹೆಚ್ಚು ಅಂಕಗಳನ್ನು ತೆಗೆದುಕೊಂಡಿರುವವರಿಗೆ ಬೇರೆ ಕಾಲೇಜು, ನೂರಕ್ಕೆ 35, 40 ಅಂಕಗಳನ್ನು ಬಂದಿರುವವರಿಗೆ ಬೇರೆ ಕಾಲೇಜು ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಗಂಡ ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು ಎಂದು ಹೇಳುವಂತೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಇವರೊಳಗಿನ ವೈಮನಸ್ಸಿನಲ್ಲಿ ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಅವರಿಗೆ ಏನೂ ಅನುಕೂಲವಾಗುತ್ತಿಲ್ಲ. ಹೀಗಾದರೆ ದೇಶಾದ್ಯಂತ ದಂಗೆ ಎದ್ದು ಕೊನೆಗೆ ನಮ್ಮ ವಿಧಾನ ಸಭೆಯು ಬುಡಕ್ಕೇ ಬರಬಹುದು ಅನ್ನಿಸುತ್ತದೆ. ವಿರೋಧ ಪಕ್ಷದ ಜೊತೆಯಲ್ಲಿ ಆಡಳಿತ ಪಕ್ಷದವರು ಸಹಕರಿಸಿ ಜನಸಾಮಾನ್ಯರ ಕಷ್ಟವನ್ನು ಅದಷ್ಟು ಜಾಗ್ರತೆ ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು, ವೈಮನಸ್ಸನ್ನು ಹೆಚ್ಚು ಮಾಡಿಕೊಂಡು ಹೋದರೆ ಏನೂ ಪ್ರಯೋಜನವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಆರೋಗ್ಯ ಇಲಾಖೆಯ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಸ್ವಾಮಿ, ಐಶ್ವರ್ಯವಂತರು, ಹಣವಂತರು ಯಾರಾದರೂ ಬಂದರೆ ಡಾಕ್ಟರುಗಳು ಅವರನ್ನು ಸ್ವಾಗತಿಸಿ ಅವರಿಗೆ ಬೇಕಾದ ಶಾಸ್ತ್ರೀಯವಾದ ಚಿಕಿತ್ಸೆಯನ್ನುಮಾಡಿ ಅವರಿಗೆ ಏನೇನು ಬೇಕೋ ಆ ಉಪಚಾರ

(ಶ್ರೀ ಬಿ. ಆರ್. ಧನಂಜಯು)

ಗಳನ್ನೆಲ್ಲಾ ಹಣಕಾಸಿಲ್ಲದೆ ಮಾಡುತ್ತಾರೆ. ನಮ್ಮ ರೈತರು, ಅವಿದ್ಯಾವಂತರು ಯಾರಾದರೂ ಬಂದರೆ ದೊಡ್ಡ ದೊಡ್ಡ ಡಾಕ್ಟರುಗಳಾಗಲೀ, ಸಣ್ಣ ಕೆಲಸಗಾರರಾಗಲೀ, ತೋಟಿಗಳಾಗಲೀ ಮಾತನಾಡಿಸುವುದೇ ಇಲ್ಲ. ಲಂಚ ಕೊಡದೇ ಕೆಲಸವೇ ಆಗುವುದಿಲ್ಲ. ಡಾಕ್ಟರುಗಳಿಗೆ ನೂರಾರು ರೂಪಾಯಿ ಕೊಟ್ಟರೆ ಅವನನ್ನು ನೋಡಿ 15 ದಿನ ಇರಬೇಕು ಎಂದು ಹೇಳುತ್ತಾರೆ. ಅವನಿಗೆ 15 ದಿವಸಕ್ಕೆ ಆಗುವ ಖರ್ಚೇನು, ಎಲ್ಲಿಂದ ತರುತ್ತಾನೆ? ಇದರ ಬಗ್ಗೆ ನಮ್ಮ ಆರೋಗ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಇಂಥದಕ್ಕೆ ಅವಕಾಶ ಕೊಡದೆ ಬಡ ರೈತನಿಗೆ ಅನುಕೂಲ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕಂದಾಯ ಮಂತ್ರಿಗಳು ಹೇಳಿದರು, ಹೊಸ ತರಹ ಕಂದಾಯವನ್ನು ಹಾಕುತ್ತೇವೆ, ಹೆಚ್ಚಿಗೆ ತೆರಿಗೆ ಹಾಕುವುದಿಲ್ಲ ಎಂದು. ಅದರಲ್ಲಿ ಏನಿದೆಯೋ ಗೊತ್ತಾಗುವುದಿಲ್ಲ. ಬೇರೆ ತರಹ ಕಂದಾಯ ಹಾಕುತ್ತೇವೆಂದು ರೈತರ ಮೇಲೆ ಹೆಚ್ಚಿಗೆ ತೆರಿಗೆ ಹಾಕಿದರೆ ಎಲ್ಲಿಂದ ಅವನು ತಂದು ಕೊಡುತ್ತಾನೆ? ಅವರು ಕಷ್ಟಪಟ್ಟು ಬೆಳೆದು ಕೈ ಕೆಸರು ಮಾಡಿಕೊಂಡು ಪಟ್ಟಣವಾಸಿಗಳ ಬಾಯಿ ಮೊಸರು ಮಾಡುತ್ತಾನೆ. ತಾನು ಬೆಳೆದ ದವಸಧಾನ್ಯಗಳನ್ನು ಪಟ್ಟಣವಾಸಿಗಳ ಉಪಯೋಗಕ್ಕಾಗಿ ಕಳಿಸುತ್ತಾನೆ.

ಮುಖ್ಯವಾಗಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಪ್ರತಿಯೊಬ್ಬ ಸದಸ್ಯರೂ ಅವರವರ ಕ್ಷೇತ್ರದಲ್ಲಿ ಪಾದಯಾತ್ರೆ ನಡೆಸಿದರೆ ರೈತರ ಸ್ಥಿತಿ ಗೊತ್ತಾಗುತ್ತದೆ. ಇಲ್ಲಿ ಸಭೆಯಲ್ಲಿ ಕುಳಿತುಕೊಂಡು ಮಾತನಾಡಿದರೆ ಅರ್ಥವಾಗುವುದಿಲ್ಲ. ಮಂತ್ರಿಗಳೂ ಸಹ ಪ್ರತಿ ಕ್ಷೇತ್ರಕ್ಕೂ ಹೋಗಿ ಪಾದಯಾತ್ರೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ಎಲ್ಲೆಲ್ಲಿ ಬೆಳೆಯಾಗಿದೆ ಅಲ್ಲಿ ಮಾತ್ರ ಕಂದಾಯವನ್ನು ಹಾಕಿ ಮಳೆಯಾಗದೆ ಬೆಳೆಯಾಗದೆ ಇರುವ ಕಡೆ ನಾಲ್ಕಾಣೆ ಕಂದಾಯ ಹಾಕಿ, ಹೆಚ್ಚು ಹಾಕಬೇಡಿ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಶ್ರೀಮಂತರ ಆಧಾರವೇ ಬಡ ರೈತ. ವಿದ್ಯಾರ್ಥಿಗಳ ಆಧಾರವೇ ಬಡ ರೈತ, ಮಂತ್ರಿಗಳ ಆಧಾರವೇ ಬಡ ರೈತ. ರೈತ ಬೆಳೆಯದೆ ಆಹಾರವಿಲ್ಲದೆ ಹೋದರೆ ಹೇಗೆ ಜನಸಾಮಾನ್ಯರು ಜೀವನ ನಡೆಸುತ್ತಾರೆ? ಆದುದರಿಂದ ಎಲ್ಲೆಲ್ಲಿ ಬೆಳೆಯಾಗಿದೆಯೋ ಅಲ್ಲಿ ಮಾತ್ರ ಕಂದಾಯವನ್ನು ಹಾಕಿ, ಬೆಳೆ ಇಲ್ಲದ ಕಡೆ ನಾಲ್ಕಾಣೆ ಮಾತ್ರ ಹಾಕಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ಮಾನ್ಯ ಸಭಾಪತಿಗಳೇ, ಆರ್ಥಿಕ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು 1967-68ನೇ ಸಾಲಿಗೆ ಉಳಿತಾಯದ ಮತ್ತು ಹೊಸದಾಗಿ ಒಂದೂ ತೆರಿಗೆಯನ್ನು ಹೇರದೆ ಬಜೆಟ್ಟನ್ನು ಹೊರಡಿಸಿದ್ದಕ್ಕಾಗಿ ಹೃತ್ಪೂರ್ವಕವಾಗಿ ವಂದಿಸಿ ಈ ಬಜೆಟ್ಟನ್ನು ಸ್ವಾಗತಿಸುತ್ತೇನೆ.

ಈ ಬಜೆಟ್ಟಿನಲ್ಲಿ ವ್ಯವಸಾಯದ ಉತ್ಪನ್ನಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಮತ್ತು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನ ಕೊಟ್ಟಿರುವುದು ಅಭಿನಂದನೀಯ ವಿಷಯವಾದರೂ ಕೂಡ ಇನ್ನೂ ಸರ್ಕಾರದವರು ಹೆಚ್ಚಿನ ಪರಿಶೀಲನೆ ಮಾಡಿ ಸರ್ಕಾರದ ವಿವಿಧ ಬಾಬುಗಳಿಗೆ ಖರ್ಚು ಮಾಡತಕ್ಕ ಹಣವನ್ನು ಕಡಮೆ ಮಾಡಿ ಇನ್ನೂ ಹೆಚ್ಚಿನ ಹಣವನ್ನು ನೀರಾವರಿ ಯೋಜನೆಗಳಿಗೆ, ಅದರಲ್ಲಿಯೂ ಶೀಘ್ರ ಫಲ ಕೊಡತಕ್ಕ ಸಣ್ಣನೀರಾವರಿ ಯೋಜನೆಗಳಿಗೆ ಆದ್ಯ ಗಮನ ಕೊಟ್ಟು ಹಣ ಖರ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ಸಣ್ಣ ನೀರಾವರಿ ಯೋಜನೆಗಳಿಗೆ ಟಾಪ್ ಪ್ರಯಾರಿಟಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಕೆಲವು ದಿವಸದ ಕೆಳಗೆ ಮಂತ್ರಿಮಂಡಲದ ಸಭೆಸೇರಿ ಅನೇಕ ಬಾಬುಗಳಲ್ಲಿ ಹಣವನ್ನು ಉಳಿತಾಯ ಮಾಡಿ ನೀರಾವರಿ ಯೋಜನೆಗಳಿಗೆ ಮತ್ತು ಇತರೆ ಮುಖ್ಯವಾದ ಬಾಬುಗಳಿಗೆ ಹಣವನ್ನು ಉಳಿಸಲು ಪ್ರಯತ್ನ ಮಾಡಿದ್ದಾರೆ. ಅವರು ಇನ್ನೂ ಮನಸ್ಸು ಮಾಡಿದರೆ ಶೀಘ್ರವಾಗಿ ಪರಿಶೀಲಿಸಿ ಇನ್ನೂ ಹೆಚ್ಚು ಹಣವನ್ನು ಉಳಿಸಲಿಕ್ಕೆ ಸಾಧ್ಯವೆಂದು ನನಗನ್ನಿಸುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹೆಚ್ಚು ಹಣವನ್ನು ಉಳಿಸುವುದಕ್ಕೆ ಸಾಧ್ಯವಿದೆ. ಉದಾಹರಣೆಗೆ ಹೇಳುವುದಾದರೆ ಶಾಲಾ ಕಟ್ಟಡ ರಸ್ತೆ ಇತರ ಕಟ್ಟಡಗಳು ಇತ್ಯಾದಿಗಳಿಗೆ ಏನು ಖರ್ಚು ಮಾಡುತ್ತಿದ್ದಾರೆಯೋ ಅದನ್ನು ಎರಡು ಮೂರು ವರ್ಷ ಕಾಲ ನಿಲ್ಲಿಸಿದರೆ ದೇಶಕ್ಕೆ ಏನೂ ಹಾನಿಯಾಗುವುದಿಲ್ಲ. ಈಗ ಆಹಾರದ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ಆಹಾರದಲ್ಲಿ ಸ್ವಾವಲಂಬನೆಯಾಗಬೇಕಾದರೆ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನ ಕೊಡಬೇಕಾಗಿರುವುದರಿಂದ ಲೋಕೋಪಯೋಗಿ ಇಲಾಖೆಯಲ್ಲಿ ಈಗ ಖರ್ಚು ಮಾಡುತ್ತಿರುವುದನ್ನು ಕಡಮೆ ಮಾಡಿ ನೀರಾವರಿ ಯೋಜನೆಗಳಿಗೆ ಇನ್ನೂ ಹೆಚ್ಚು ಹಣವನ್ನು ಉಪಯೋಗಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬಯಸುತ್ತೇನೆ.

ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ದೊಡ್ಡ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವ ಗುರಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ಅನೇಕ ಕಡೆ ರೊಕ್ಕದ ಬೆಳೆ, ಹಣದ ಬೆಳೆ ಬೆಳೆಯುವುದನ್ನು ನೋಡುತ್ತಿದ್ದೇವೆ. ಹೀಗಾದರೆ ಆಹಾರದಲ್ಲಿ ಸ್ವಾವಲಂಬನೆಯಾಗುವುದು ಬರೀ ಕನಸಾಗುತ್ತದೆ. ರೊಕ್ಕದ ಬೆಳೆ ಬೆಳೆಯಬಾರದು ಎನ್ನುವುದು ನನ್ನ ಅಭಿಪ್ರಾಯವಲ್ಲ. ರೊಕ್ಕದ ಬೆಳೆ ಬೆಳೆಯಬೇಕು. ಆದರೆ ಕನಿಷ್ಟ ಅರ್ಧ ಜಮೀನಿನಲ್ಲಾದರೂ ಆಹಾರದ ಬೆಳೆಯನ್ನು ಬೆಳೆಯುವುದಕ್ಕೆ ತೀವ್ರ ಗಮನವನ್ನು ಸರ್ಕಾರ ಹರಿಸಬೇಕು. ಇದಕ್ಕೆ ಕಾನೂನು ಮಾಡಬೇಕಾದ ಅವಶ್ಯಕತೆ ಇದ್ದರೆ ಅದನ್ನು ಸಹ ಮಾಡಬೇಕೆಂದು ಹೇಳುತ್ತೇನೆ. ಕಳೆದ ಎರಡು ವರ್ಷಗಳ ಹಿಂದೆ ಈ ಆಜ್ಞೆಯನ್ನು ಜಾರಿಗೆ ತಂದರೂ ಫಲಕಾರಿಯಾಗಿಲ್ಲ ಇದನ್ನು ಶೀಘ್ರವಾಗಿ ಪರಿಶೀಲಿಸಬೇಕು. ಅದರಲ್ಲೂ ನಮ್ಮ ಭದ್ರಾಪ್ರಾಜೆಕ್ಟಿನ ಕಡೆ ಅಚ್ಚುಕಟ್ಟು ಮತ್ತು ವಾಣಿವಿಲಾಸ ಸಾಗರದ ಅಚ್ಚುಕಟ್ಟು ಪ್ರದೇಶವೇನಿದೆ ಬೇಸಿಗೆಯಲ್ಲಿ ಅಲ್ಲಿ ಬರೀ ಶೇಂಗ ಬೆಳೆಯುತ್ತಿದ್ದಾರೆ. ಸಾವಿರಾರು ಗಾಡಿ ಶೇಂಗ ಆ ಕಡೆಯಿಂದ ಬರುತ್ತದೆ. ಹೀಗಾದರೆ ಆಹಾರದ ವಿಚಾರದಲ್ಲಿ ಸ್ವಾವಲಂಬನೆಯನ್ನು ಪಡೆಯುವುದು ಬಹಳ ಕಷ್ಟ. ಆದುದರಿಂದ ಸರ್ಕಾರ ಈ ಕಡೆ ತೀವ್ರಗಮನ ಕೊಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ಶೇಖರಣೆ ಮಾಡಿದ ಆಹಾರಧಾನ್ಯಕ್ಕೂ ಮತ್ತು ಬಜಾರಿನಲ್ಲಿ ಇರುವ ಧಾನ್ಯಕ್ಕೂ ಬೆಲೆಯಲ್ಲಿ ಬಹಳ ವ್ಯತ್ಯಾಸವಿರುವುದರಿಂದ ಸರ್ಕಾರ ಈ ಕಡೆ ಸ್ವಲ್ಪ ದೃಷ್ಟಿ ಹರಿಸಬೇಕು. ಶೇಖರಿಸುವುದಕ್ಕೆ ಸ್ವಲ್ಪ ಹೆಚ್ಚು ಬೆಲೆ ಕೊಟ್ಟು ರೈತರಿಗೆ ಪ್ರೋತ್ಸಾಹ ನೀಡಬೇಕು. ನಮ್ಮ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಿಂದ ಸಕಾಲದಲ್ಲಿ ಮಳೆ ಬಾರದೆ ರೈತರಿಗೆ ತೊಂದರೆಯಾಗಿದೆ. ಬಹಳ ವರ್ಷಗಳಿಂದ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆ ಯಾವುದನ್ನೂ ತೆಗೆದುಕೊಂಡಿಲ್ಲ, 3-4 ಕೆರೆಗಳ ಅಂದಾಜು ಸಿದ್ಧವಾಗಿದೆ, ಎರಡು ಲಿಫ್ಟ್ ಇರಿಗೇಷನ್ ಎಸ್ಟಿಮೇಟುಗಳು ಕೆಲಸಗಳು ಮಂಜೂರಾಗುವುದಕ್ಕೆ ತಯಾರಾಗಿವೆ. ಈ ಸಲದ ಬಜೆಟ್ಟಿನಲ್ಲಾದರೂ ಅವನ್ನು ಸೇರಿಸಿ ಕನಿಷ್ಠಪಕ್ಷ ಎರಡು ಕೆರೆಗಳ ಕೆಲಸವನ್ನಾದರೂ ಮಾಡಬೇಕೆಂದು ಲೋಕೋಪಯೋಗಿ ಇಲಾಖಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಶೀಘ್ರವಾಗಿ ಫಲಕಾರಿಯಾಗುವ 2-3 ನೀರಾವರಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನಾದರೂ ಸಪ್ಲಿಮೆಂಟರಿ ಬಜೆಟ್ಟಿನಲ್ಲಾದರೂ ಸೇರಿಸಿ ನಮ್ಮ ತಾಲ್ಲೂಕಿಗೆ ಅನುಕೂಲಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಭೂ ಕಂದಾಯದ ವಿಷಯದಲ್ಲಿ ಹೇಳುವುದಾದರೆ ಮಾನ್ಯ ಆರ್ಥಿಕ ಮಂತ್ರಿಗಳು ಈಗಿರುವ ಪದ್ಧತಿಯನ್ನು ಬದಲಾಯಿಸಬೇಕೆಂದು ಹೇಳಿದ್ದಾರೆ. ಆದರೆ ಈಗಿರುವ ಪದ್ಧತಿಯನ್ನೇ ಮುಂದುವರಿಸಬೇಕೆಂಬುದು ನನ್ನ ಅಭಿಪ್ರಾಯ. ಬದಲಾಯಿಸುವುದರಿಂದ ರೈತರಿಗೆ ಹೆಚ್ಚು ತೊಂದರೆಯಾಗುವುದೇ ಹೊರತು ಉಪಯೋಗವಾಗುವುದಿಲ್ಲ. ಈಗಾಗಲೆ ವರಮಾನ ತೆರಿಗೆ ಮುಂತಾದುವನ್ನು ಹೇರಿರುವುದರಿಂದ ಅಧಿಕಾರಿಗಳ ಕಿರುಕುಳ ಜಾಸ್ತಿಯಾಗುತ್ತಿದೆ. ಆದುದರಿಂದ ಈಗಿರುವ ಪದ್ಧತಿಯನ್ನೇ ಮುಂದುವರಿಸಿಕೊಂಡು ಹೋಗುವುದು ಉತ್ತಮ. ಹಾಗೆ ಮಾಡುವುದರಿಂದ ನಿರ್ದಿಷ್ಟವಾದ ಆದಾಯವು ಬರುತ್ತದೆ. ಈಗಿನ ಪದ್ಧತಿಯನ್ನು ಬದಲಾಯಿಸಿದರೆ ನಿರ್ದಿಷ್ಟವಾದ ಆದಾಯ ಬರುತ್ತದೆಯೋ, ಲಾಭ ಅಥವಾ ನಷ್ಟವಾಗುತ್ತದೆಯೋ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇರುವುದನ್ನೇ ಮುಂದುವರೆಸಿ ಮದ್ರಾಸು ಮತ್ತು ಆಂಧ್ರಗಳಲ್ಲಿ ಮಾಡಿರುವ ಹಾಗೆ 10 ಎಕರೆಗಳ ಕೆಳಗೆ ಜಮೀನಿಟ್ಟುಕೊಂಡಿರುವ ಖುಷ್ಕಿ ಜಮೀನು ಮಾಲೀಕರಿಗೆ ಕಂದಾಯ ಮನ್ನಾಮಾಡಿದರೆ ಸಣ್ಣ ರೈತರಿಗೆ ಅನುಕೂಲವಾಗುತ್ತದೆ.

ಇನ್ನು ಸಹಕಾರ ಸಂಸ್ಥೆಗಳ ಬಗ್ಗೆ ಕೆಲವು ಮಾತುಗಳನ್ನು ವಿಷಾದದಿಂದ ಹೇಳುತ್ತೇನೆ. ಕೋ-ಅಪರೇಟಿವ್ ಸೊಸೈಟಿಗಳಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಅದು ಯಾವ ಮಟ್ಟಕ್ಕೆ ಬಂದಿದೆಯೆಂದರೆ ಇದುವರೆಗೆ ಒಂದು ಮನೆಮಠ ಮಾಡಿದರೆ, ಒಂದು ಜಮೀನು ತೆಗೆದುಕೊಂಡರೆ ಅದು ಆಸ್ತಿಯೆಂದು ಭಾವಿಸುತ್ತಿದ್ದರು, ಈಗ ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾದರೆ ಅಥವಾ ಸೆಕ್ರೆಟರಿಯಾದರೆ ಒಳ್ಳೆ ಆಸ್ತಿಮಾಡಿಕೊಂಡ ಹಾಗೆ ಎಂದು ಭಾವಿಸಿದ್ದಾರೆ. ಸರಕಾರ ಉಗ್ರಕ್ರಮ ಕೈಗೊಂಡು ಇಂಥ ಸಂದರ್ಭಗಳಲ್ಲಿ ಅನ್ಯಾಯ ನಡೆಯುವುದನ್ನು ತಪ್ಪಿಸುವುದಕ್ಕೆ ಪ್ರಯತ್ನಪಡಬೇಕು. ಅದಕ್ಕೆ ತಕ್ಕಂತೆ ಸೊಸೈಟಿ ಆಕ್ಟು ಮತ್ತು ರೂಲ್ಸ್‌ನಲ್ಲಿ ಸೂಕ್ತ ಬದಲಾವಣೆ ಮಾಡಬೇಕು. ನಾಡಗೌಡರು ಬಹಳ ದಕ್ಷರು, ಅವರು ಹೆಚ್ಚು ಶ್ರಮವಹಿಸಿ ಈ ಸಂಬಂಧವಾದ ಅನ್ಯಾಯವನ್ನು ಸರಿಪಡಿಸಲು ಉಗ್ರಕ್ರಮ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಅನೇಕ ಕೋ-ಅಪರೇಟಿವ್ ಮಿಲ್ಲುಗಳೇನು ಸರಕಾರದಿಂದ ಪ್ರಾರಂಭಿಸಲ್ಪಟ್ಟಿವೆ ಅವುಗಳಲ್ಲಿ ಸರಕಾರ ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನು ಷೇರು ರೂಪದಲ್ಲಿ ಹಾಕಿದೆ, ಅಲ್ಲಿ ಅನ್ಯಾಯ ನಡೆಯುತ್ತಿದೆ. ಈ ಕಡೆ ಹೆಚ್ಚು ಗಮನ ಹರಿಸಬೇಕು.

(ಶ್ರೀ ಜೆ. ಆರ್. ಹಾಲಸ್ವಾಮಿ)

ಪೋಲೀಸು ಇಲಾಖೆಯಲ್ಲಿ ಕೂಡ ದಕ್ಷತೆ ಕಡಿಮೆಯಾಗುತ್ತಿದೆಯೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದುವರೆಗೆ ಪಟ್ಟಣಗಳಲ್ಲಿ ಮತ್ತು ಸಿಟಿಗಳಲ್ಲಿ ಹಗಲು ಹೊತ್ತಿನಲ್ಲೇ ಕಳ್ಳತನವಾಗುತ್ತಿದೆಯೆಂದು ಪತ್ರಿಕೆಯಲ್ಲಿ ಬರುತ್ತಿತ್ತು. ಈಗ ಹಳ್ಳಿಗಳಲ್ಲೂ ಕೂಡ ಮಧ್ಯಾಹ್ನದ ವೇಳೆಯಲ್ಲೇ ಕಳ್ಳತನವಾಗುತ್ತಿವೆ, ಇದು ಬಹಳವಾಗಿದೆ. ಕೆಲವು ದಿವಸಗಳ ಹಿಂದೆ ನಮ್ಮ ಟೌನಿನಲ್ಲಿ 11 ಗಂಟೆಯಲ್ಲಿ ಹಗಲು ಹಿಂದೆಮುಂದೆ ಕೆಲಸಮಾಡುತ್ತಿದ್ದರೂ ಮನೆಯಲ್ಲಿ ಕಳ್ಳತನವಾಗಿರುವುದನ್ನು ಕೇಳಿ ಬಹಳ ವ್ಯಸನವಾಯಿತು. ಇದನ್ನು ಗಮನಿಸಿ ಗೃಹಸಚಿವರು ಉಗ್ರ ಕ್ರಮ ಕೈಕೊಂಡು ಇಲಾಖೆಯಲ್ಲಿರುವ ಲೋಪವನ್ನು ಸರಿಪಡಿಸಿ ಸರಿಯಾಗಿ ನಡೆಸಲು ಪ್ರಯತ್ನಪಡಬೇಕೆಂದು ಹೇಳಬಯಸುತ್ತೇನೆ.

ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಕ್ಯಾಪಿಟೇಷನ್ ವಿಷಯ ತಿಳಿಸಬೇಕಾಗಿದೆ. ಹೊರಗಡೆಯಿಂದ ಬರುವವರಿಗೆ ಮೆಡಿಕಲ್ ಕಾಲೇಜು ಮುಂತಾದುವುಗಳಲ್ಲಿ ಎಷ್ಟು ಬೇಕಾದರೂ ಸೀಟುಗಳನ್ನು ಕೊಡುತ್ತಾರೆ. ಹಾಗೆ ಮಾಡದೆ ಪ್ರೈವೇಟ್ ಕಾಲೇಜುಗಳಲ್ಲೂ ಕೂಡ ನಮ್ಮ ಮಕ್ಕಳಿಗೆ ಮೊದಲು ಸೀಟು ಕೊಟ್ಟು ಉಳಿದರೆ ಬೇರೆಯವರಿಗೆ ಆಮೇಲೆ ಕೊಡಬೇಕು. ಈ ಸಲ ಬಹಳ ಪೈಪೋಟಿ ಇದೆ, ಸೀಟುಗಳನ್ನು ನಮ್ಮವರಿಗೇ ಕೊಡಬೇಕು, ಹೊರಗಿನವರಿಗೆ ಕೊಡಲೇ ಕೂಡದು ಎಂದು ಮನವಿಮಾಡುತ್ತೇನೆ.

ವಿದ್ಯಾಭ್ಯಾಸದ ಕ್ವಾಲಿಟಿ ಕಡೆಗೆ ಕೂಡ ಗಮನಕೊಡಬೇಕು. ಈಗ ಶಾಲೆಗಳ ಸಂಖ್ಯೆ ಜಾಸ್ತಿಯಾಗಿದೆ, ಆದರೆ ವಿದ್ಯಾಭ್ಯಾಸ ಮಟ್ಟ ಕೆಳಗಿಳಿದಿದೆ. ಈ ಕಡೆ ಸರಕಾರ ಹೆಚ್ಚು ಗಮನಕೊಡಬೇಕೆಂದು ಹೇಳಬಯಸುತ್ತೇನೆ.

ಎನ್. ಇ. ಎಸ್. ನಲ್ಲಿ ನಾನು ಅಧ್ಯಕ್ಷನಾಗಿರುವುದರಿಂದ ನನ್ನ ಅನುಭವದಿಂದ ಒಂದೆರಡು ವಿಷಯ ಹೇಳುತ್ತೇನೆ. ಎಕ್ಸ್‌ಟೆನ್‌ಷನ್ ಆಫೀಸರನ್ನು ಮತ್ತು ಇತರ ಅಧಿಕಾರಿಗಳನ್ನು ಅವರವರ ಇಲಾಖೆಗಳಿಗೆ ಕಳಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ)—ಮಾನ್ಯ ಅಧ್ಯಕ್ಷರೇ, 1967-68ನೇ ವರ್ಷದ ಆಯವ್ಯಯ ಪಟ್ಟಿಯನ್ನು ಚರ್ಚಿಸುತ್ತಾ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾಲ್ಕನೆಯ ಚುನಾವಣೆಯ ನಂತರ ಆಗಿರತಕ್ಕ ರಾಜಕೀಯ ಮಾರ್ಪಾಟನ್ನು ಮಾನ್ಯ ಹಣಕಾಸಿನ ಸಚಿವರು ಪ್ರಸ್ತಾಪ ಮಾಡಿದ್ದಾರೆ. ನಾಲ್ಕನೆಯ ಚುನಾವಣೆಯ ನಂತರ ರಾಜಕೀಯದಲ್ಲಿ ಬದಲಾವಣೆಯಾಗಿದೆ. ಕಳೆದ 20 ವರ್ಷಗಳಿಂದ ಇದ್ದಂಥ ಅಧಿಕಾರ ನಡೆಸತಕ್ಕಂಥ ಕಾಂಗ್ರೆಸ್ಸಿನ ಸ್ವಾಮ್ಯ ಕೊನೆಗೊಂಡಿದೆ, ಕಾಂಗ್ರೆಸ್ಸೇತರ ಸರಕಾರಗಳು ಕೆಲವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿವೆ. ಕೇಂದ್ರದಲ್ಲಿ ಮಾತ್ರ ಕಾಂಗ್ರೆಸ್ ಇನ್ನೂ ಅಧಿಕಾರದಲ್ಲಿದೆ. ಈ ಹಿನ್ನೆಲೆಯಲ್ಲಿ ನಾವು ನಮ್ಮ ಹಣಕಾಸಿನ ಸ್ಥಿತಿಗತಿಗಳನ್ನು ಪರಿಶೀಲನೆ ಮಾಡುತ್ತಿರುವಾಗ ಈ ರಾಜ್ಯದ ಆಗುಹೋಗುಗಳಮೇಲೆ ರಾಜ್ಯದ ಆದಾಯ ವೆಚ್ಚ ಬಹಳಮಟ್ಟಿಗೆ ಕೇಂದ್ರದ ಆದಾಯ ವೆಚ್ಚದ ಮೇಲೆ ಅವಲಂಬಿಸಲ್ಪಟ್ಟಿದೆ ಎಂಬುದನ್ನು ಮರೆಯಬಾರದು. ಮೂರು ಪಂಚವಾರ್ಷಿಕ ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ದೇಶದಲ್ಲಿ ಮಾಡಿ ಮುಗಿಸಿವೆ, ಕೈಗಾರಿಕೆಯಲ್ಲಿ ಕೆಲವೊಂದು ಪ್ರಗತಿಯನ್ನು ಸಾಧಿಸಿರುವುದನ್ನು ಬಿಟ್ಟರೆ ಆಹಾರ ಕ್ಷೇತ್ರದಲ್ಲಿ ಮತ್ತು ಉದ್ಯೋಗ ಒದಗಿಸುವ ಕ್ಷೇತ್ರದಲ್ಲಿ ನಾವು ವಿಫಲರಾಗಿದ್ದೇವೆ. ನಾನು ಅಂಕಿ ಅಂಶಗಳ ಬಗ್ಗೆ ಇಲ್ಲಿ ಉಲ್ಲೇಖವನ್ನೇನೂ ಮಾಡುವ ಕೆಲಸಕ್ಕೆ ಹೋಗುವುದಿಲ್ಲ, ಕಾಲಾವಕಾಶವಿಲ್ಲ. ಬಹಳ ವಿವರವಾಗಿ ಅದರಿಂದ ದೇಶದ ಪ್ರಗತಿಯನ್ನು ಪುನರ್‌ಪರಿಶೀಲನೆ ಮಾಡತಕ್ಕಂಥ ಮಟ್ಟದಲ್ಲಿ ನಾವಿದ್ದೇವೆ. ಯೋಜನಾ ಮಂಡಲಿಯವರು ತಮ್ಮ ಯೋಜನೆಗಳನ್ನು ರೂಪಿಸಿಕೊಂಡು ಬಂದರೂ ಈಗ ಮೂರು ಯೋಜನೆಗಳಾದ ನಂತರ ಈ ಯೋಜನಾ ಮಂಡಳಿಗಳನ್ನು ರದ್ದುಮಾಡುವುದು ಅವಶ್ಯಕ ಎಂದು ಕಾಣುತ್ತದೆ ಎನ್ನುವ ಅಭಿಪ್ರಾಯಕ್ಕೆ ಅವರು ಈಗ ಬಂದಿದ್ದಾರೆ. ಯೋಜನಾ ಮಂಡಲಿಯವರು ಏನು ಹೇಳುತ್ತಾರೆಂದರೆ, ನಮ್ಮ ಯೋಜನೆಗಳೆಲ್ಲಾ ಚೆನ್ನಾಗಿಯೇ ಇದ್ದುವು. ಆದರೆ ಅದನ್ನು ಕಾರ್ಯಗತ ಮಾಡುವ ಆಡಳಿತ ಯಂತ್ರ ಸಾಕಷ್ಟು ಯಶಸ್ವಿಯಾಗಿ ಕೆಲಸ ಮಾಡಲು ಆಗಲಿಲ್ಲ, ಅದರಿಂದಾಗಿ ಯೋಜನೆಗಳು ಯಶಸ್ವಿಯಾಗಲಿಲ್ಲ ಎಂದು. ಆದರೆ ಆಡಳಿತದ ಸಿಬ್ಬಂದಿಯವರು ಸರಕಾರದ ನೌಕರಿಯಲ್ಲಿ ಜವಾಬುದಾರರಾಗಿರುವವರು ಏನು ಹೇಳುತ್ತಾರೆಂದರೆ, ನಮ್ಮ ಮಂತ್ರಿಮಂಡಲದವರು ಇದನ್ನು ಮಾಡಲು ಸರಿಯಾದ ರೀತಿಯಲ್ಲಿ ಅವರ ಕರ್ತವ್ಯವನ್ನು ನಿರ್ವಹಿಸಲಿಲ್ಲ ಇದರಿಂದಾಗಿ ಯೋಜನೆಗಳನ್ನು ಯಶಸ್ವಿಯಾದ ರೀತಿಯಲ್ಲಿ ಕಾರ್ಯಗತ ಮಾಡಲಿಕ್ಕೆ

ಅವರು ಸಹಾಯ ಮಾಡಲಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಒಬ್ಬರಮೇಲೊಬ್ಬರಿಂದ ಪರಸ್ಪರ ದೂರುಗಳು ಬಂದು ಒಟ್ಟಿನಲ್ಲಿ ಏನಾಗಿದೆ ಎಂದರೆ, ಸಾಲಗಳ ಭಾರ ಹೆಚ್ಚಿದೆ, ಇದಕ್ಕೆ ಕೊಡುವ ಬಡ್ಡಿಯ ಗಾತ್ರವೂ ಕೂಡ ಬಹಳ ಹೆಚ್ಚಾಗಿದೆ. ಸುಮಾರು ಇಪ್ಪತ್ತು ವರ್ಷಗಳಾದರೂ ಕೂಡ ಆಹಾರದಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದಕ್ಕೆ ಬದಲು ಇವೊತ್ತು ಅಮೆರಿಕಾ ಹಾಗೂ ಇನ್ನಿತರ ಹೊರದೇಶಗಳಿಂದ ಸಿಗತಕ್ಕ ಗೋಧಿಯನ್ನು ತಂದು ನಮ್ಮ ದೇಶಕ್ಕೆ ಸುರಿಯುವುದು ಸ್ವಲ್ಪ ತಡವಾದರೆ ನಮ್ಮಲ್ಲಿ ಈಗ ಇರುವ ಕ್ಷಾಮ ಹಾಗೂ ಅಭಾವ ಪರಿಸ್ಥಿತಿಗಳು ಇನ್ನಷ್ಟು ಉಗ್ರವಾಗಿ ದೇಶದಲ್ಲಿ ಜನ ಹೊಟ್ಟೆಗಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತಿದೆ. ಪರಿಸ್ಥಿತಿ ಈಗಲೂ ಇದೇ ರೀತಿ ಇದೆ. ಆದುದರಿಂದ ನಾನು ಇಲ್ಲಿ ಹೇಳುವುದು ಕೆಲವು ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಆಡಳಿತದಲ್ಲಿ ಚೆನ್ನಾಗಿ ಕೆಲಸಮಾಡಲು ಉಪಯೋಗವಾಗುವಂತಹ ರಚನಾತ್ಮಕ ಸಲಹೆಗಳನ್ನೇ ಕೊಡುವುದು ಒಳ್ಳೆಯದು ಎಂದು. ಎಷ್ಟೋ ರಚನಾತ್ಮಕವಾದ ಸಲಹೆಗಳನ್ನು ವಿರೋಧಪಕ್ಷದವರು ಸರಕಾರಕ್ಕೆ ಕೊಟ್ಟಿದ್ದಾರೆ. ಆದರೆ ಕಾಂಗ್ರೆಸ್ಸಿನಲ್ಲಿರುವ ಆಡಳಿತಗಾರರಿಗೆ ಎಲ್ಲಿ ಅನುಕೂಲಗಳು ಆಗುತ್ತವೋ ಅಂತಹ ಕಡೆಗಳಲ್ಲಿ ಮಾತ್ರ ಕೆಲವು ಸಲಹೆಗಳನ್ನು ಕಾರ್ಯಗತ ಮಾಡಿ ತಮಗೆ ಅನಾನುಕೂಲವಾಗುತ್ತದೆ ಎಂದು ಇರುವ ಕಡೆಗಳಲ್ಲಿ ಇವನ್ನು ಕಾರ್ಯಗತ ಮಾಡಲಿಲ್ಲ. ನಾನೂ ಕೂಡ ಇಲ್ಲಿ ಇನ್ನೂ ಕೆಲವು ಸಲಹೆಗಳನ್ನು ಸರಕಾರಕ್ಕೆ ಕೊಡುತ್ತೇನೆ. ಸ್ವಾಮಿ, ಈಗ ದೇಶದಲ್ಲಿ ಚರ್ಚೆಯಾಗುತ್ತಿರುವ ರಾಜಧನವನ್ನು, ಎಂದರೆ Privy Purse, ರದ್ದುಪಡಿಸಬೇಕೆಂಬುದು. ಆದರೆ ಮಾನ್ಯ ಅಧ್ಯಕ್ಷರು ಇಲ್ಲಿ ಇದನ್ನು ಹೇಳುವುದು ಸರಿಯಲ್ಲ ಎಂದು ಹೇಳಬಹುದು. ಇದು ಕೇಂದ್ರಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದು. ಆದರೆ ನಾನು ಈ ಮೊದಲೇ ಹೇಳಿದಂತೆ ಕೇಂದ್ರದ ಹಣಕಾಸಿನ ವ್ಯವಸ್ಥೆಗೂ ರಾಜ್ಯದ ಹಣಕಾಸಿನ ವ್ಯವಸ್ಥೆಗೂ ಒಂದಕ್ಕೊಂದು ಅವಲಂಬಿಸಿಯೇ ಕೆಲಸ ಮಾಡುತ್ತದೆಯೇ ವಿನಾ ಬೇರೇನಿಲ್ಲ. ಆದುದರಿಂದ ಇದನ್ನು ಒಟ್ಟಿನ ದೃಷ್ಟಿಯಲ್ಲಿ ನೋಡಬೇಕು. ಅದರಂತೆ ಈಗ ಕೊಡುತ್ತಿರುವ ರಾಜಧನವನ್ನು ರದ್ದುಪಡಿಸಬೇಕು.

ಎರಡನೆಯದು ರಾಜ್ಯಪಾಲರುಗಳ ಹುದ್ದೆಗಳನ್ನು ರದ್ದುಪಡಿಸಬೇಕು. ಹಿಂದೆ ಇದ್ದಿದ್ದ ರಾಜ್ಯಪಾಲರು ನಮ್ಮ ಬೀದಿಗಳನ್ನು ಸ್ವಚ್ಛತೆ ಮಾಡುವ ಕೆಲಸಗಳನ್ನು ಮಾಡುತ್ತಿದ್ದರು. ಇದು ಒಂದು ಒಳ್ಳೆಯ ಕಾರ್ಯಕ್ರಮ, ಇಂತಹ ಸ್ವಚ್ಛತೆಯ ಕಾರ್ಯಕ್ರಮಗಳನ್ನು ಮಾಡುವುದು ಒಳ್ಳೆಯದು. ಆದರೆ ಇಂತಹ ರಾಜ್ಯಪಾಲರ ಹುದ್ದೆಗಳು ಇನ್ನೂ ನಮ್ಮ ರಾಜ್ಯದಲ್ಲಿವೆ; ಮತ್ತು ಪ್ರೆಸಿಡೆಂಟರವರೇ ಇವರನ್ನು ನೇಮಕ ಮಾಡುವುದರಿಂದ ಇದು ಪಾರ್ಲಿಮೆಂಟಿಗೆ ಸಂಬಂಧಿಸಿದ್ದು. ಇದನ್ನು ನಾವು ಇಲ್ಲಿ ವಿಚಾರ ಮಾಡುವುದು ಸರಿಯಲ್ಲ ಎಂದು ಇಲ್ಲಿ ನಮ್ಮ ಅಧ್ಯಕ್ಷರು ಟೆಕ್ನಿಕಲ್ ಆಗಿ ಸರಿಯಲ್ಲ ಎಂದು ಇದಕ್ಕೆ ವಿರೋಧ ವ್ಯಕ್ತಪಡಿಸಬಹುದು. ನಾನು ಹೇಳುವುದು ಇಂತಹ ರಾಜ್ಯಪಾಲರ ಹುದ್ದೆಗಳನ್ನು ರದ್ದುಮಾಡಬೇಕು. ಅಲ್ಲದೆ ನಮ್ಮ ರಾಜ್ಯದಲ್ಲಿ ರಾಜ್ಯಪಾಲರಿಗಾಗಿ ರಾಜಭವನ ಎಂದು ಮಾಡಿ ಅದಕ್ಕಾಗಿ ಹಿಂದಿನ ವರ್ಷದ ಆಯವ್ಯಯದ ಮುಂಗಡ ಪತ್ರದಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳನ್ನು ಬರೀ ರಿಪೇರಿಗಾಗಿ ಎಂದು ತೆಗೆದುಕೊಂಡರು. ಈ ಸಾಲಿನಲ್ಲಿ ಪುನಃ ಇದೇ ರಾಜಭವನದ ರಿಪೇರಿಗಾಗಿ ಎಂದು ಸುಮಾರು 13 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಎಂದರೆ ಒಟ್ಟು 19 ಲಕ್ಷ ರೂಪಾಯಿಗಳಷ್ಟು ಹಣ ಬರೀ ರಿಪೇರಿಗಾಗಿ ಬೇಕಾಗಿದೆ. ಬೇರೆ ಕಟ್ಟಡ ಕಟ್ಟುವುದಕ್ಕಲ್ಲ. ಇಂತಹ ಬಿಳೀ ಆನೆಗಳನ್ನು ನಾವು ಬೆಳೆಸಬೇಕಾದ ಅಗತ್ಯವಿಲ್ಲ. ಇದೇ ರೀತಿಯಾಗಿ ನಮ್ಮ ರಾಜ್ಯದಲ್ಲಿರುವ ಮೇಲ್ಮನೆಯನ್ನು ಕೂಡ ರದ್ದುಮಾಡಬೇಕು. ಈ ಬೇಡಿಕೆ ಸರಕಾರದ ಮುಂದೆ ಬಹಳ ದಿನದಿಂದಲೂ ಇದೆ. ಇದನ್ನು ಸರಕಾರ ಈಗಲಾದರೂ ಪರಿಶೀಲನೆ ಮಾಡಬೇಕು. ಇನ್ನು ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ರದ್ದುಪಡಿಸಬೇಕು. ಹಿಂದೆ ಈ ಪ್ರಶ್ನೆ ಬಂದಾಗ ನಮ್ಮಲ್ಲಿ ಏಳು ಜನ ಸೂಪರ್ ಅನ್ಯುಯೇಟೆಡ್ ಅಧಿಕಾರಿಗಳು ಇದ್ದಾರೆ, ಅವರಿಗೆ ಜಾಗಗಳನ್ನು ಒದಗಿಸುವುದಕ್ಕಾಗಿ ಇವರಿಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಅದರಿಂದಾಗಿ ಮುಂದುವರಿಸುತ್ತಿದ್ದೇವೆ ಎಂದು ಹೇಳಿದರು. ಇದು ತಾತ್ಕಾಲಿಕವಾಗಿ ಎಂದು ಹೇಳಿದ್ದರೂ ಕೂಡ ಈಗಲೂ ಮುಂದುವರಿಸುತ್ತಾ ಬರುತ್ತಿದ್ದಾರೆ. ಇದನ್ನು ಈಗಲಾದರೂ ರದ್ದುಮಾಡಿ ಇಲ್ಲಿರುವ ಕಚೇರಿಯನ್ನು ಹಾಗೂ ಅಧಿಕಾರಿಗಳನ್ನೂ ರದ್ದುಮಾಡಬೇಕು. ಹೀಗೆನೇ ಇಲ್ಲಿರುವ ಸಬ್ ಡಿವಿಜನ್ ಆಫೀಸುಗಳನ್ನೂ ರದ್ದುಪಡಿಸಬೇಕು. ಇದನ್ನೂ ಪರಿಶೀಲನೆ ಮಾಡಬೇಕು. ಇನ್ನೂ ಒಂದು ಅವಮಾನಕಾರಿಯಾದ ಸನ್ನಿವೇಶವನ್ನು ನಮ್ಮ ಸರಕಾರ ಹಚ್ಚಿಕೊಂಡಿದೆ. ನಾನಾ ಯೋಜನೆಗಳನ್ನು ಮಾಡಿ ಅದಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ನೇಮಿಸಿಕೊಂಡು ಅವುಗಳನ್ನು ವಿಸ್ತರಣೆ ಮಾಡುತ್ತ ಹೋಗುತ್ತಿದ್ದಾರೆ. ಇದನ್ನು ಈಗ ಖೋತಾ ಮಾಡಬೇಕಾಗಿ ಬಂದಿದೆ ಎಂದು ಇಲ್ಲಿರುವ ಕೆಲವು ಕಾರಕೂನರುಗಳನ್ನು ಹಾಗೂ ಜವಾನರುಗಳನ್ನು ತೆಗೆದುಹಾಕಿ ಎಂದು ಆಯಾ ಇಲಾಖೆಯವರು ಸೂಚನೆಗಳನ್ನು ನೀಡುತ್ತಿದ್ದಾರೆ. ಇದರಿಂದ ಸ್ಥಳೀಯವಾಗಿ ನೇಮಕಗೊಂಡಿರುವ ಸಹಸ್ರಾರು ಜನರಿಗೆ ಉದ್ಯೋಗಗಳಿಲ್ಲದೆ ಅವರು ಸಾಯುವ ಸ್ಥಿತಿಗೆ ಬಂದಿದೆ. ಅಲ್ಲದೆ ಕೆಲವು ಕಡೆಗಳಲ್ಲಿ ಇರತಕ್ಕ ಅಧಿಕಾರಿಗಳನ್ನು ಕಡ್ಡಾಯವಾಗಿ ನಿವೃತ್ತಿ

(ಶ್ರೀ ಜೆ. ಆರ್. ಹಾಲಸ್ವಾಮಿ)

ಮಾಡಬೇಕೆನ್ನುವ ಸೂಚನೆಗಳೂ ಕೂಡ ಬಂದಿವೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು, ಈಗಾಗಲೇ ನಾನು ಮಾಡಿರುವ ಸೂಚನೆಗಳನ್ನು ಕಾರ್ಯಗತ ಮಾಡಿದರೆ ಇದರಿಂದ ಹೆಚ್ಚು ಜನರಿಗೆ ತೊಂದರೆಯಾಗುವುದಿಲ್ಲ, ಬಡಜನರು ಬದುಕಲು ಅವಕಾಶವಾಗುತ್ತದೆ ಮತ್ತು ಎಲ್ಲರನ್ನೂ ಮನೆಗೆ ಕಳುಹಿಸುವ ಪರಿಸ್ಥಿತಿ ಬರುವುದಿಲ್ಲ. ಇವೊತ್ತು ದೇಶದಲ್ಲಿ ಉದ್ಯೋಗಗಳನ್ನು ಜನರಿಗೆ ಯಾವ ರೀತಿಯಿಂದಲಾದರೂ ಒದಗಿಸಿಕೊಡಬೇಕಾದುದು ಸರಕಾರದ ಕರ್ತವ್ಯ. ಈ ಮಾತನ್ನು ನಾವೂ ಒಪ್ಪಿಕೊಂಡಿದ್ದೇವೆ. ನಾವು ಈಗಾಗಲೇ ಮೂರು ಯೋಜನೆಗಳನ್ನು ಮಾಡಿ ಮುಗಿಸಿದ್ದೇವೆ. ನಮ್ಮ ದೇಶದಲ್ಲಿ ಉದ್ಯೋಗದ ಅವಕಾಶಗಳು ಯಾವ ರೀತಿ ಇವೆ ಎನ್ನುವುದಕ್ಕೆ ಒಂದು ನಿದರ್ಶನ ಇಲ್ಲಿ ಕೊಡುತ್ತೇನೆ. 1964-65ನೇ ಸಾಲಿನಲ್ಲಿ ಉದ್ಯೋಗಕ್ಕಾಗಿ ಎಷ್ಟು ಜನರಿದ್ದರು ಎಂದರೆ 1,16,729 ಇದ್ದರು ; 1965-66ನೇ ಸಾಲಿನಲ್ಲಿ 1,33,054 ಇದ್ದರು ಎಂದು ಎಂಪ್ಲಾಯಿಮೆಂಟು ಎಕ್ಸ್‌ಚೇಂಜಿನಲ್ಲಿ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆನ್ನುವುದು ಗೊತ್ತಾಗುತ್ತಿದೆ. ಇದನ್ನು ರಿನ್ಯೂ ಮಾಡಿಸಿಕೊಳ್ಳಬೇಕೆಂದೂ ಜನ ಅಲ್ಲಿ ಕಾಯುತ್ತಿದ್ದಾರೆ. ಇದರಲ್ಲಿ ಖಾಸಗಿ ಕಂಪನಿಯವರಲ್ಲಿ ಸಿಗುವ ಉದ್ಯೋಗಗಳ ಸಂಖ್ಯೆ ಸೇರಿಲ್ಲ ಹಾಗೂ ಬೇಸಾಯ ಮಾಡುವ ಕೂಲಿಗಾರರ ಹೆಸರುಗಳೂ ಇಲ್ಲ. ಇದರಿಂದ ಉದ್ಯೋಗಗಳಿಲ್ಲದೆ ಎಷ್ಟು ಜನ ತೊಳಲುತ್ತಿದ್ದಾರೆ ಎನ್ನುವುದು ನಿಮಗೇ ಗೊತ್ತಾಗುತ್ತದೆ. ಇದು ತೀರಾ ಅವಮಾನಕರವಾದ ಮಾತು. ಇದರ ಜೊತೆಗೆ ಇನ್ನೂ ಒಂದು ಮಾತು ಹೇಳಬೇಕಾಗಿದೆ. ಯೋಜನೆಗಳನ್ನು ಕಾರ್ಯಗತ ಮಾಡುವಾಗ ಮೂರು ಯೋಜನೆಗಳನ್ನೂ ಮಾಡಿ ಮುಗಿಸಿದ ಮೇಲೂ ನಮ್ಮ ದೇಶದಲ್ಲಿ ಕೆಲವು ಇಂಡಸ್ಟ್ರಿಗಳನ್ನು ಬಿಟ್ಟರೆ ಇತರ ಯಾವ ಇಂಡಸ್ಟ್ರಿಗಳೂ ಹೆಚ್ಚಾಗಿ ಆಗಿವೆ ಎಂದೂ ಹೇಳುವುದಕ್ಕೆ ಆಗುವುದಿಲ್ಲ ಮತ್ತು ಸರಕಾರದವರೂ ಜವಾಬುದಾರಿಯಿಂದ ಹೇಳಿದ್ದಾರೆ ಎಂದು ನಮಗೂ ಗೊತ್ತಾಗುವುದಿಲ್ಲ. ಆದರೆ ನಾನು ನಮ್ಮ ಫೈನಾನ್ಸ್ ಮಿನಿಸ್ಟರವರಾದ ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ಮನವಿ ಮಾಡಿಕೊಳ್ಳುವುದು ಕೇಂದ್ರದವರೊಡನೆ ಆಗಾಗ್ಗೆ ಮಾತನಾಡಲು ದೆಹಲಿಗೆ ಪ್ರವಾಸ ಹೋಗುತ್ತಿದ್ದೀರಿ. ಆಗ ಅವರಲ್ಲಿ ಸೂಕ್ತವಾದ ಶಿಫಾರಸುಗಳನ್ನು ಒತ್ತಾಯವಾಗಿ ಮಾಡಿ ನಮಗೆ ಅನುಕೂಲವಾಗುವ ರೀತಿಯಲ್ಲಿ ಸಹಾಯಗಳನ್ನು ಪಡೆಯಬೇಕು. ಈಗ ಗುಲ್ಬರ್ಗಾದಲ್ಲಿರುವ ಎಂ. ಎಸ್. ಕೆ. ಮಿಲ್ಸ್‌ನ್ನು ಮುಚ್ಚಲಾಯಿತು. ಇಲ್ಲಿ ನಮ್ಮ ಬೆಂಗಳೂರಿನಲ್ಲಿರುವ ರಾಜಾ ಹಾಗೂ ಮಿನರ್ವಾ ಮಿಲ್ಸ್‌ಗಳನ್ನು ತೆರೆಯುವಾಗ ಸರಕಾರ ಕೊಟ್ಟಂತಹ ವಿವರಣೆಗಳನ್ನು ನೋಡಿದರೆ ನಮಗೆ ತುಂಬಾ ವಿಷಾದವಾಗುತ್ತದೆ. ಇವೇ ರೀತಿ ಹುಬ್ಬಳ್ಳಿಯಲ್ಲಿರುವ ಒಂದು ಮಿಲ್ಲಿನಲ್ಲಿ ಸುಮಾರು 17·35 ಲಕ್ಷದಷ್ಟು ಹಣವನ್ನು ಸರಕಾರ ಹಾಕಿ ಈಗ ಅದು ಮುಚ್ಚುವ ಸ್ಥಿತಿಯಲ್ಲಿದೆ. ಇಂತಹ ದುರಂತ ನಾಟಕಗಳನ್ನು ನೋಡಿದರೆ ನಮ್ಮ ರಾಜ್ಯದ ಕೈಗಾರಿಕಾ ನೀತಿ ಏನನ್ನು ತೋರಿಸುತ್ತಿದೆ ಎನ್ನುವುದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಷ್ಟೋ ಯೋಜನೆಗಳು ವಿಫಲವಾಗಿವೆ. ಇದೂ ಅಲ್ಲದೆ ಜನರ ಜೀವನ ವೆಚ್ಚ ಏರುತ್ತಿದೆ, ಬೆಲೆಗಳು ಏರುತ್ತಿವೆ. ಇದರ ಬಗ್ಗೆ ಕೆಲವು ಸಲಹೆಗಳನ್ನು ನಾವು ಮಾಡಬೇಕಾಗಿದೆ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕು ಎನ್ನುವುದು ನಮ್ಮ ಒಂದು ಬೇಡಿಕೆ. ಇದನ್ನು ನಮ್ಮ ಅಧ್ಯಕ್ಷರು ಇಲ್ಲಿ ಎತ್ತಬಾರದು ಕೇಂದ್ರಕ್ಕೆ ಇದು ಸಂಬಂಧಿಸಿದ್ದು ಎಂದು ಹೇಳಬಹುದು. ನಾನು ಶ್ರೀ ನಿಜಲಿಂಗಪ್ಪನವರು ಹಾಗೂ ಶ್ರೀ ರಾಮಕೃಷ್ಣ ಹೆಗಡೆ ಇವರುಗಳಲ್ಲಿ ಮನವಿ ಮಾಡುವುದು. ತಾವು ಆಗಾಗ್ಗೆ ಸರಕಾರದ ವೆಚ್ಚದಿಂದ ದೆಹಲಿಗೆ ಹೋಗುತ್ತೀರಿ. ಅಲ್ಲಿ ಹೋದಾಗ ಬ್ಯಾಂಕುಗಳ ಬಗ್ಗೆ ಏನು ಮಾಡೋಣ ಎಂದು ಕೇಂದ್ರದವರೊಂದಿಗೆ ಸರಿಯಾಗಿ ಚರ್ಚೆ ಮಾಡಿ ರಾಜ್ಯದ ಬ್ಯಾಂಕುಗಳು ಹಾಗೂ ಕೇಂದ್ರದ ಬ್ಯಾಂಕುಗಳು ಯಾವರೀತಿ ಬೆಳೆಯುತ್ತಿವೆ ಇದನ್ನು ಸರಿಪಡಿಸಬೇಕು ಎಂದು ಸಲಹೆ ಮಾಡಬೇಕು. ಇನ್ನು ನಾಸಿಕ ಪರಿಸ್ಥಿತಿ ನೋಡಿದರೆ ತುಂಬಾ ವಿಷಾದವಾಗುತ್ತದೆ. ನಮ್ಮ ಸರಕಾರದಲ್ಲಿರುವ ಕೈಗಾರಿಕೆಗಳಿಗಾಗಿ ಹಣ ತೊಡಗಿಸಿದ್ದರೂ ಅದರಿಂದೇನೂ ಪ್ರಯೋಜನ ಬರಲಿಲ್ಲ. ನಾನು ಮೇಲೆ ತಿಳಿಸಿದ ಸೂಚನೆಗಳನ್ನು ಪರಿಶೀಲನೆ ಮಾಡಿ ಕಾರ್ಯಗತ ಮಾಡಿದರೆ ಎಷ್ಟೋ ಪ್ರಯೋಜನವಾಗುತ್ತದೆ ಇಲ್ಲವಿದ್ದರೆ ಏನೂ ಆಗುವುದಿಲ್ಲ. ನಿಮ್ಮ ಕೈಯ್ಯಲ್ಲಿ ಕೆಲಸಮಾಡಲು ಆಗದಿದ್ದರೆ ರಾಜೀನಾಮೆ ಕೊಟ್ಟು ದೂರ ಸರಿಯಿರಿ. ಬರೀ ಕೇವಲ ಪೊಳ್ಳು ಆಶ್ವಾಸನೆಗಳನ್ನು ಕೊಡಲು ಹೋಗಬೇಡಿ. ಬರಡು ಮಾತುಗಳನ್ನಾಡುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಕಂದಾಯ ರದ್ದು ಮಾಡುತ್ತೇವೆ ಎಂದು ಹೇಳಿ ನಾಲ್ಕನೆ ಚುನಾವಣೆಗೆ ಪೂರ್ವ ಶ್ರೀಮಾನ್ ಕಾಮರಾಜರು ದೇಶಕ್ಕೆ ಪ್ರಕಟಿಸಿದರು. ಆ ಪ್ರಕಾರ ಕೆಲವು ರಾಜ್ಯಗಳು ಮುಂದೆ ಬಂದವು. ನಮ್ಮ ಹಣಕಾಸಿನ ಮಂತ್ರಿಗಳು ಈಗಿರತಕ್ಕ ರೀತಿಯಲ್ಲಿ ಕಂದಾಯವನ್ನು ರದ್ದುಪಡಿಸುತ್ತೇವೆ

ಎಂದು ಹೇಳಿದರು. ಆದರೆ ಈಗ ವಾಸ್ತವವಾಗಿ ಎಲ್ಲಾ ಕಂದಾಯವನ್ನು ಹೊಸದಾಗಿ ರೀ ಅಸೆಸ್‌ಮೆಂಟ್ ಏನಿದೆ ಆ ಪ್ರಕಾರ ವಸೂಲು ಮಾಡಿರಿ ಎಂದು ಹೇಳಿ ಎಲ್ಲರಿಗೂ ಹೇಳುತ್ತಾ ಇದ್ದಾರೆ, ಕೆಲವು ಕಡೆ ವಸೂಲಾಗಿದೆ, ಕೆಲವು ಕಡೆ ಡಿಮ್ಯಾಂಡ್ ನೋಟೀಸ್ ಹೋಗುತ್ತಾ ಇದೆ. ಆದರೆ ಶ್ರೀಮಾನ್ ರಾಚಯ್ಯನವರೇನೋ ತಿಪ್ಪೇ ಸಾರಿಸುವ ಉತ್ತರ ಕೊಟ್ಟರು. ಇದು ಖಂಡಿತವಾಗಿಯೂ ಕೂಡದು, ಕಂದಾಯವನ್ನು ರದ್ದುಪಡಿಸಬೇಕು. ಈಗಾಗಲೇ ಬೇರೆ ರಾಜ್ಯಗಳಲ್ಲಿ ರದ್ದುಪಡಿಸಿದ್ದಾರೆ. ಉತ್ತರ ಪ್ರದೇಶದಲ್ಲಿ, ಒರಿಸ್ಸಾದಲ್ಲಿ, ಬಿಹಾರದಲ್ಲಿ ರದ್ದುಪಡಿಸಿದ್ದಾರೆ. ಎಷ್ಟೋ ಕೋಟಿ ರೂಪಾಯಿಗಳನ್ನು ಕಳೆದುಕೊಂಡು ಇದನ್ನು ರದ್ದುಪಡಿಸಿದ್ದಾರೆ. ಇದು ಈಗ ಕಾರ್ಯಗತ ಮಾಡತಕ್ಕ ವಿಷಯವಾಗಿದೆ. ಆದ್ದರಿಂದ ಈ ಕಂದಾಯವನ್ನು ಖಂಡಿತವಾಗಿಯೂ ರದ್ದುಪಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

2-30 P.M.

ಭೂಸುಧಾರಣೆಯನ್ನು ಈ ರಾಜ್ಯದಲ್ಲಿ ಜಾರಿಗೆ ತರುತ್ತಾ ಇಲ್ಲ, ಜಮೀನ್ದಾರರ ಹಿತವನ್ನು ಎತ್ತಿ ಹಿಡಿದು, ಉಳುಮೆ ಮಾಡತಕ್ಕ ರೈತರಿಗೆ ಭೂಮಿ ದೊರೆಯದಂತೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿಕೊಂಡು ಬಂದಿದ್ದಾರೆ. ಈ ವಿಷಯದಲ್ಲಿ ನಾವು ಸಾಕಾದಷ್ಟು ಉಗ್ರವಾಗಿ ಸರ್ಕಾರಕ್ಕೆ ಹೇಳಿದ್ದೇವೆ. ಈಗಲೂ ಈ ಒಂದು ಕೆಲಸವನ್ನು ಮಾಡದೇ ಹೋದಲ್ಲಿ ರೈತರು ಈ ಸರ್ಕಾರದ ನೀತಿಯ ವಿರುದ್ಧ ದಂಗೆ ಏಳಬೇಕಾಗುತ್ತದೆ ಎಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀಮಾನ್ ನಿಜಲಿಂಗಪ್ಪನವರು ಶ್ರೀಮಾನ್ ಬದರಿಯವರು ಮಾಡಿದಂಥ ಬೇಡಿಕೆಗೆ ಬಹಳ ಸ್ಪಷ್ಟವಾಗಿ ಆ ಭ್ರಮೆ ಇಟ್ಟುಕೊಳ್ಳಬೇಡಿ ಎಂದು ಹೇಳಿದರು. ಶ್ರೀಮಾನ್ ನಿಜಲಿಂಗಪ್ಪನವರು ಈಗ ಇಲ್ಲಿ ಇಲ್ಲ. ಅವರಿಗೆ ಹೇಳುವುದು ಬಹಳ ಇದೆ.

ಶಿವಮೊಗ್ಗಾ ಜಿಲ್ಲೆಯಲ್ಲಿ ಹೆಗ್ಗಡೆಯವರು ಇದ್ದಾಗ ಮೆಡಿಕಲ್ ಸ್ಕೂಲ್‌ನ್ನು ಸ್ಥಾಪನೆ ಮಾಡಿದರು. ಆಳ್ವ ಅವರು ಬಂದು ಸ್ಕೂಲು—ಎಲ್.ಎಂ.ಪಿ. ಆಗುವುದಿಲ್ಲ ಅದನ್ನು ತೆಗೆದು ಎಂ.ಬಿ.ಬಿ.ಎಸ್. ಮಾಡುತ್ತೇವೆ ಎಂದು ದೊಡ್ಡ ಮಾತು ಆಗಿ ಅದನ್ನು ಕಿತ್ತು ಹಾಕಿದರು. ಅಲ್ಲಿಗೆ ಮೆಡಿಕಲ್ ಕಾಲೇಜು ಕೊಡುತ್ತೇವೆ ಎಂದು ಇದೇ ಸರ್ಕಾರ ಆಶ್ವಾಸನೆ ಕೊಟ್ಟಿದ್ದುದನ್ನು ಕಾರ್ಯಗತ ಮಾಡಿಲ್ಲ. ಇಂದಿರಾ ಗಾಂಧಿಯವರ ಹೆಸರಿನಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿ ಎರಡು ಎರಡೂವರೆ ಲಕ್ಷ ರೂಪಾಯಿಗಳನ್ನು ಸಾರ್ವಜನಿಕರಿಂದ ವಸೂಲು ಮಾಡಿ ಆ ಹಣ ಅಲ್ಲೇ ಬಿದ್ದಿದೆ. ಇವತ್ತು ನಿಜಲಿಂಗಪ್ಪನವರ ಮುಖದಲ್ಲಿ ಬರುತ್ತಿದೆ ಅಲ್ಲಿ ಯಾವ ಕಾಲೇಜನ್ನೂ ತೆಗೆಯುವುದಿಲ್ಲ ಆ ಭ್ರಮೆ ಇಟ್ಟುಕೊಳ್ಳಬೇಡಿ ಎಂದು. ಅವರು ಏನು ಅಂದುಕೊಂಡಿದ್ದಾರೋ ಏನೋ ಗೊತ್ತಿಲ್ಲ. ಅವರು ಏನು ಅಂದುಕೊಂಡಿದ್ದಾರೆ ಅನ್ನುವ ಆ ಮಾತನ್ನು ನಾನು ಈಗಲೇ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು ಇನ್ನೂ ಎಷ್ಟೋ ಕಾಲೇಜುಗಳನ್ನು ಪಡೆಯುವುದಕ್ಕೆ ಶಿವಮೊಗ್ಗ ಜಿಲ್ಲೆ ಅರ್ಹತೆಯನ್ನು, ಸ್ಥಾನಮಾನವನ್ನು ಪಡೆದಿದೆ.

ಶ್ರೀ ಕೆ. ಪುಟ್ಟಸ್ವಾಮಿ (ಆರೋಗ್ಯ ಮತ್ತು ವಸತಿ ನಿರ್ಮಾಣ ಶಾಖೆಗಳ ಮಂತ್ರಿಯವರು).—ಮಾತು ಕೊಟ್ಟಿದ್ದಾರೆ ಎಂದು ಹೇಳಿಧಿರಿ, ಯಾರು ಯಾವಾಗ ಎಂಬುದನ್ನು ಹೇಳಿದರೆ ಉತ್ತರ ಹೇಳುವುದಕ್ಕೆ ನನಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ನಿಜಲಿಂಗಪ್ಪನವರು ಏನು ತಿಳಿದುಕೊಂಡಿದ್ದಾರೋ ಏನೋ. 'ದೋಣಿದಾಟಿದ ಮೇಲೆ ಅಂಬಿಗನ ಇದು—ಏನೋ ಅಂತ ತಿಳಿದುಕೊಂಡಿರಬಹುದು. ಅವರು ದಾವಣಗೆರೆಯಲ್ಲಿ ಕಾಲೇಜು ಮಾಡಿಸಿದರು, ಸ್ವತಃ ಹೋಗಿ ಮುಂದೆ ನಿಂತು ಮಾಡಿದರು. ಅವರ ಬಳಗ ಎಂದು ಮಾಡಿದರು. ಅವರು ಈಗ 8-10 ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀಜು ತೆಗೆದುಕೊಳ್ಳುತ್ತಾ ಇದ್ದಾರೆ. ಅವರ ಸ್ನೇಹಿತರು ಸೀಟು ಮಾರಾಟ ಮಾಡುತ್ತಾರೆ. ಗುಲ್ಬರ್ಗಾದಲ್ಲಿ ಮಾಡಿದರು, ಗುಲ್ಬರ್ಗಾದಲ್ಲಿ ಅವರ ಸ್ನೇಹಿತರು ಸೀಟು ಮಾರಾಟ ಮಾಡುತ್ತಾರೆ. ಬೆಳಗಾಂನಲ್ಲಿ ಮಾಡಿದರು, ಬೆಳಗಾಂನಲ್ಲಿ ಅವರ ಸ್ನೇಹಿತರು ಸೀಟುಗಳನ್ನು ಮಾರಾಟ ಮಾಡುತ್ತಾರೆ. ಶ್ರೀಮಾನ್ ನಿಜಲಿಂಗಪ್ಪನವರು ಈ ಒಂದು ಚಾಣಾಕ್ಷತನವನ್ನು ಕೈಬಿಟ್ಟು ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ವರ್ತಿಸಬೇಕು. ತಮ್ಮನ್ನು ಸ್ವಾರ್ಥಸಾಧಕರು ಬಳಸಿರಬಹುದು, ತಮ್ಮ ಮೇಲೆ ಒತ್ತಾಯ ತರುತ್ತಾ ಇರಬಹುದು, ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ನೆಪದಿಂದ ಈ ರಾಜ್ಯದ ವಿದ್ಯುಚ್ಛಕ್ತಿಯನ್ನು ಮತ್ತು ಇತರ ವಸ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಬೇಡಿ. ನೀವು ದೇಶಕ್ಕೆ ಮಾಡುವ ಉಪಕಾರ ಸಾಕು. ನಿಮ್ಮ ಕೈಯಲ್ಲಿ ಏನು ಶಕ್ತಿ ಇದೆ ಅದನ್ನು ಮಾತ್ರ

(ಶ್ರೀ ಎಸ್. ಗೋಪಾಲಗೌಡ)

ಮಾಡಿ, ಖಂಡಿತ ಈ ಗುಂಪುಗಾರಿಕೆಯನ್ನು ನಿಲ್ಲಿಸಿ. ತಮ್ಮಂಥವರಿಂದ ಇಡೀ ರಾಜ್ಯಕ್ಕೆ ಕೈಗಾರಿಕಾ ಪ್ರಗತಿ, ನೀರಾವರಿ ಪ್ರಗತಿ, ಕೃಷಿಕ್ಷೇತ್ರದಲ್ಲಿ ಪ್ರಗತಿಯಾಗಲು ಸಾಧ್ಯವಾಗುತ್ತಿಲ್ಲ. ಹತ್ತು ವರ್ಷ ಈ ರಾಜ್ಯ ಹಿಂದಕ್ಕೆ ಹೋಗಿದೆ, ಅದನ್ನು ಸರಿಪಡಿಸುವುದಕ್ಕೆ ತಾವು ಸ್ವಲ್ಪ ಗಮನ ಇಟ್ಟು ವಿಚಾರ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಅವರಿಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon anybody else, I suppose that the House agreed that there should be no Tea Break. I request the Hon'ble Minister for Finance and the other Ministers who might like to reply, may kindly do so tomorrow, and not to-day, and that in the morning session. I want to accommodate as many members as possible. Every Member should take only ten minutes and not more. And to Mr. K.H. Patil, I am making a particular request ; he should come last because he has participated in the debate on the Governor's Address and other subjects. There are a few members who have not spoken at all ; and it would not be proper for us to deny opportunity to them. I find Mr. Hutchmasti Gowda's name also in the list, which I am striking out with his perimssion. Similarly, there are a few others who have already participated in the debate on the Governor's Address or Vote-on-account. We should have got this rule applied earlier. I am only sorry it was not done much earlier. Now Sri Sayanak ; and after that Sri Ghorpade, may kindly take the House.

Sri H. SIDDAVEERAPPA.—The Hon'ble Minister for Health said in reply to Sri Gopal Gowda that nobody has given any assurance about Shimoga Medical College. So far as I remember, it was said at the time the Medical School was abolished that Government would try to upgrade it into a medical college. I would request the Hon'ble Minister to refresh his memory ; an assurance, an implied assurance was given that the Medical School will be upgraded into a college. That was given when there was an agitation from the public.

Sri K. PUTTASMAMY.—But the occasion to which Mr. Gopal Gowda referred to was that it was done at the time of the abolition of the Medical School.

Sri H. SIDDAVEERAPPA.—While abolishing the Medical School, the question of upgrading the Medical School would not arise.

Mr. SPEAKER.—It could be dealt with on the Demand for Health.

There is a suggestion. So far as the members of the Congress Party are concerned, they are willing to give much more time to Mr. Ghorpade, sacrificing some of their turns. It may be done.

Sri B. B. SAYANAK (Belgaum).—Mr. Speaker, Sir, It is a great pleasure to speak on the budget and offer a few remarks. This budget has not given any relief to the poor. According to the budget speech of the Finance Minister the agricultural production has increased from 32 lakhs tonnes in 1957-58 to 47 lakhs tonnes in 1966-67. This increase is not due to adequate supply of fertilisers and seeds to agriculturists by Government ' ut, according to me, it is otherwise. Supply of fertiliser

and seeds was not made to the ryots in time. I have received a letter from the Joint Director of Agriculture dated 19th June 1967 stating that seeds are available at the block agency. In our area agriculturists have sown the land. What is the purpose of the Joint Director's letter now and if this is the case, what will be the fate of the agriculturists. Seeds and fertilisers will not be available at the proper time at all. I submit, it is not the policy of Government to induce agriculturists produce more, but it is the soaring Prices in the market that induce them to produce more and cultivate more.

About education, Sir, Government is spending Rs. 33 and odd crores but what is the result in S.S.C and S.S.L.C.? Only 30 per cent of the boys have passed. What about others and who is responsible for this failure? It is not the parents nor the students nor the teachers but it is the Government that is responsible for this failure in such great numbers. Government is supplying teachers to schools at the fag end of the year and not at the beginning. This is the result and this is the result cause for the failure of the students. Now Secondary teachers are getting their pay by cheques. Government should take over all the private schools to their fold. Unless they do that, the quality of education will never rise.

About medical and health services, in Belgaum there is a big building for civil hospital, but there is no medicine, no X'ray apparatus, no proper equipments or instruments. On the 15th, 16th, 17th and 18th of last month, there was not a drop of water in the Civil Hospital. Sir, what will be fate of the patients there under these conditions?

About prohibition, I for one, who favours prohibition. But the implementation of this law is not done properly. Those who are in charge of implementing the law themselves consume liquor. When that is the case, how are they going to prevent the offenders of this law? Therefore, I suggest that prohibition law must be scrapped.

About land revenue, Government announced before election that they are going to abolish land revenue. After the elections, they are saying that they have appointed a committee of the Cabinet to go into the matter. Sir, appointment of committee means nothing but delaying the matter. I submit that land revenue must be abolished forthwith. Take the instances of Orissa, Bihar and U.P. They have abolished land revenue. This Government should see that land revenue is abolished immediately in our State also.

About Co-operation, co-operative societies are for the good of the people. But, at present, the management of these societies are not good. There is politics in the societies and most of the societies are in the hands of the Congress party people who are aiming at non-allowing non-congress people to become share-holders of these societies. I suggest that every agriculturist shall be a member of a co-operative society.

About Police, police are tools in the hands of the Government. They always try to tease opposition members. I myself am a victim of it.

(SRI B. B. SAYANAK)

One S. P. when we were together talking, in the house of my friend. He beat me like anything and told me to touch his feet and say that I am not going to participate in the agitation. He was a recepient of the President's Medal. This is the condition of the police in our State. In Hukkeri taluk Daddy village bazzar was looted by Berods in day time, and the offenders have not yet been detected till now. It is shameful on the efficiency of the police. I submit, the duty of the police is to maintain law and order but they are not doing it.

About Siv Sena, my friends have already spoken about it. The Siv Sena has come into existence for the Marati people, that Marati people should get more and more opportunities in services of Maharashtra. That is the aim of Siv Sena and not to expel any non-Maharashtrian people or loot the shops of non-Maharashtrian people. That is not at all the aim of Siv Sena. The Maharashtra Government has condemned the aetivities of Siv Sena and the Home Minister of India has also condemned it. We are Indians first and then Maharashtrians. Therefore; I submit, do not be under the wrong impression that Siv Sena is hard on Kannadigas or any other people.

About elections to taluk boards and panchayats, the Government must hold elections to these bodies otherwise the old bodies who are not working well will continue their maladministration. I thank you for giving me the opportunity.

Sri M. Y. GHORPADE (Sandur).—Mr. Speaker, Sir, I would like to begin by saying that we are facing a very difficult situation and so the answer cannot be easy. Before I go into the budget, I think it is appropriate for me to point out and say that the two budget speeches made by the Finance Minister this year and last year, certainly have the merit of analytical clarity. He has tried his best to put before the House the financial situation as it is. Of course, people might have different opinions as to the solutions. But, as I already said, the solution cannot be easy and it is not sufficient to make cricitism of a general nature. It is necessary in this context to make specific suggestions and positive solutions because it is no use saying that we should have big plans but no taxation. Therefore we must come to brass tacks and I wish that the suggestions made by the opposition had been a little more comprehensive and positive in its nature. Sir, I for one would not like to hide the fact that the financial situation not only in Mysore State but probably in all the States in the country is pretty bad. I would also not like to hide the fact that the debt position, for instance, is alarming in all the States. As the Finance Minister has pointed out the debt position in the State is Rs. 313 crores and next year it will be 330 crores, of which approximately 250 crores will be the funds borrowed from the Centre. But we must view it in the context of the all-India picture. It is significant that in 1951 the debts of all the States in India was only 100 crores whereas in 1956 the loans due from

the States to the centre went up to 1,000 crores. In 1961 the debts due from the States to the Centre went up to 2,000 crores and today it is more than 3,000 crores. It is against this background that we will have to view our debt position. The Finance Minister also has admitted that the loan repayment was 14 crores for Mysore in the second plan, went up to 52 crores in the Third Plan and it is likely to be 100 crores in the fourth plan. There is nothing wrong in borrowing, provided the investment we make from borrowings gives us return sufficient to repay the loan. Here it is not sufficient to say that as against our borrowings of 330 crores Mysore has assets of 472 crores, book value. Here I would say that what is relevant is not the book value of the assets but the repaying capacity of these assets, whether these assets are giving enough financial return to repay the interest and repayment on the borrowings. I personally feel there would be no disputing the fact that most State Governments today have borrowed more than what they can repay and there is a chronic gap between what the assets are earning and what the interest and repayment on borrowings we have to make. I think it is necessary that the Finance Minister classifies all these investments in the State according to the returns and tells the House what is chronic gap between returns and the interest and repayment. I do not see any way in which this gap can be met from revenues surplus. I can frankly say that the ultimate solution would be that this will have to be written off. This is so because of the pattern of financing in the last 10 or 15 years. The Centre has given loans to the States not only for the purpose of earning assets but also for non-earning assets such as social welfare, education, health, etc. Therefore, this gap has developed in the finances of the State. It is very significant here to recollect what the Fourth Finance Commission had to say in this regard. It observed :

> "But as the burden of Central loans began to pile up and as the unproductive *i.e.*, non-revenue earning nature of a large part of it, *e.g.*, education, health, protective irrigation, *etc.*, became clear, the States felt that any further continuance of this policy by the Government of India could only mean that the Centre would ultimately take care not only of the interest, but also of the repayment liability of the whole debt at least that part of it which was not clearly productive of a net return equal to these obligations."

It is against this background that these loans have been taken and I personally feel that this is the crux of the problem of Centre-State Financial relationship. This cannot be evaded any longer I think the time has come when this question will have to be faced squarely and settled one way or the other. Otherwise no sane planning will be possible in any State. This is not a special difficulty or a special problem in Mysore. I know that all states are facing the same problem. I would say that the State Governments have all along inflated their revenue resources estimates with the idea of getting maximum assistance from the centre. This has been there. After all which State Government

(SRI M. Y. GHORPADE)

likes to incur the unpopularity of having a small plan compared to the neighbouring State ? It has been pointed out that in the Third Plan of Mysore, the State had undertaken to raise 110 crores and these calculations went wrong. For instance in his own words the finance Minister pointed out that, " the contribution from current revenues towards the Third Five Year Plan was estimated at 9.8 crores but ultimately it turned out to be deficit of 18 crores." He has also pointed out that "under Miscellaneous Capital Revenues, no surplus or deficit was assumed but ultimately it turned out to be a deficit of 45 crores." The Finance Minister said that loan repayments were estimated at only 25 crores in the Third Plan but ultimately it turned out to be 52 crores. Now, Sir, this shows as I stated, that every State has attempted to inflate the resources raising capacities in order to maximise financial assistances· from the centre on the assumption that if loans are given for unproductive purposes then the Centre will take care of it. The time has come when the Centre has to settle this and I think it is better it is placed before them more clearly. Even in the Fourth Plan the resources we have undertaken to raise is 199 crores. I do not know what the assumptions are. But the Finance Minister himself has been good enough to point out that the D.A. increase itself will cost about 25 crores which has not been taken into account in estimating the resources that we can raise in the Fourth Plan. I understand that if the Gajendragadkar report is implemented then it will cost Several crores which also has not been taken into account. I think it is necessary for the Government to break up these estimates more clearly, put it specifically to the legislature that these are the assumptions on which you hope to raise the resources and if the members of this House do not agree to the taxation or the methods of raising resources, the only alternative left is to cut down the plans. I feel a time has come to put it as squarely as possible and at the same time there is no gainsaying of the tremendous amount that has to be done. For instance, drinking water has not been provided in many villages. Take the case of irrigation. Whatever is said, it cannot be denied that if the 8 per cent irrigation that we have is to be increased to 26 per cent, it is possible in the next 15 years. If we do not do it, after that, it may not be possible. There is tremendous need to tap the sub-soil water by borewells. All this requires money. For instance the Techno-Economic Survey of the National Institute of Applied Economic Research estimate that not less than 2,800 crores are required to be spent in about 15 years, (1961-76) to tap the potentialities of Mysre. It is obvious that this cannot come from the revenue surplus when we are finding it difficult even to pay the interest and the revenue surplus has not kept pace with the credit gap. It is obvious that this will have to come from loans and if we take loans we must take it in such a manner that we are capable of repaying them. I welcome the idea of the World Bank coming into the picture for Upper Krishna. It would be better if the old idea of River Boards, irrespective of the State

boundaries, is taken up and some sort of autonomous bodies are set up to finance and develop these areas. It is necessary that these things are removed out of politics and put on a commercial basis when alone it will be possible to get massive aide even from international agencies. After all major irrigation schemes are there. We know that the irrigation rates in the State are one-third of what it is in Maharashtra. Unless those schemes are made to give a proper return Government will not get money to do many things like minor irrigation. Therefore, I suggest that an Irrigation Commission is necessary for Mysore. Maharashtra had set up an Irrigation Commission under the competent chairmanship of the late Sri Barve which can put the irrigation rates on a sound basis.

So far as Rural Electrification is concerned, if Madras has been able to electrify all the villages, it is for the simple reason that they gave sufficient priority to rural electrification from the very beginning of the plans, which we have not done and it is high time we do it. It will never be unremunerative if lines are drawn in each taluka according to the cluster of villages in those taluks.

3–00 P.M.

Regarding non-development expenditure and the Gajendragadkar Report, I would say that it is good of the Centre to have consulted the State Government on the Gajendragadkar Report which they did not do last time. It gives a chance for the State Government to say clearly what they have in mind. At the same time I feel that the State Government should reciprogate that convention by at least consulting the Centre and the Planning Commission whenever they think of reducing taxes. Recently I saw a notification which contemplates reducation in water rate. Unilateral reduction of taxes like land revenue, water rates, etc. is not a wise policy. We must consult the Planning Commission and the Centre on these matters because we depend heavily upon them. So far as the Gajendragadkar Report is concerned, I think we should make it clear that D.A., though it may be considered non-development or non-plan or whatever you may choose to call it, is going to be a burden of Rs. 60 crores and it should be treated as committed expenditure which must be financed wholly by the Centre. It is no use calling it non-development or non-plan expenditure. If it is to be paid, it has to be paid before planning and development can take place. Therefore, I feel that we should not mince matters on that.

So far as rasing prices are concerned, I would like to say that it is not something that this Government has done. Perhaps many people may not be aware that the real output in 1966-67 was perhaps lower than the real output in 1964-65 at constant prices. That is because of the food shortage and the lack of rainfall in the last two years. At the same time the money supply in the country has increased during the last two years by 20 per cent. Naturally, the result has been that prices have gone up by 30 or 40 per cent and I feel that the only way of softening this is not

(SRI M. Y. GHORPADE)

merely by D.A. increase but by some attempt to ensure foodgrains and essential commodities to the vulnerable sections including Government servants at a certain level. I can say from my personal experience of handling labour—that if you merely increase the D.A. that only puts up the price and the real wages remain where they are. Instead of that, if money is given to subsidise certain articles so that the effect of prices could be softened on essential commodities, it will be of a more direct benefit. At any rate, dearness allowance alone will not solve the problem unless this Government actively procures grains and is determined to distribute it at reasonable rates. It is unfortunate that we did not fulfil our procurement target last year. I think the Food Minister said that we have reached only 50 per cent of the target of 2½ lakh tons. It is well known that the procurement target of our State is low compared to other States ; this can also be stepped up.

While summarising, I wish to put before the House certain concrete and positive conclusions and suggestions for the consideration of the Finance Minister and other Members of this House.

There should be an economic classification of the Mysore Government's budget where the surplus of current revenues over non-development outlay should be carefully nurtured. As I have already said, the loans should be classified according to their returns and the chronic gap between the return and liability on the loans should be deterined. Such of the loans which cannot be specifically related to revenue—yielding assets should be separately colculated and that, I am afraid, will have to be written off at Some Stage by the Government of India. We must closely examine whether such of the loans which can be ralated to projects which are expected to give a financial return are giving the return which they should give ; if they are not they should be made to yield that return.

So far as overdraft is concerned, it has to be kept to the minimum and probably the House is aware that according to the new procedure adopted by the Reserve Bank while the State Government will have more flexibility in their ways and means position, it will not be possible for any State Government to resort to overdrafts indiscriminately for any length of time. It is interesting to note that during 1966-67 overdrafts amounting to Rs. 108 crores of the vorious State Governments were paid by the Centre. Therefore, I feel that further loans should be specifically tied to revenue-yielding assets.

I would like to say that for non-revenue yielding items like Education, Health and Social Services, the Government of India should give grants and not loans because there is no sense in giving loans for such items. This is something which has to be put to the Central Government most forciblly. The level of Central Grants to the States should be determined on more scientific basis taking into account not only the taxable capacity of the State but also the need to maintaining

social services at a certain level throughout the country and avoid disparities. Therefore the suggestion which I have made and which I wish to make again in the present context is that the Central Finance Commission should function on a continuous basis. Today the Finance Commission is appointed once in five years and that to only to deal with the Sharing of central taxes; this is not satisfactory. The present Finance Commission does not deal with loans and grants from the Centre. It should have power to go into the entire grant of Centre—State financial relations. The artificial distinction between plan and non-plan expenditure should also go away., After all, there is no point in saying that interest charges or administrative charges are non-plan expenditurel they have to be paid; officers have to be paid. This artificia distinction should go, and more emphasis should be placed on developmental expenditnre. It goes without saying that the non-developmental expenditure should be kept to the minimum.

Similarly, I feel that it is high time that at the State level also there is a Finance-*cum*-Planning Commission, consisting of experts who really know the subject so that they can apply their mind day in and day out and watch the development of financial relations between the State and the Centre. This is extremely essential because otherwise this post-mortem examination which is done too late will not be of any use. If such a Finance-*cum*-Planning Commission is set up at the State level it can watch the State-Centre financial relations and suggest timely remedial measures and it can also take care of the financial relations between the State Government and the local bodies because they will also have to be governed on the same principle as the relationship between the Centre and the States. Therefore I appeal that these things should be taken into account and we should not take hasty steps to reduce taxes like land revenue. I do not see the reason why we have suddenly developed so much political consideration for the farmer. After all, the farmer is not grudging the payment of this small land tax especially in these days of higher prices for his produce. I think it was the Madras Government which started this idea, but today even Madras is not thinking of abolishing land revenue. It is thinking more as a face saving device to modify land revenue at the same time seeing that the total income that it gets from land revenue is not very much affected. Therefore, whether we call it land revenue or water tax, we should not be hasty in reducing it. We should always take steps in this direction in consultation with the Centre and the Planning Commission from whom we expect huge financial assistance for the proper development of Mysore State. I feel that thought should be given to these things and some positive politics should emerge out of these discussions to assist the Finance Minister to take strong action. Damocracy cannot be a sort of licence for either irresponsible criticism or convenent evasion. Democracy to my mind is a process of maturity by which we learn to face our problems without a sense of uudue pride or prejudice. It is in this spirit that I have tried to place a few facts for the consideration of

(SRI M. Y. GHORPADE)

the Finance Minister and the House and I trust that they will take it in the same spirit. I thank Mr. Speaker and the House for giving me such a patient hearing.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—ಮಾನ್ಯ ಸಭಾಪತಿಗಳೇ, ಇಂದು ನಾವು ಚರ್ಚೆ ಮಾಡುತ್ತಿರುವ ಈ ವರ್ಷದ ಮುಂಗಡಪತ್ರ ನಿರಾಶಾದಾಯಕವಾಗಿದೆ. ಇದರಲ್ಲಿ ಧೈರ್ಯ, ಧೃಢತೆ ಕಾಣುತ್ತಿಲ್ಲ. ಈ ಬಡ್ಜೆಟ್ ಓವರ್ ಡ್ರಾಫ್ಟ್‌ನ ಮೇಲೆ ಅವಲಂಬಿಸಿದಂತಿದೆ. ಅವ್ಯವಸ್ಥಿತವಾದ ಯೋಜನೆಯು ಸಾಲದ ಮತ್ತು ತೆರಿಗೆಗಳ ಹೊರೆಯನ್ನು ಹೆಚ್ಚಿಸಿದೆ. ಈಗ ಸರ್ಕಾರ ಮತ್ತೆ ಆರೂವರೆ ಕೋಟಿ ರೂಪಾಯಿಗಳ ಸಾಲವನ್ನು ಹೊಸದಾಗಿ ಎತ್ತುವ ಏರ್ಪಾಡನ್ನು ಮಾಡಿದೆ. ಇದನ್ನು ಜನಸಾಮಾನ್ಯ ಹೊರಲು ತುಂಬಾ ಭಾರವಾಗಿದೆ. ಅವನಿಗೆ ಶಕ್ತಿ ಇಲ್ಲ. ಜನಸಾಮಾನ್ಯರ ಸ್ಥಿತಿಯನ್ನು ಅರಿಯದ ಮಾನ್ಯ ಅರ್ಥಮಂತ್ರಿಗಳು ಇನ್ನೂ ಆರುವರೆ ಕೋಟಿ ರೂಪಾಯಿಗಳ ಹೊಸ ಸಾಲವನ್ನು ಎತ್ತಲು ಸಂಚುಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅನೇಕ ಜನರಿಗೆ ಸರಿಯಾಗಿ ಅನ್ನವಿಲ್ಲ, ಬಟ್ಟೆ ಇಲ್ಲ, ಅನೇಕರು ನಿರುದ್ಯೋಗಿಗಳಾಗಿದ್ದಾರೆ. ಇಂತಹ ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಬಡ ಜನಗಳು ಹೆಚ್ಚಿನ ತೆರಿಗೆಗಳನ್ನು ಕೊಡಲು ಹೇಗೆ ಸಾಧ್ಯವೆಂಬುದನ್ನು ಸರ್ಕಾರ ನೋಡಬೇಕು. ಹಣದುಬ್ಬರವನ್ನು ತಡೆಹಿಡಿಯುವ ಯಾವ ಕಾರ್ಯಕ್ರಮವನ್ನೂ ಈ ಸರ್ಕಾರ ಈ ಬಡ್ಜೆಟ್ಟಿನಲ್ಲಿ ಸೂಚಿಸಿಲ್ಲ. ಆದ್ದರಿಂದ ಈ ಬಡ್ಜೆಟ್ ಬಹಳ ನಿರಾಶಾದಾಯಕವಾಗಿದೆ. ಆದರೆ ಇದು ಆಶಾದಾಯಕವಾಗಿದೆಯೆಂದು ಅರ್ಥಮಂತ್ರಿಗಳು ಹೇಳಿದ್ದನ್ನು ಕೇಳಿ ನನಗೆ ಶೋಚನೀಯವಾಗಿದೆ. ನಮ್ಮ ಅರ್ಥಮಂತ್ರಿಗಳು ಮಾರಾಟ ತೆರಿಗೆಯಲ್ಲಿ ತಿದ್ದುಪಡಿ ಮಾಡಿ ಇಷ್ಟರಲ್ಲಿಯೇ ಶೇಕಡ ಎರಡು ಅಥವಾ ಮೂರರಷ್ಟು ಹೆಚ್ಚಿಗೆ ತೆರಿಗೆಗಳನ್ನು ಹಾಕಲು ಏರ್ಪಾಡು ಮಾಡುತ್ತೇವೆ ಎಂಬುದಾಗಿ ಅವರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇವರು ಚುನಾವಣೆಯ ಸಮಯದಲ್ಲಿ ಜನಗಳಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರೋ ಅದನ್ನು ಮಾಡುತ್ತಾ ಇಲ್ಲ. ಸಮಾಜವಾದಿ ಸಮಾಜರಚನೆ ಸ್ಥಾಪನೆ ಮಾಡುತ್ತೇವೆ, ಬಡವರನ್ನು ಉದ್ಧಾರಮಾಡುತ್ತೇವೆ ಎಂಬುದಾಗಿ ಹೇಳಿದ್ದನ್ನು ಇವರು ಮರೆತಿರುವುದರಿಂದ ಇವತ್ತು ಬಂಡವಾಳಸ್ಥರು ಹೆಚ್ಚು ಬಂಡವಾಳಸ್ಥರಾಗುತ್ತಿದ್ದಾರೆ, ಬಡವರು ಹೆಚ್ಚು ಬಡವರಾಗುತ್ತಿದ್ದಾರೆ. ಬಿರ್ಲಾ ಕಂಪೆನಿಯವರಲ್ಲಿ ವ್ಯವಹಾರ ನಡೆಸಿ ಸುಮಾರು 600ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಬೊಂಬಾಯಿನಿಂದ ಹೆಚ್ಚಿಗೆ ಕೈಗಾರಿಕೋದ್ಯಮಿಗಳನ್ನು ಇಲ್ಲಿಗೆ ಕರೆಸಿ ಅವರಿಂದ ಇಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಇವರು ಹೇಳಿರುವುದನ್ನು ನೋಡಿದರೆ ಇದು ಬಹಳ ಶೋಚನೀಯವಾದ ಸಂಗತಿಯಾಗಿದೆ. ಇದರಿಂದ ಸ್ಥಳೀಯ ಕೈಗಾರಿಕೋದ್ಯಮಿಗಳಿಗೆ ಬಹಳ ಅನ್ಯಾಯವಾಗುತ್ತದೆ, ಬಂಡವಾಳಸ್ಥರನ್ನು ಬಂಡವಾಳಸ್ಥರನ್ನಾಗಿ ಮಾಡುವುದು ಸಮಾಜವಾದೀ ಸಮಾಜರಚನೆಯ ತತ್ವವೇ? ಇದರಿಂದ ಕಾಂಗ್ರೆಸ್ ಸರ್ಕಾರ ತಮ್ಮ ತತ್ವವನ್ನೇ ದೂರಮಾಡಿದೆಯೆಂದು ಗೊತ್ತಾಗುತ್ತದೆ. ನಾಲ್ಕನೆಯ ಮಹಾ ಚುನಾವಣೆಯ ಮೊದಲು, ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಜನತೆಗೆ ಕೊಟ್ಟ ಭರವಸೆಯನ್ನು ಈ ಸರ್ಕಾರ ಕಾರ್ಯಗತಮಾಡಿಲ್ಲ. ರದ್ದು ಮಾಡುತ್ತೇವೆಂದು ಹೇಳಿದ ಭೂಗಂದಾಯ ಇನ್ನೂ ಪರಿಶೀಲನೆಯ ಮಟ್ಟದಲ್ಲಿದೆ. ''ಅಳಿಯನಲ್ಲ ಮಗಳ ಗಂಡ'' ಅಂದ ಹಾಗೆ ಭೂಗಂದಾಯದಲ್ಲ, ''ವ್ಯವಸಾಯ ತೆರಿಗೆ'' ಉಂಟು ಎಂದು ಹೇಳುತ್ತಾರೆ. ಇದು ವೇಷ ಬದಲಾವಣೆಯ ಮಾತು. ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕನ್ನುವಾಗ ಆಹಾರದಲ್ಲಿ ಸ್ವಾವಲಂಭನೆಯನ್ನು ಸಾಧಿಸಬೇಕಾಗಿರುವುದರಿಂದ ಈಗ ಹೊಸ ತೆರಿಗೆ ಇರಬಾರದು. ಅದನ್ನು ರೈತರಿಂದ ವಸೂಲು ಮಾಡಬಾರದು. ಶ್ರೀ ರಾಮಕೃಷ್ಣ ಹೆಗಡೆಯವರ ರೈತನಿಗೆ ಈಗ ತೋರಿಸಿರುವ ಅತೃಪ್ತಿ ಇದು. ಅದು ಬೇಡ. ಆಹಾರ ಸ್ವಾವಲಂಬನೆಯಾಗುವವರೆಗೆ ಕಂದಾಯ ರದ್ದಾಗಬೇಕು. ವ್ಯವಸಾಯ ತೆರಿಗೆ ಮನ್ನಾ ಆಗಬೇಕು. ಯಾವ ವಿಧವಾದ ಹೊಸ ತೆರಿಗೆಯೂ ಬೇಡ. ಒಟ್ಟಿನಲ್ಲಿ ವ್ಯವಸಾಯಾಭಿವೃದ್ಧಿಗಾಗಿ ಕಂದಾಯ, ತೆರಿಗೆಗಳನ್ನು ಹೆಚ್ಚುಮಾಡುವುದು ಬೇಡ. ಬೇರೆ ಬಾಬುಗಳಿಗೆ ಅಷ್ಟೇ ಹಾಕಿ ಅಥವಾ ಇನ್ನೂ ಹೆಚ್ಚಿಗೆ ಹಾಕಿ ವಸೂಲುಮಾಡಿ. ಇವತ್ತು ನೀವು ಬಹಳ ಆನಂದದಿಂದ ಇದ್ದೀರಿ. ಆದರೆ ಹಳ್ಳಿಗಾಡಿನ ಸ್ಥಿತಿಯನ್ನು ಇವತ್ತು ನಾವು ನೋಡಿದರೆ ಅಲ್ಲಿನ ಗ್ರಾಮಾಂತರ ಜನಗಳು ಭಿಕ್ಷಾಪಾತ್ರೆಯನ್ನು ಕೈಲಿ ಹಿಡಿದು ಹೊಟ್ಟೆಗೆ ಹಿಟ್ಟಿಲ್ಲದೆ, ಅನ್ನವಿಲ್ಲದೆ ಅಲೆದಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಸ್ಥಿತಿ ಉಂಟಾಗಿದೆ. ಕೆಲವರು ಈಗ ಮಳೆ ಬಂದಿದೆ, ಇನ್ನುಮುಂದೆ ಅನುಕೂಲವೆಂದು ಹೇಳುತ್ತಾರೆ. ಅದು ಭ್ರಮೆಯಷ್ಟೇ. ಅವರು ಬಹಳ ಕಷ್ಟ ಸ್ಥಿತಿಯಲ್ಲಿದ್ದಾರೆ. ಅಂತಹವರಿಗೆ ಹೆಚ್ಚುಹೆಚ್ಚು ಬೆಳೆಯಲು ವ್ಯವಸಾಯ ಉಪಕರಣಗಳ ಸಹಾಯ ಹಾಗೂ ಸಲಕರಣೆಗಳನು ಒದಗಿಸಬೇಕು. ಕಾಂಗ್ರೆಸ್ ಸರ್ಕಾರವಾದಮೇಲೆ

ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಅಭಿವೃದ್ಧಿಕಾರ್ಯಗಳು ಆಗಿಲ್ಲ. ಇಂದು ಒಂದು ದೊಡ್ಡ ಆಂದೋಳನವೇ ನಡೆಯುವ ಕಾಲ ಒದಗಿದೆ ಎಂದು ನಾನು ಹೇಳಬೇಕಾಗಿದೆ. ಅಂತಹ ಪರಿಸ್ಥಿತಿಗೆ ರಾಜ್ಯವನ್ನು ಇವರು ತರಬಾರದು. ಖೋತಾ ಆರ್ಥಿಕ ವ್ಯವಸ್ಥೆ ಇರಬಾರದೆಂದು ತನಗೆ ಸಿಗುವ ಸಂಪನ್ಮೂಲಗಳ ಮಿತಿಯಿಂದಲೇ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡಲು ದಾರಿಯನ್ನು ಮಾಡುವುದಾಗಿ ರಾಷ್ಟ್ರದ ಉಪಪ್ರಧಾನಿಗಳಾದ, ಅರ್ಥಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಹೇಳಿದ್ದಾರೆ. ಅದೇ ರೀತಿ ರಾಜ್ಯ ಸರ್ಕಾರದ ಅರ್ಥಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ನಮಗೆ ಆ ರೀತಿ ಭರವಸೆಯನ್ನು ನೀಡಿದ್ದರೆ ಚೆನ್ನಾಗಿತ್ತು. ಅಂತಹ ಯಾವ ಭರವಸೆ ಯನ್ನೂ ನಮಗೆ ಇಲ್ಲಿ ಅವರು ಕೊಟ್ಟಿಲ್ಲವೆಂದು ಹೇಳಬೇಕಾಗಿದೆ.

ಕಳೆದ ಹತ್ತು ವರ್ಷಗಳಿಂದಲೂ ಆಹಾರದ ಬಗ್ಗೆ ಸ್ವಯಂಪೂರ್ಣತೆ ಹೊಂದುವಂತೆ ಮಾಡುತ್ತೇ ವೆಂದು ಈ ಕಾಂಗ್ರೆಸ್ ಸರ್ಕಾರ ಭರವಸೆ ನೀಡುತ್ತಲೇ ಬಂದಿದೆ. ಆದರೆ ಅದನ್ನು ಸಾಧನೆ ಮಾಡುವು ದರಲ್ಲಿ ಈ ಸರ್ಕಾರ ವಿಫಲತೆಯನ್ನು ಹೊಂದಿದೆ. ಮಾನ್ಯ ಅರ್ಥ ಸಚಿವರು ಈ ವಿಫಲತೆಯನ್ನು ಒಪ್ಪಿಕೊಳ್ಳಲೇಬೇಕು. ಮತ್ತೆ ಮತ್ತೊಂದು ಭರವಸೆಯನ್ನು ನೀಡಿದ್ದಾರೆ. ಅದೇನೆಂದರೆ, ಇನ್ನು ಮೂರು ನಾಲ್ಕು ವರ್ಷಗಳಲ್ಲಿ ರಾಜ್ಯದ ಅಕ್ಕಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣತೆಯನ್ನು ಹೊಂದು ತ್ತದೆಂದು. ಇವರ ಆಶ್ವಾಸನೆಗಳೆಲ್ಲಾ ಕೇವಲ ಗಾಳಿಗೋಪುರವಿದ್ದಹಾಗೆ ಇವೆ. ಇವರನ್ನು ನಂಬುವವರು ಯಾರು ? ಕಳೆದ 20 ವರ್ಷಗಳ ಆಡಳಿತದಿಂದ ಇವರು ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಮಾರ್ಗವನ್ನೇನೂ ಮಾಡಿಲ್ಲ. ಎಲ್ಲಿ ಆಹಾರೋತ್ಪತ್ತಿಯನ್ನು ಹೆಚ್ಚು ಮಾಡಬಹುದೋ ಅಂತಹ ಕಡೆಗಳಲ್ಲಿ ಇವರ ಪ್ಲಾನಿನಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಲಿಲ್ಲ. ದೇಶಾಭಿವೃದ್ಧಿ ಕಾರ್ಯ ಗಳಿಗೆ ಹೆಚ್ಚು ಹಣವನ್ನೂ ಸಹ ದೊರಕಿಸಿಕೊಳ್ಳಲಿಲ್ಲ. ಕೇಂದ್ರದಿಂದಲೂ ಸಾಕಷ್ಟು ಹಣ ಸಹಾಯ ವನ್ನೂ ಕೂಡ ಪಡೆಯಲಿಲ್ಲ. ಇವತ್ತು ಇದರಿಂದ ಅನೇಕ ಜನರನ್ನು ಸಾಲಗಾರರನ್ನಾಗಿ ಮಾಡಿ ಈ ರಾಜ್ಯ ಹೆಚ್ಚು ಹೆಚ್ಚು ಸಾಲವನ್ನು ಹೊರಶಕ್ಕ ಯೋಚನೆಮಾಡಿ ಒಂದನೇ, ಎರಡನೇ ಮತ್ತು ಮೂರನೇ ಯೋಜನೆಗಳಲ್ಲಿ ಒದಗಿಸಲಾಗಿದ್ದಂಥ ಹಣವನ್ನು ವೃಥಾ ಖರ್ಚುಮಾಡಿದರೇ ವಿನಾ ಯಾವ ಒಂದು ಪ್ರಗತಿಯೂ ಸಾಮಾನ್ಯ ಮನುಷ್ಯನಿಗೆ ಆಗಿಲ್ಲ. ನಮ್ಮ ಪಂಚವಾರ್ಷಿಕ ಯೋಜನೆಗಳ ಅರಿವು ಸೇಕಡ 80ರಷ್ಟು ಇರತಕ್ಕ ಗ್ರಾಮಾಂತರ ಪ್ರದೇಶಗಳ ಜನರಿಗೆ ಗೊತ್ತಾಗಲಿಲ್ಲ. ಈ ಕಾಂಗ್ರೆಸ್ ಸರ್ಕಾರದವರು ಎರಡು ಬಾರಿ ರೂಪಾಯಿನ ಅಪಮೌಲ್ಯ ಮಾಡಿ ನಮ್ಮ ಆರ್ಥಿಕ ಸ್ಥಿತಿಯನ್ನು ಹದಗೆಡಿಸಿದರು. ಇಂದು ಆಹಾರದ ಬೆಲೆ ಮುಗಿಲು ಮುಟ್ಟಿತು. ಬಡವನಿಗೆ ಕಷ್ಟ ಹೆಚ್ಚಿತು. ಎಲ್ಲೆಲ್ಲೂ ಕಾಳಸಂತೆ ವ್ಯಾಪಾರ ಹೆಚ್ಚಾಯಿತು. ಒಂದು ರೂಪಾಯಿನ ಬೆಲೆ ಈಗ 65 ಪೈಸೆ, ಅಂತೆಯೇ ಒಂದು ರೂಪಾಯಿ ಆಹಾರ ಧಾನ್ಯಗಳ ಬೆಲೆ ಒಂದು ರೂಪಾಯಿ 35 ಪೈಸೆಗೆ ಏರಿದೆ. ಇದು ಬಡವರನ್ನೂ, ನಿರ್ಗತಿಕರನ್ನೂ, ಹಾಳು ಮಾಡುವ ನೀತಿಯಲ್ಲವೇ ? ಈಗ ಈ ರಾಜ್ಯದ ಸಾಲ 313 ಕೋಟಿ 36 ಲಕ್ಷ. ಇದು 1968 ಹೊತ್ತಿಗೆ 330 ಕೋಟಿ 85ಲಕ್ಷಕ್ಕೆ ಏರುತ್ತದೆಂದು ನಮ್ಮ ಅರ್ಥಮಂತ್ರಿಗಳಾದ ಶ್ರೀರಾಮಕೃಷ್ಣ ಹೆಗಡೆಯವರು ಆಯವ್ಯಯವನ್ನು ಮಂಡಿಸುವಾಗ ತಿಳಿಸಿದ್ದಾರೆ.

ಈ ವರ್ಷ 30·21 ಕೋಟಿ ಸಾಲ ವಾಪಸ್ ಮಾಡುತ್ತೇವೆಂದು ಸೂಚನೆ ಇದ್ದರೂ 17 ಕೋಟಿ 41 ಲಕ್ಷ ಸಾಲದ ಹೊರೆಯನ್ನು ಮೊದಲಿಗಿಂತ ಈ ವರ್ಷ ಹೆಚ್ಚಿತು. ಅಯ್ಯೋ ಇದೆಂತಹ ಬಡ್ಜೆಟ್ ಇದರಲ್ಲಿ ನಾವು ಕಾಣುವುದು ಅತೃಪ್ತಿಕರವಾದ ಆಯವ್ಯಯದ ಹಾದಿ, ಇದರಲ್ಲಿ ಸ್ವಾವಲಂಬನೆಯ ಭರವಸೆ ಖಚಿತವಾಗಿಲ್ಲ. ನಮ್ಮ ಲೀವಿಂಗ್ ಸ್ಟ್ಯಾಂಡರ್ಡ್ 1ಕ್ಕೆ 2, 3, 4, 10, 50, 80 ಏರಿದೆ. ಅದಕ್ಕೆ ತಕ್ಕ ಉತ್ಪತ್ತಿಯ ಫಲ ದೊರಕಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರಿ ನೌಕರರ ವೇತನ ಹೆಚ್ಚಿಸಲು 30 ಕೋಟಿ ಖರ್ಚಾಗಿದೆ ಎಂದೂ ಹೇಳಿದ್ದರೂ ನೌಕರರಿಗೆ ತುಂಬಾ ಅತೃಪ್ತಿ ಇದೆ. ಅವರಿಗೆ ಕೇಂದ್ರ ಸರ್ಕಾರದವರು ಕೊಡುವ ವೇತನಕ್ಕೆ ಸರಿಸಮನಾಗಿ ಎಲ್ಲಾ ರಿಯಾಯಿತಿಯನ್ನು ಕೊಡುವುದು ನ್ಯಾಯಬದ್ಧವಾಗಿದೆ. ಇದನ್ನು ರಾಜ್ಯ ಸರ್ಕಾರ ಪರಿಶೀಲಿಸ ಬೇಕು. ಅವರಿಗೆ ಪೂರ್ಣ ರಕ್ಷಣೆ ಈ ಬಗ್ಗೆ ಕೊಡಬೇಕು.

ರಾಜ್ಯಸರ್ಕಾರಕ್ಕೆ ಕೇಂದ್ರ ಕೊಡುವ ಹಣದ ಮೇಲೆ ತುಂಬಾ ನಿರ್ಬಂಧಗಳಿವೆ. ಯೋಜನೆ ಗಳು ಕಾರ್ಯಗತವಾಗಲು ತುಂಬಾ ತಡವಾಗುತ್ತದೆ; ಮತ್ತು ಇದರಿಂದ ತೊಂದರೆಗಳು ಉದ್ಭವಿಸುತ್ತವೆ. ಇದನ್ನು ಕೂಡಲೇ ರಾಜ್ಯಸರ್ಕಾರ ಸರಿಪಡಿಸಿಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆಯವರು ಈಗಿನ ಸ್ವರೂಪದ ಭೂಕಂದಾಯವನ್ನು ರದ್ದುಮಾಡಿದ್ದೇ ವೆಂದು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದನ್ನು ತಮ್ಮ ಭಾಷಣದಲ್ಲಿ ಸೂಚನೆ ಇದೆಯೆಂದು ಸಾಮಾನ್ಯ ಜನರಿಗೆ ತಿಳಿಸಿದ್ದಾರೆ. ಆದರೆ ಮತ್ತೊಂದು ಸ್ವರೂಪದ ವ್ಯವಸಾಯ ಆದಾಯ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ತೆರಿಗೆಯನ್ನು ರೈತನ ಮೇಲೆ ಈಗ ಹಾಕಲು ಸನ್ನಾಹ ಮಾಡಿದ್ದಾರೆ. ಅವರಿಗೆ ತೊಂದರೆ ಕೊಡುವ ಮಾರ್ಗ ಇದು, ಈಗ ರೈತರಿಗೆ ಭಾರ ಹೆಚ್ಚಿತು. ಇದನ್ನು ಈ ಸರ್ಕಾರ ತಪ್ಪಿಸಿಲ್ಲ. ಯೋಜನಾ ಆಯೋಗದವರ ಮತ್ತು ಧನ ಆಯೋಗದವರ ಕಾರ್ಯಗಳು ಹೆಚ್ಚು ಕಡಿಮೆ, ಒಂದೇ ರೀತಿ ಯಲ್ಲಿದ್ದರೂ ರಾಜ್ಯದ ಹಿತಸಾಧನೆಗೆ ಧಕ್ಕೆಯುಂಟಾಗಿದೆ. ಅದನ್ನು ರಾಜ್ಯಸರ್ಕಾರ ಸರಿಪಡಿಸ ಬೇಕು.

1967ನೇ ಶೇಕಡಾ 4ರ ಅಭಿವೃದ್ಧಿ ಸಾಲ ತೀರಿಸಬೇಕು. ಈ ಬಗ್ಗೆ ಮತ್ತೆ 6½ ಕೋಟಿ ಸಾಲ ಎತ್ತಲು ಸರ್ಕಾರ ನಿರ್ಧರಿಸಿರುವುದು ನಾಚಿಕೆಗೇಡುತನ, 20 ವರ್ಷಗಳ ಕಾಲ ಆಡಳಿತ ನಡೆಸಿ, ಪ್ರಾಪ್ತ ವಯಸ್ಕರಾದರೂ ಈ ಸರ್ಕಾರ ಇಲ್ಲಿ ಮಕ್ಕಳ ಆಟವನ್ನೇ ಆಡಿಬಿಟ್ಟಿದೆ. ಸರ್ಕಾರ ವೆಂಬ ಈ ಸಂಸಾರದಲ್ಲಿ ಎಲ್ಲರಿಗೂ ಭಿಕ್ಷಾ ಪಾತ್ರೆ ಕೈಗೆ ಕೊಟ್ಟು ಎಲ್ಲರನ್ನು ''ಭವತೀ ಭಿಕ್ಷಾಂದೇಹಿ'' ಎಂದು ಹೇಳುತ್ತಾ ಬೀದಿ ಬೀದಿ, ಮನೆ ಮನೆ ಅಲೆಯುವಂತೆ ಮಾಡಿದ್ದಾರೆ.

ಬ್ಯಾಂಕುಗಳು ಜೀವವಿಮಾ ಕಾರ್ಪೊರೇಷನ್ ಹೆಚ್ಚಾಗಿ ಸಾಲಕೊಡಲು ಮುಂದೆ ಬಾರದೇ ಇದ್ದರೆ ರಾಜ್ಯಸರ್ಕಾರದ ಗತಿ ಏನು ? ಕೇಂದ್ರ ಸರ್ಕಾರ ಒಂದೇ ರೀತಿಯ ನೀತಿ ನಿರೂಪಿಸದಿದ್ದರೆ, ಇವರಿಗೆ ಎಲ್ಲಿ ಸಾಲ ದೊರಕೀತು, ಇವರ ಅಂದಾಜು ವೆಚ್ಚ ಹೇಗೆ ಸರಿದೂಗೀತು ? ಕೇಂದ್ರದ ಸಹಾಯ ಇಲ್ಲವಾದರೆ ಎಲ್ಲವೂ ತಲೆಕೆಳಕು ತಿರುಗುಮುರುಗು ಆಗುತ್ತದೆ. ಇದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಯೋಚನೆ ಮಾಡಬೇಕು.

ಇನ್ನು 450 ಕೋಟಿ ರೂಪಾಯಿಗಳ ಮೈಸೂರು ರಾಜ್ಯದ ನಾಲ್ಕನೇ ಪಂಚವಾರ್ಷಿಕ ಯೋಜನೆ ಇಂದು 421ಕ್ಕೆ ಇಳಿಯಿತು. ಇನ್ನು ಕಡಿಮೆಯಾಗುವುದೇನೋ ಎಂಬ ಶಂಕೆ ಇದೆ. ಈ ಯೋಜನೆಯಲ್ಲಿ ಕೂಡಲೇ ಉತ್ಪತ್ತಿ ಕೊಡುವ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡಿದ್ದರೆ ನಮ್ಮ ಆಹಾರ ಸಮಸ್ಯೆ ಇಷ್ಟು ಬೃಹದಾಕಾರವಾಗಿ ಏರುತ್ತಿರಲಿಲ್ಲ. ಈಗಲಾದರೂ ಈ ಸರ್ಕಾರ ಇದನ್ನರಿತು ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಆಹಾರದ ಉತ್ಪತ್ತಿಯನ್ನು ತಕ್ಷಣ ಕೊಡುವ ಕೆಲಸಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಬೋರತಾ ಆರ್ಥಿಕ ವ್ಯವಸ್ಥೆ ಇಲ್ಲ ವಾದರೂ ತಮಗೆ ದೊರಕುವ ಸಂಪತ್ಮೂಲಗಳ ಮಿತಿಯೊಳಗೆ ಯೋಜನೆಗಳನ್ನು ಮಾಡಬೇಕೇ ಹೊರತು, ಸಾಲದ ಹೊರೆಯನ್ನು ಹೆಚ್ಚಿಸಬಾರದು. ಕನ್ನಡ ನಾಡಿನಲ್ಲಿ ಕನ್ನಡದ ಜಾಗೃತಿಯನ್ನು ಹೆಚ್ಚಿಸಲು ಸರ್ವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಹರಿಜನರ ವಿಷಯವನ್ನು ಹೇಳುವುದಾದರೆ, ಹರಿಜನರ ಪ್ರಗತಿ ಈ ಕಾಂಗ್ರೆಸ್ ಸರ್ಕಾರ ದಲ್ಲಿ ಅಧೋಗತಿಗೆ ಇಳಿದಿದೆ. 100ಕ್ಕೆ 18ರಂತೆ ನಿಮ್ನವರ್ಗ ಮತ್ತು ನಿಮ್ನ ಪಂಗಡಗಳಿಗೆ, ಸರ್ಕಾರಿ ನೌಕರಿಗಳಲ್ಲಿ ಪ್ರಾತಿನಿಧ್ಯವನ್ನು ಕೊಡಬೇಕೆಂದು ರೆಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿದ್ದರೂ ಕೂಡ ಅದರಂತೆ ಸರ್ಕಾರದವರು ಕೊಡುತ್ತಿಲ್ಲ. ಇದರ ಜೊತೆಗೆ 1-1-1965ಕ್ಕೆ ಹಿಂದೆ ಕೆಲಸದಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿದ್ದ ಹತ್ತು ಸಾವಿರ ಮಂದಿಯನ್ನು ರೆಗ್ಯುಲರೈಜ್ ಮಾಡಿದ್ದಾರೆ. ಇದರಲ್ಲಿ 18 ಪರ್ಸೆಂಟ್ ಹರಿಜನರಿಲ್ಲ. ಆದ್ದರಿಂದ ರಾಜ್ಯಾಂಗಕ್ಕೆ ಈ ಸರ್ಕಾರ ದ್ರೋಹ ಮಾಡಿದಂತಾಗುವುದಿಲ್ಲವೇ ? ಈ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಈಗ ಇಲ್ಲಿ ಇದ್ದರೆ ಚೆನ್ನಾಗಿತ್ತು. ಹರಿಜನರು ಭೂಮಿ ಇಲ್ಲದೇ ಇರುವವರು ಅನೇಕರಿದ್ದಾರೆ. ಜಾರಿಯಲ್ಲಿರುವ ಶಾಸನದ ರೀತಿ 10 ಎಕರೆಗಿಂತ ಕಡಿಮೆ ಜಮೀನು ಎಲ್ಲಿಯಾದರೂ ಇದ್ದರೆ ಅದನ್ನು ಹರಿಜನರಿಗೆ ಕೊಡಬೇಕೆಂದಿದೆ ಕೊಡಿ. 10 ಎಕರೆಗಿಂತ ಜಾಸ್ತಿ ಇದ್ದರೆ ಅದರಲ್ಲಿ ಅರ್ಧವನ್ನು ಹರಿಜನರಿಗೆ ಕೊಡಬೇಕು ಇನ್ನು ಅರ್ಧವನ್ನು ಬೇರೆಯವರಿಗೆ ಕೊಡಬೇಕೆಂದಿದೆ. ಅದನ್ನು ಕೊಡಿ ಎಂದು ಹೇಳುತ್ತೇನೆ. ಈ ನಿಯಮಗಳು ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್‌ನಲ್ಲಿ ಇದ್ದರೂ ಕೂಡ ಅದರಂತೆ ಸರ್ಕಾರದವರು ಕೊಡುತ್ತಿಲ್ಲ. ಈ ನಿಯಮಗಳು ಕಾಗದದ ಮೇಲೆ ಇದೆಯೇ ಹೊರತು ಅದನ್ನು ಕಾರ್ಯಗತ ಮಾಡಿಲ್ಲ.

ಇನ್ನು ಸಹಕಾರ ಸಂಘಗಳ ವಿಷಯದಲ್ಲಿ ಹೇಳುವುದಾದರೆ ಸಹಕಾರ ಬೆಳ್ಮೆಯೇ ಸುಖ ಬಾಳ್ಮೆ ಎಂದು ಹೇಳತಕ್ಕ ಈ ಕಾಂಗ್ರೆಸ್ ಸರ್ಕಾರ ಪ್ರತಿ ಹೆಜ್ಜೆಹೆಜ್ಜೆಗೂ ಬೇಕಾದಷ್ಟು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ನೀರಾವರಿ ಬಾವಿಗಳಿಗೆ ಹಣವನ್ನು ಕೊಡುವಾಗ, ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಾಗಲೀ, ಪ್ರೈಮರಿ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನಲ್ಲಾಗಲೀ ಅಥವಾ ಬೇರೆ ಯಾವ ಸೊಸೈಟಿಗಳಲ್ಲಾಗಲೀ ಹರಿಜನರಿಗೆ ಪ್ರಾತಿನಿಧ್ಯ ದೊರಕುವುದಕ್ಕೆ ಅವಕಾಶ ವಿಲ್ಲ. ಹರಿಜನರಿಗೆ ಮತ್ತು ಗಿರಿಜನರಿಗೆ ಸಹಕಾರ ಸಂಘಗಳಲ್ಲಿ ಮತ್ತು ಲ್ಯಾಂಡ್ ಮಾರ್ಟಗೇಜ್

ಬ್ಯಾಂಕುಗಳಲ್ಲಿ ಪ್ರಾತಿನಿಧ್ಯ ನಾಮಕರಣಗಳ ಮೂಲಕ ಅವಕಾಶ ಇರಬೇಕು. ಆಮೇಲೆ ಹಾಗೆಯೇ ಕೈಗಾರಿಕೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ತುಂಬಾ ಅನ್ಯಾಯವಾಗಿದೆ. ಇಂಡಸ್ಟ್ರಿಯಲ್ ಬೋರ್ಡುಗಳನ್ನು ಮಾಡಿದ್ದಾರೆ, ಕಾರ್ಪೊರೇಷನ್ ಮಾಡಿದ್ದಾರೆ, ದೊಡ್ಡ ದೊಡ್ಡ ಕೈಗಾರಿಕಾ ಸಂಸ್ಥೆಗಳನ್ನು ಮಾಡಿದ್ದಾರೆ. ಆದರೆ ಅವುಗಳಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ದೊರಕಿಲ್ಲ. ಸರ್ಕಾರಿ ಇಲಾಖೆಗಳಲ್ಲಿ ಹರಿಜನರು ಮತ್ತು ಗಿರಿಜನರಿಗೆ 100ಕ್ಕೆ 18 ಜನಗಳಿಗೆ ಕೆಲಸವನ್ನು ಕೊಡಬೇಕೆಂಬ ನಿಯಮವಿದ್ದರೂ ಅದರಂತೆ ಅವರಿಗೆ ಕೆಲಸಗಳನ್ನು ಕೊಟ್ಟಿಲ್ಲ. 1937ನೇ ಇಸವಿಯಿಂದಲೂ ಕೂಡ ವಿದ್ಯಾಖಾತೆಯಲ್ಲಿ ಎಂದರೆ ಮಿಡಲ್ ಸ್ಕೂಲುಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ 3 ರೂಪಾಯಿ, ಹೈಸ್ಕೂಲುಗಳಲ್ಲಿ 7½ ರೂಪಾಯಿ ಸ್ಕಾಲರ್‌ಷಿಪ್ ಇತ್ತು. ಈಗಲೂ ಅದೇ ಇದೆ. ಅದನ್ನು ಸರ್ಕಾರದವರು ಯೋಚನೆ ಮಾಡಿ ಈಗಿನ ಕಾಲಕ್ಕೆ ತಕ್ಕಂತೆ ಸ್ಕಾಲರ್ ಷಿಪ್ ವೇತನ ಹೆಚ್ಚಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ಪದೇ ಪದೇ ಬೆಲ್ ಹೊಡೆಯುತ್ತಿರುವುದರಿಂದ, ನನಗೆ ಈಗ ಕಾಲಾವಕಾಶವಿಲ್ಲದ್ದರಿಂದ ಇಲ್ಲಿಗೇ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಪಾಟೀಲ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, 1967-68ನೇ ಸಾಲಿನ ಆಯವ್ಯಯ ಪತ್ರಿಕೆಯ ಮಂಡನೆಯನ್ನು ನಾನು ಸ್ವಾಗತಿಸುತ್ತೇನೆ. ಹೋದವರ್ಷದ ಆಯವ್ಯಯ ಪತ್ರಿಕೆಯ ಮಂಡನೆಗೂ ಮತ್ತು ಈ ವರ್ಷದ ಆಯವ್ಯಯ ಪತ್ರಿಕೆಯ ಮಂಡನೆಗೂ ಬಹಳ ಅಂತರ ಕಂಡುಬರುತ್ತದೆ. ಏತಕ್ಕೆಂದರೆ ಹೋದಸಲ ಆಯವ್ಯಯ ಪತ್ರಿಕೆಯನ್ನು ಈ ಸದನದ ಮುಂದೆ ಮಂಡನೆ ಮಾಡಿದಾಗ ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಾ ರಾಜ್ಯದ ಆರ್ಥಿಕ ಪರಿಸ್ಥಿತಿಯ ನಿಜವಾದ ಸ್ಥಿತಿಯನ್ನು, ನಿಜವಾದ ಚಿತ್ರವನ್ನು ಜನತೆಯ ಕಣ್ಣು ಮುಂದೆ ಈ ಸದನದ ಮುಂದೆ ಮಾನ್ಯ ಅರ್ಥಸಚಿವರು ಇಡಲಿಲ್ಲ ಎಂದು ಹೇಳಿದರು. ಈ ಸಲ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ, ಈ ರಾಜ್ಯದ ನೈಜವಾದ ಆಯವ್ಯಯ ಪತ್ರವನ್ನು ಹಣಕಾಸಿನ ಮಂತ್ರಿಗಳು ಈ ಸಭೆಯಲ್ಲಿ ಮಂಡನೆ ಮಾಡಿದ್ದಾರೆ. ಆದರೂ ಸಹ ಮಾನ್ಯ ಸದಸ್ಯರನೇಕರು ಈ ಆಯವ್ಯಯ ಪತ್ರಿಕೆಯ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ನಮ್ಮ ಸರ್ಕಾರದ ಆರ್ಥಿಕ ಸ್ಥಿತಿ, ಅದರ ಒಂದು ಘನತೆ, ಸ್ಥಿರತೆ ಮತ್ತು ಈಗ ಹತ್ತು ವರ್ಷಗಳಿಂದ ಯಾವರೀತಿ ಪ್ರಗತಿ ಪಥದಲ್ಲಿ ಸರ್ಕಾರ ಮುಂದುವರಿಯುತ್ತದೆ ಎನ್ನುವ ನೈಜವಾದ ಚಿತ್ರವನ್ನು ಮೈಸೂರು ರಾಜ್ಯದ ಜನತೆಯ ಮುಂದೆ, ಈ ಸದನದ ಮುಂದೆ ಇಟ್ಟು ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ದಿಟ್ಟವಾದ ಪ್ರಯತ್ನವನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಮಾಡಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏತಕ್ಕಂದರೆ, ಈ ಆಯವ್ಯಯ ಪತ್ರಿಕೆಯಲ್ಲಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ನಮ್ಮ ರಾಜ್ಯದ ವಾರ್ಷಿಕ ಆದಾಯ 1957-58ನೇ ಸಾಲಿನಲ್ಲಿ 58 ಕೋಟಿ ರೂಪಾಯಿಗಳಿದ್ದದ್ದು 1967-68ನೇ ಸಾಲಿನಲ್ಲಿ 166 ಕೋಟಿರೂಪಾಯಿಗಳಿಗೆ ಏರುತ್ತಿದೆ. ನಮ್ಮ ರಾಜ್ಯದ ಆಹಾರ ಉತ್ಪಾದನೆಯು 1957-58ರಲ್ಲಿ 32 ಲಕ್ಷ ಟನ್ ಇದ್ದುದು ಈಗ 47 ಲಕ್ಷ ಟನ್ ವರೆಗೆ ಹೆಚ್ಚಿದೆ. ಈಗಿನ ಪ್ರಜಾಸತ್ತೆಯಲ್ಲಿ ಸಾಕ್ಷರತೆ ಬೆಳೆದಿದೆ, ಶಿಕ್ಷಣ ಪ್ರಸಾರ ಹೆಚ್ಚಾಗಿದೆ. ಮೊದಲು ವಿದ್ಯಾಭ್ಯಾಸಕ್ಕೆ 13 ಕೋಟಿ ಖರ್ಚಾಗುತ್ತಿದ್ದುದು ಈಗ 33.4 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಜನಾರೋಗ್ಯ ಮತ್ತು ವೈದ್ಯಕೀಯ ಇಲಾಖೆಗೆ ಕೂಡ ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ.

3-30 P.M.

ಮೂರನೇ ಪಂಚವಾರ್ಷಿಕ ಯೋಜನೆಗೆ 250 ಕೋಟಿ ಅಂದಾಜು ಇಟ್ಟುಕೊಳ್ಳಲಾಗಿತ್ತು. ಈ ಯೋಜನೆ ಕಾರ್ಯಗತ ಮಾಡಲು 248 ಕೋಟಿ ಖರ್ಚು ಮಾಡಿದ್ದೇವೆ. ಮೂರನೇ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿದೆ. ಹತ್ತು ವರ್ಷಗಳ ಪ್ರಗತಿ ನೋಡುವುದಾದರೆ ಈ ದಶಕ ನಮ್ಮ ಪ್ರಗತಿಯಲ್ಲಿ ಒಂದು ಮೈಲುಗಲ್ಲು ಆಗಿದೆ ಎಂದು ಹೇಳಬಹುದು. ರಾಜ್ಯದ ವರಮಾನ ಹೆಚ್ಚಿದ ಹಾಗೆ ಕೆಲಸಗಳನ್ನು ತೆಗೆದುಕೊಳ್ಳಬಹುದು. ಮುಖ್ಯವಾಗಿ ನಮಗೆ ಬೇಕಾಗಿರುವ ಆಹಾರ ಉತ್ಪಾದನೆಯು ನಾಲ್ಕೈದು ವರ್ಷಗಳಲ್ಲಿ ಸ್ವಯಂಪರಿಪೂರ್ಣವಾಗುತ್ತದೆ. ಅನೇಕ ಯೋಜನೆಗಳನ್ನು ಈಗಾಗಲೇ ಕಾರ್ಯಗತ ಮಾಡಿದ್ದಾರೆ. ಇದರಿಂದ ನಮ್ಮ ಆರ್ಥಿಕಸ್ಥಿತಿ ಭದ್ರವಾಗುತ್ತದೆ. ಈ ವರ್ಷ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಒಂದು ಭದ್ರವಾದ ಘಟ್ಟ ಮುಟ್ಟಿದೆ. ಜನತೆಯ ಬೇಡಿಕೆಗಳಿಗೆ ಅನುಗುಣವಾಗಿ ಯೋಜನೆ ಕೈಕೊಳ್ಳುತ್ತಿಲ್ಲ ಎಂದು ಕೆಲವು ಸದಸ್ಯರು ಟೀಕೆ ಮಾಡಿದರು. ಆ ರೀತಿ ಹೇಳುವುದು ಸರಿಯಲ್ಲ ಎಂಬುದು ಕಂಡುಬರುತ್ತದೆ. ಆಹಾರ ಉತ್ಪಾದನೆಗೆ ಹೆಚ್ಚು ಹಣ ಖರ್ಚು ಮಾಡಿದ್ದೇವೆ. ಆಹಾರ ಉತ್ಪಾದನೆ ಹೆಚ್ಚಾಗಿದೆ. ಜನರ ಬೇಡಿಕೆಗೂ ಸರಕಾರದ ಯೋಜನೆಗೂ ಹೊಂದಾಣಿಕೆ

(ಶ್ರೀ ಬಿ. ಎಂ. ಪಾಟೀಲ್)

ಇದೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಸ್ಥಿರತೆ ಕಂಡು ಬರುತ್ತದೆ. ನಾಲ್ಕನೇ ಮಹಾ ಚುನಾವಣೆಯಿಂದ ಇದು ಕಂಡುಬಂದಿದೆ. ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ ಅಂದರೆ ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶ ಸಿಕ್ಕುತ್ತದೆಯೋ ಇಲ್ಲವೋ ಎಂಬುದು ಆಗಿದೆ. ಈ ಒರೆಗಲ್ಲಿಗೆ ಹಚ್ಚಿ ತಿಕ್ಕಿ ನೋಡಿದರೆ ವಿರೋಧ ಪಕ್ಷದ ಸದಸ್ಯರು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಈ ಒರೆಗಲ್ಲಿಗೆ ತಿಕ್ಕಿ ನೋಡಿದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗಿದೆ ಮತ್ತು ಅದು ಭದ್ರ ತಳಹದಿಯ ಮೇಲೆ ಇದೆ ಎಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ. ನಮ್ಮ ಸಹನೆ ಸಂಯಮದ ಮೂಲಕ ಬಹು ಮುಖ್ಯವಾದ ಅಭಿಪ್ರಾಯವನ್ನು ಶಾಂತ ರೀತಿಯಿಂದ ವಿಚಾರಣೆ ಮಾಡುತ್ತೇನೆ. ಇದು ಏನು ತೋರಿಸುತ್ತದೆ ಅಂದರೆ ಇದರಲ್ಲಿ ನಮಗೆ ಅಚಲ ವಿಶ್ವಾಸ ಇದೆ ಎಂದು ವ್ಯಕ್ತಮಾಡಬೇಕಾಗುತ್ತದೆ. ಇನ್ನು ಮುಂದೆ ಸಹ ಇನ್ನಷ್ಟು ಯಶಸ್ವಿಯಾಗುತ್ತದೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ಪ್ರತಿಯೊಬ್ಬರೂ ಕೂಡ ಪ್ರಜಾಪ್ರಭುತ್ವದ ಮೇಲೆ ಅಚಲ ವಿಶ್ವಾಸ ವ್ಯಕ್ತಮಾಡಬೇಕು. ಪ್ರಜಾಸತ್ತೆಯಲ್ಲಿ ಎಲ್ಲರಿಗೂ ಸಮಾನವಾದ ಅವಕಾಶ ಸಿಕ್ಕುತ್ತಾ ಇದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಒಬ್ಬ ಮಾನ್ಯ ಸದಸ್ಯರು ನಮ್ಮ ಆರ್ಥಿಕ ವ್ಯವಸ್ಥೆ ಸರಿಯಾಗಿಲ್ಲ ಎಂದು ಹೇಳಿದರು. ಆದರೆ ಅದು ಭದ್ರವಾದ ತಳಹದಿಯ ಮೇಲೆ ಇರತಕ್ಕ ದಿಟ್ಟ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಡೆಫಿಸಿಟ್ ಫೈನಾನ್ಸ್ ಕೊರತೆ ಆರ್ಥಿಕ ವ್ಯವಸ್ಥೆಯನ್ನು ನಿವಾರಿಸಿ ಸರಿಯಾಗಿ ಕಾರ್ಯರೂಪದಲ್ಲಿ ತರಲು ಸರಕಾರ ನಿರ್ಧಾರ ಮಾಡಿ ಮಿತವ್ಯಯ ಸಾಧಿಸಿದೆ ಎಂದು ಹೇಳಬಹುದು.

ಇನ್ನು ವಿಜಾಪೂರ ಜಿಲ್ಲೆಯ ಒಂದೆರಡು ಸಮಸ್ಯೆಗಳ ಬಗ್ಗೆ ಹೇಳಲು ಬಯಸುತ್ತೇನೆ. ವಿಜಾಪೂರ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಅಂಡರ್ ಗ್ರೌಂಡ್ ಡ್ರೇನೇಜ್ ಯೋಜನೆ ಮಂಜೂರ್ಮಾಡಿದ್ದಾರೆ. ಭೂತನಾಳ ಕೆರೆಯಿಂದ ನೀರು ಒದಗಿಸುವುದು ಬಹಳ ಹಳೇ ಯೋಜನೆಯಾಗಿದೆ. ಈ ವ್ಯವಸ್ಥೆ ಸರಿಯಾಗಿಲ್ಲ. ಆದುದರಿಂದ ವಿಜಾಪೂರ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಕಂದಾಯ ರದ್ದು ಮಾಡುವ ವಿಷಯ ಸರಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಕಂಡು ಬರುತ್ತದೆ. ಕಂದಾಯ ರದ್ದು ಮಾಡಬೇಕು ಎಂದು ನಾನೂ ಅಭಿಪ್ರಾಯ ಪಡುತ್ತೇನೆ. ಆದರೆ ಬೇರೆ ರೀತಿಯಲ್ಲಿ ಕಂದಾಯ ಹಾಕಬೇಕಾದ ಪರಿಸ್ಥಿತಿ ಬರುತ್ತದೆ. ಆದರಿಂದ ರೈತನಿಗೆ ಭಾರವಾಗಬಹುದು. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಕೊಡುವುದಾದರೆ ರೈತನಿಗೆ ಲೆಕ್ಕ ಪತ್ರ ಇಡುವುದಕ್ಕಾಗುವುದಿಲ್ಲ. ಆದುದರಿಂದ ಕಂದಾಯ ರದ್ದು ಮಾಡುವುದನ್ನು ಐದು ಹತ್ತು ಎಕರೆ ಭೂಮಿ ಇರತಕ್ಕವರಿಗೆ ಅನ್ವಯಿಸಬೇಕು. ಉಳಿದವರಿಗೆ ಕಂದಾಯ ರದ್ದು ಮಾಡಬಾರದು. ಇದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಕಂದಾಯ ರದ್ದು ಮಾಡುವುದನ್ನು ಕೈ ಬಿಟ್ಟು ಕೇವಲ ಬಡ ರೈತರಿಗೆ ಸೌಲಭ್ಯ ಕೊಡಬೇಕೆಂದು ನಾನು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ವಿಜಾಪೂರ ತಾಲ್ಲೂಕಿನಲ್ಲಿ ಒಳ್ಳೇ ಭೂಮಿ ಇದೆ. ದೋಣಿ ನದಿಯ ಮೂಲಕ ಭೂಮಿ ಉಪ್ಪಾಗುತ್ತದೆ. 14 ಲಕ್ಷ ರೂಪಾಯಿ ಖರ್ಚು ಮಾಡಿದ್ದರೂ ಕೂಡ ಈ ಯೋಜನೆ ಕಾರ್ಯಗತವಾಗಿಲ್ಲ. ಇದಕ್ಕಾಗಿ ಬಜೆಟ್ಟಿನಲ್ಲಿ ಹಣ ತೆಗೆದು ಇಟ್ಟಿಲ್ಲ. ಇಂದು ದೇಶದಲ್ಲಿ ಹೆಚ್ಚು ಆಹಾರ ಧಾನ್ಯ ಉತ್ಪಾದನೆ ಮಾಡಬೇಕಾಗಿದೆ. ಇದಕ್ಕೆ ಹೆಚ್ಚು ಹಣ ಒದಗಿಸಿಕೊಟ್ಟು ರಾಷ್ಟ್ರದ ಆಹಾರ ಉತ್ಪಾದನೆ ಹೆಚ್ಚು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹು ಮುಖ್ಯವಾದ ವಿಷಯ ಯಾವುದು ಅಂದರೆ, ಕೃಷ್ಣಾ ಯೋಜನೆ, ಇದರಿಂದ ವಿಜಾಪೂರ ಜನರಿಗೆ ಅನುಕೂಲವಾಗುವುದಲ್ಲದೆ ಗುಲಬುರ್ಗ ಮತ್ತು ರಾಯಚೂರು ಜಿಲ್ಲೆಗಳಿಗೂ ಅನುಕೂಲವಾಗುತ್ತದೆ. ಕೃಷ್ಣಾ ಯೋಜನೆಯು ಕನ್ನಡ ನಾಡಿನ ಜೀವಾಳದ ಪ್ರಶ್ನೆಯಾಗಿದೆ. ಈ ಯೋಜನೆ ಆದಷ್ಟು ಬೇಗನೆ ಕಾರ್ಯರೂಪದಲ್ಲಿ ಬರಬೇಕು. ವಿಶ್ವ ಬ್ಯಾಂಕಿನಿಂದ ಹಣ ಪಡೆಯಲು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಬೇಕು. ಹಣ ತಂದು ಈ ಯೋಜನೆ ಕಾರ್ಯಗತ ಮಾಡುತ್ತಾರೆಂದು ನಾನು ನಂಬಿದ್ದೇನೆ. ಯಾಕೆಂದರೆ ವಿಜಾಪೂರ ಜಿಲ್ಲೆಯು ಬರಗಾಲ ಪ್ರದೇಶವಾಗಿದೆ. ಒಂದು ನೀರಾವರಿ ಯೋಜನೆಯಾದರೆ ಬೇಕಾದಷ್ಟು ಧಾನ್ಯ ಬೆಳೆಯಬಹುದು. ಈ ಯೋಜನೆಗೆ ಈ ವರ್ಷ 15 ಲಕ್ಷ ರೂಪಾಯಿ ಒದಗಿಸಿರುವುದನ್ನು ನೋಡಿದರೆ ಈ ಯೋಜನೆ ನೂರಾರು ವರ್ಷವಾದರೂ ಮುಗಿಯುವುದಿಲ್ಲ. ಆದುದರಿಂದ ಈ ಯೋಜನೆಗೆ ಹೆಚ್ಚು ಹಣ ಒದಗಿಸುವುದಕ್ಕೆ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿ ವಿಶ್ವ ಬ್ಯಾಂಕಿನಿಂದ ಹಣ ಪಡೆದು

ಯಶಸ್ವಿಯಾಗಿ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಮೈಸೂರು ರಾಜ್ಯದ ಭವಿಷ್ಯ ಕೃಷ್ಣಾ ಯೋಜನೆಯಾಗಿರುವುದರಿಂದ ಇದನ್ನು ಕಾರ್ಯ ರೂಪದಲ್ಲಿ ತರಬೇಕೆಂದು ಒತ್ತಾಯ ಪೂರ್ವಕ ಹೇಳುತ್ತೇನೆ. ನನಗೆ ನಾಲ್ಕು ಮಾತು ಹೇಳಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಧ್ಯಕ್ಷರೇ, 1967–68ನೇ ಸಾಲಿನ ಮುಂಗಡ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅವನ್ನು ಸ್ವಾಗತ ಮಾಡಲಿಕ್ಕೆ ಮನಸ್ಸು ಬಾರದು. ಬಜೆಟ್ ಮಂಡಿಸಿದ ನಂತರ ಈ ಮಾನ್ಯ ಸಭೆಯಲ್ಲಿ ಅರ್ಥ ಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಆಯವ್ಯಯ ಪತ್ರವನ್ನು ಸರಿದೂಗಿಸಿರುವುದನ್ನು ನೋಡಿದರೆ ಜನತೆಯ ದೃಷ್ಟಿಯಿಂದ ಪರಿಶೀಲಿಸಿದರೆ ಇದರಲ್ಲಿ ನ್ಯೂನ್ಯತೆಗಳು ಕಂಡುಬರುತ್ತವೆ. ಇದಕ್ಕೆ ಪರಿಹಾರ ಸೂಚಿಸ ಬೇಕಾದುದು ನಮ್ಮ ಕರ್ತವ್ಯ ಆಗಿರುವುದರಿಂದ ನಾನು ಒಂದೆರಡು ಸಲಹೆಗಳನ್ನು ಅವರ ಮುಂದೆ ಇಡುತ್ತೇನೆ. To look after the welfare of the people is as much the previleged rights of the opposition as the treasury benches. ಸನ್ಮಾನ್ಯ ಅರ್ಥ ಮಂತ್ರಿಗಳ ಈ ಉದಾರ ಹೇಳಿಕೆಗೆ ನನ್ನ ಸ್ವಾಗತ. ಆದರೆ ಎಲ್ಲವೂ ಬರೀ ಮಾತಿನಲ್ಲಿಯೇ ಪರ್ಯವ ಸಾನವಾಗುತ್ತದೆಯೇ ವಿನಾ ಕೃತಿಯಲ್ಲಿಲ್ಲ.

ಸ್ವಾಮಿ, Hatred is human, in-defference is the final dinial of humainty, Hatred is human ಸುಮಾರು 38 ವರ್ಷಗಳ ಹಿಂದಿನಿಂದಲೂ ಸ್ವಾತಂತ್ರ್ಯ ಬರುವುದಕ್ಕೆ ಮುಂಚಿನಿಂದಲೂ, ಸ್ವಾತಂತ್ರ್ಯ ಬಂದಮೇಲೆ 20 ವರ್ಷದಿಂದ ಅಧಿಕಾರ ಪಡೆದರೂ ಸಹ ಲ್ಯಾಂಡ್ ರೀಫಾರಂಸ್ ಮಾಡುತ್ತೇವೆ ಎಂದು ಹೇಳುತ್ತಾ ಇದ್ದರು. ಅದನ್ನು ಯಾರೂ ತಂದಿಲ್ಲ. ಭೂಮಿ ಉಳುವವನೇ ಯಜಮಾನ ಆಗಬೇಕು, ಮಧ್ಯವರ್ತಿ ಏಜೆಂಟುಗಳಿಗೆ ಅವಕಾಶ ಇಲ್ಲ ಎನ್ನುವ ಒಂದು ನೀತಿಯನ್ನು ಈ ದೇಶಕ್ಕೆ ತರುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಇಂಗ್ಲೀಷರು ಕಳೆದ 100 ವರ್ಷಗಳಿಂದ ಬಡ ಬೋರೇಗೌಡನಿಗೆ ಕಂದಾಯವನ್ನು ಏನು ಹೇರಿದ್ದರು ಅದನ್ನು ತೆಗೆದು ಕಂದಾಯದಿಂದ ವಿಮುಕ್ತರನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾ ಇದ್ದರು. ಅದೆಲ್ಲಾ ಇದು ವರೆಗೆ ಏನೂ ಮಾಡಿಲ್ಲ. ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸ್ ಬಹುಪಾಲು ಮಧ್ಯಮ ವರ್ಗದ ಕೂಲಿಗಾರರ ಮತ್ತು ಕಾರ್ಮಿಕ ವರ್ಗದ ಮೇಲೆ ಬೀಳತಕ್ಕ ಹೊರೆ, ಇದರಿಂದ ಅವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾ ಇದ್ದರು. ಅದನ್ನು ಮಾಡದೆ ಶತ್ರುತ್ವ ಭಾವನೆಯನ್ನು ಸಾಮಾನ್ಯ ಜನತೆಯ ಮೇಲೆ ಇಟ್ಟುಕೊಂಡು ಅವರಿಗೆ ಕೊಟ್ಟ ಆಶ್ವಾಸನೆಯನ್ನು ಪೂರೈಸದೆಯೇ ಅವರ ಮೇಲೆ ಕಂದಾಯದ ಹೊರೆಹಾಕಿ ನಾಟ್ಯ ಆಡುವ ಸೂಚನೆ ಕಂಡು ಬರುತ್ತದೆ. ಒಂದು ಉದಾಹರಣೆ ತೆಗೆದುಕೊಳ್ಳೋಣ. 1961-62ನೇ ಸಾಲಿನಲ್ಲಿ ಲ್ಯಾಂಡ್ ರೆವಿನ್ಯೂ ಮತ್ತು ಅಗ್ರಿ ಕಲ್ಚರಲ್ ಇನ್‌ಕಂಟ್ಯಾಕ್ಸ್ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ನು ಸೇರಿ 13 ಕೋಟಿ 9 ಲಕ್ಷ 44 ಸಾವಿರ ಇದ್ದುದು 1967-68ಕ್ಕೆ 22 ಕೋಟಿ 51 ಲಕ್ಷ 84 ಸಾವಿರ ಆಗಿದೆ. ಇದರಿಂದ ಸುಮಾರು 9 ಕೋಟಿ ಹೆಚ್ಚುವರಿ ಕಂಡುಬಂದಿದೆ. ಬಹುಪಾಲು ಐಶ್ವರ್ಯವಂತರ ಮೇಲೆ ಬೀಳತಕ್ಕ ಇನ್ ಕಂಟ್ಯಾಕ್ಸ್ ಸುಮಾರು 4 ಕೋಟಿ 79 ಲಕ್ಷ ಇದ್ದುದು 1967-68ಕ್ಕೆ 6 ಕೋಟಿ 78 ಲಕ್ಷ ಮಾತ್ರ ಆಗಿದೆ. ಇನ್‌ಡೈರಕ್ಟ್ ಟ್ಯಾಕ್ಸ್ 1961-62ನೇ ಸಾಲಿನಲ್ಲಿ 19 ಕೋಟಿ 63 ಲಕ್ಷ ಇದ್ದದ್ದು ಈಗ 1967-68ಕ್ಕೆ 47 ಕೋಟಿ 53 ಲಕ್ಷ ಈ ಸಾಲಿನಲ್ಲಿ ಬಂದಿದೆ. ವ್ಯತ್ಯಾಸ ಎಷ್ಟು ಇದೆ ಎಂದರೆ 27 ಕೋಟಿ 90 ಲಕ್ಷ ರೂಪಾಯಿ ಜಾಸ್ತಿಯಾಗಿದೆ. ಐಶ್ವರ್ಯವಂತರ ಮೇಲೆ ಬೀಳತಕ್ಕ ಡೈರಕ್ಟ್ ಟ್ಯಾಕ್ಸ್ 2 ಕೋಟಿ ಜಾಸ್ತಿ ಮಾಡಿದರೆ, ಬಡರೈತನ ಮತ್ತು ಕಾರ್ಮಿಕರ ಮೇಲೆ ಬೀಳತಕ್ಕ ಟ್ಯಾಕ್ಸ್‌ನಲ್ಲಿ 27 ಕೋಟಿ ಮಾಡಿದ್ದೀರಿ. ಇದು ಸರ್ಕಾರದ ಬಡ ಬೋರೇಗೌಡನ ಉದ್ಧಾರ ಮಾಡತಕ್ಕ ಆರ್ಥಿಕ ನೀತಿ, ಸಮತಾವಾದ ಸಮಾಜವಾದ ನೀತಿ ಎಂದು ಕಾಣುವುದಿಲ್ಲ. ಈ ನೀತಿ expropriation of the expropriated ಎಂದು ಕಾಣುತ್ತದೆ. ಖಂಡಿತವಾಗಿ ಸರ್ಕಾರ ನಮ್ಮ ದೇಶದ ಮೇಲೆ ಸಮಾಜವಾದದ ಹೆಸರಿನಲ್ಲಿ ಗಾಂಧೀಜಿ ಹೆಸರಿನಲ್ಲಿ, ನೆಹರೂ ಹೆಸರಿನಲ್ಲಿ ಟ್ರೆಡಿಷನಲ್ ಹಿಂದೂ ಸಮಾಜದ ಹೆಸರಿನಲ್ಲಿ, ಬಡವನ ಶೋಷಣೆಗೆ ಹೊರಟಿದೆ ಎಂದು ಕಾಣುತ್ತದೆ. ಸಮಾಜವಾದದ ತಿರುಳು ಕಾಣುತ್ತಾ ಇಲ್ಲ. ನೆಟ್ ರೆವಿನ್ಯೂ ಸರ್ಕಾರದ ಇಂಡಸ್ಟ್ರಿಯಲ್ ಅನೆಕ್ಚರ್ (ಇ)ನಲ್ಲಿ ನೋಡಿದರೆ ಕೇವಲ ಕೊಂಚ ಲಕ್ಷ ಮಾತ್ರ ಉತ್ಪತ್ತಿ ಇರುತ್ತದೆ. 1—1½ ಕೋಟಿ ಉತ್ಪತ್ತಿ ಬರುವ ಹಾಗೆ ಯೋಜನೆ ಹಾಕದೆ ಕೇವಲ 14 ಲಕ್ಷ, 17 ಲಕ್ಷ ಮಾತ್ರ ಉತ್ಪತ್ತಿ ಬರುವ ಹಾಗೆ ಯೋಜನೆ ಹಾಕಿದರೆ ಯಾವ ಕಾರ್ಯನೀತಿ ಆಗುತ್ತದೆ ಎಂದು ಪ್ರಶ್ನೆ ಮಾಡಬೇಕಾಗಿ ಬರುತ್ತದೆ. ಕೋಟ್ಯಾಂತರ ರೂಪಾಯಿಗಳನ್ನು ಕೈಗಾರಿಕೆಗಳ ಮೇಲೆ ಇನ್‌ವೆಸ್ಟ್ ಮಾಡಿ ಉತ್ಪತ್ತಿ ನೋಡಿದರೆ ಕೇವಲ ಕೊಂಚ ಲಕ್ಷ ಮಾತ್ರ. ಅದೇ ರೀತಿಯಲ್ಲಿ indifference is the final dinial of

(ಶ್ರೀ ಎಂ. ಬಸವರಾಜು)

humanity. ಚುನಾವಣಾ ಸಮಯದಲ್ಲಿ ಸಮಾಜವಾದ ಸಮತಾವಾದ ಹೆಸರನ್ನು ಹೇಳಿ ನಾಟ್ಯ ಆಡಿ ಹೊರಟು, ಈಗ ಇದರ ಕಡೆ ಗಮನ ಕೊಡುತ್ತಾ ಇಲ್ಲ.

ಇನ್ನು ಇರ್ರಿಗೇಷನ್ ಅಂಕಿಅಂಶ ಬೇಕಾದಷ್ಟು ಇದೆ. ಪ್ರಾಜೆಕ್ಟ್‌ಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಷ್ಟು ಲಕ್ಷಾಂತರ ಎಕರೆಗಳು ಇರ್ರಿಗೇಷನ್‌ನಿಂದ ಬರುತ್ತದೆ ಎಂದು ರೂಪರೇಖೆಗಳನ್ನು ನೋಡಿದರೆ ಅದರಂತೆ ಕೆಲಸ ನಡೆದಿದೆಯೆಂದು ಒಪ್ಪಲಿಕ್ಕೆ ಸಾಧ್ಯ ಇಲ್ಲ. ಒಂದು ಕಡೆ ಅಂಕಿಅಂಶ ತೆಗೆದು ನೋಡಿದರೆ ಉತ್ಪನ್ನ ಕಡಿಮೆಯಾಗಿದೆ ಎಂದೂ ಕೂಡ ಗೊತ್ತಾಗುತ್ತದೆ. ಪ್ರತಿ ಎಕರೆಯ ಉತ್ಪತ್ತಿಯನ್ನು ಜಾಸ್ತಿ ಮಾಡಲು ಕೋಟ್ಯಾಂತರ ರೂಪಾಯಿ ಹಾಕಿ ಪರದೇಶದಿಂದ ಕೆಮಿಕಲ್ ಮೆನ್ಯೂರ್ ತರಿಸಿ ಬ್ಲಾಕ್ ಏಜೆನ್ಸಿ ಮುಖಾಂತರ ಒದಗಿಸಿದರೂ ಅದರಿಂದ ಪ್ರತಿಫಲ ಬಂದಿಲ್ಲ. 1960-61ರಲ್ಲಿ ಅಕ್ಕಿ ಉತ್ಪಾದನೆ 1,232 ಕಿಲೋಗ್ರಾಂ ಒಂದು ಎಕರೆಗೆ ಇದ್ದುದ್ದು 1965-66ರಲ್ಲಿ 1,235ಕ್ಕೆ ಬಂದಿದೆ. ಇಷ್ಟೊಂದು ಕೋಟಿ ರೂಪಾಯಿ ಖರ್ಚುಮಾಡಿ ಪರದೇಶದಿಂದ ಗೊಬ್ಬರ ತಂದು ನಮ್ಮ ಬ್ಲಾಕ್ ಏಜೆನ್ಸಿ ಮುಖಾಂತರ ಅಂದರೆ ಗ್ರಾಮ ಸೇವಕ, ಅಗ್ರಿಕಲ್ಚರ್‌ಲ್ ಎಕ್ಸ್‌ಟೆನ್‌ಷನ್ ಆಫೀಸರ್, ಬಿ.ಡಿ.ಓ., ಅಗ್ರಿಕಲ್ಚರಲ್ ಆಫೀಸರ್ ಇವರ ಮುಖಾಂತರ ರೈತರಿಗೆ ಹೇಳಿ ಕಳುಹಿಸಿ ಪುಸ್ತಕದಲ್ಲಿ ಬರೆದಿದ್ದಾರೆ, ಖರ್ಚು ಮಾಡಿದ್ದಾರೆ, ಪ್ರಗತಿ ಸಾಧಿಸಿದ್ದೇವೆಂದು ಸರ್ಕಾರದ ಅಂಕಿಅಂಶಗಳನ್ನು ತೋರಿಸುತ್ತಾರೆ. ಆದರೆ ನಿಜವಾದ ಪ್ರಗತಿ ಸಾಧಿಸುತ್ತಾ ಇಲ್ಲ. ಇದರಿಂದ ರೈತನು ಉದ್ಧಾರ ಆಗಲಿಕ್ಕೆ ಸಾಧ್ಯ ಇಲ್ಲ ಎಂದು ಅನುಮಾನ ಬರುತ್ತದೆ. ಅಮೋನಿಯಾ ಸಲ್ಫೇಟ್‌ಗೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಎಂದು ನಮ್ಮ ಸರ್ಕಾರ ಹೇಳುತ್ತಿದ್ದಾರೆ. ನಾವೂ ಕೂಡ ಒಪ್ಪಿಕೊಳ್ಳುವ ಪರಿಸ್ಥಿತಿ ಇದೆ. ಅಮೋನಿಯಂ ಸಲ್ಫೇಟ್ ಒಂದರಲ್ಲಿ ಕಳೆದ 1962-63ನೇ ಸಾಲಿನಲ್ಲಿ ಎಷ್ಟು ಉತ್ಪತ್ತಿಯಾಗಿದೆ ಎಂದು ನೋಡೋಣ. ಕಳೆದ 62-63ರ ಸಾಲಿಗೆ 2,386.5 M. Tons ಅಷ್ಟು ಉತ್ಪತ್ತಿ ಇತ್ತು ಅದು 1964-65ನೇ ಸಾಲಿನಲ್ಲಿ ಕೇವಲ 294.0 M. Tons ಇಳಿದು ಹೋಗಿದೆ. ಈ ರೀತಿ ಉತ್ಪಾದನೆ ಕಡಿಮೆ ಮಾಡಿ ದೇಶದ ರೈತನಿಗೆ ಅನ್ಯಾಯ ಮಾಡುತ್ತಾ ಇದ್ದಾರೆ. ಎಲ್ಲಿ ನೋಡಿದರೂ ಪ್ರೈಮರಿ ಹೆಲ್ತ್ ಸೆಂಟರ್ಸ್ ಬೋರ್ಡ್‌ಗಳು ಕಾಣುತ್ತವೆ. ಆದರೆ ಆ ಸೆಂಟರ್ಸ್‌ಗಳಿಗೆ ಬೇಕಾದ ಬಿಲ್ಡಿಂಗ್ ಇಲ್ಲ, ಬಿಲ್ಡಿಂಗ್ ಇದ್ದರೆ ಡಾಕ್ಟರ್ ಇಲ್ಲ, ಡಾಕ್ಟರ್ ಇದ್ದರೆ ಔಷಧಿ ಇಲ್ಲ. ಇಂಥ ಚಿತ್ರ ನಮ್ಮ ಮುಂದೆ ಇರುವಾಗ ದೇಶದ ರೈತನ ಆರೋಗ್ಯವನ್ನು ಎಷ್ಟರಮಟ್ಟಿಗೆ ನಿರೀಕ್ಷಣೆ ಇಟ್ಟುಕೊಂಡಿದ್ದೆವೋ ಅಷ್ಟು ಪ್ರಗತಿ ಸಾಧ್ಯವಾಗಿಲ್ಲ ಎನ್ನುವುದನ್ನು ಕೇಂದ್ರ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಒಂದು ಮೆಟರ್ನಿಟಿ ಹೋಂ ಇದೆ, ಕಳೆದ 4 ವರ್ಷದಿಂದ ಲೇಡಿ ಡಾಕ್ಟರ್ ಇಲ್ಲದೆ ಕಷ್ಟಪಡುತ್ತಿದ್ದಾರೆ ಇದನ್ನು ಸರಿಪಡಿಸಬೇಕು. Thank You, Sir.

ಶ್ರೀ ಡಿ. ಎಸ್. ಗೌಡ್ (ದೇವನಹಳ್ಳಿ).—ಸನ್ಮಾನ್ಯ ಸಭಾಪತಿಗಳೇ, 1967-68ರ ಮುಂಗಡ ಪತ್ರವನ್ನು ಸ್ವಾಗತಿಸುತ್ತಾ, ನಮ್ಮ ಆರ್ಥಿಕ ಮಂತ್ರಿಗಳು ವಿವೇಚನಾಯುತವಾದ ಮತ್ತು ಧೈರ್ಯ ಸ್ಥೈರ್ಯದಿಂದ ಕೂಡಿದ ಮುಂಗಡ ಪತ್ರವನ್ನು ಸಭೆಯ ಮುಂದೆ ಇಟ್ಟಿದ್ದಾರೆ ಎಂದು ಹೇಳುತ್ತೇನೆ, ಸರ್ಕಾರದವರು ಈ ಮುಂಗಡ ಪತ್ರದಲ್ಲಿ ಅಳವಡಿಸಿದಂತೆ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಾನು ಬಯಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯದ ಕ್ಷೇತ್ರವನ್ನು ನೋಡಿದಾಗ ವ್ಯವಸಾಯ ನಮ್ಮ ದೇಶದ ಪ್ರಾಚೀನ ಕಸಬು. ಆದಾಗ್ಯೂ ಸಹ ನಮ್ಮ ದೇಶದಲ್ಲಿ ಆಹಾರದ ಕೊರತೆ ತಾಂಡವಾಡುತ್ತಿದೆ. ನಮ್ಮ ದೇಶದಲ್ಲಿ ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸುವುದಕ್ಕೆ ಸರ್ಕಾರ ನಾನಾ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆದರೂ ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿನ ತೀವ್ರ ರೀತಿಯಲ್ಲಿ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಟ್ರಾಕ್ಟರುಗಳ ಅಭಾವ ಬಹಳವಾಗಿದೆ. ನಮ್ಮ ದೇಶದ ಸಣ್ಣ ಉಳುಮೆದಾರರಿಗೆ, ಬಹಳ ಕಡಮೆ ಜಮೀನಿರುವವರಿಗೆ, 5, 10 ಎಕರೆ, 25 ಎಕರೆ, ಇರುವವರಿಗೆ ಉಪಯೋಗವಾಗುವಂಥ ಕಡಮೆ ಬೆಲೆಯ ಸಣ್ಣ ಟ್ರಾಕ್ಟರುಗಳು ಬೇಕಾಗಿವೆ. ಅವುಗಳಿಂದ ವ್ಯವಸಾಯಕ್ಕೆ ಹೆಚ್ಚಿಗೆ ಅನುಕೂಲವಾಗುತ್ತದೆ. ಅದಕ್ಕಿಂತ ಮಿಗಿಲಾಗಿ ನಮ್ಮ ಸರ್ಕಾರದವರು ಎದುರಿಸಬೇಕಾದ ಸಮಸ್ಯೆ ಮತ್ತೊಂದಿದೆ. ದಿನೇ ದಿನೇ, ವರ್ಷಗಳು ಉರುಳಿದಂತೆ ಮಳೆಯ ಅಭಾವವನ್ನು ನಾವು ಕಾಣುತ್ತಿದ್ದೇವೆ. ಇದನ್ನು ವ್ಯವಸಾಯದ ಕಸುಬನ್ನು ಅವಲಂಬಿಸಿರುವವರು ಸ್ವಾಭಾವಿಕವಾಗಿ ಎದುರಿಸಬೇಕಾಗಿದೆ. ಹಳೆಮೈಸೂರಿನ ಬಹು ಭಾಗಗಳಲ್ಲಿ ಬಹಳ ದೊಡ್ಡ ಕೆರೆಗಳಿಲ್ಲ, ನಾಲೆಗಳ ಅನುಕೂಲವಿಲ್ಲ. ಈ ಕಡೆ

ಹೆಚ್ಚಾಗಿ ಸಣ್ಣ ನೀರಾವರಿ ಯೋಜನೆಗಳಿಲ್ಲ; ಕೆರೆ ಮತ್ತು ಬಾವಿಗಳನ್ನು ನಿರ್ಮಿಸಿ ತನ್ಮೂಲಕ ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡಿಕೊಡಬೇಕೆಂದು ಪ್ರಾರ್ಥಿಸಿಸುತ್ತೇನೆ.

ಬಾವಿಗಳಿಗಾಗಿ ಸಾಲದ ರೂಪದಲ್ಲಿ ಸಹಾಯ ಕೊಡುತ್ತಿದ್ದಾರೆ. ಇದು ಆದಷ್ಟು ಜಾಗ್ರತೆ, ವಿಳಂಬವಿಲ್ಲದೆ ಜನತೆಗೆ ಅತಿಸುಲಭವಾಗಿ ದೊರಕಲೆಂದು ಆಶಿಸುತ್ತೇನೆ. ಜೊತೆಗೆ ಒಳ್ಳೆಯ ಗೊಬ್ಬರ ಮತ್ತು ಬೀಜ ರೈತರಿಗೆ ಒದಗುವಂತಾಗಬೇಕು. ದೇಶದಲ್ಲಿರುವ ಅಹಾರದ ಕೊರತೆ ನೀಗಬೇಕಾದರೆ ಆಹಾರದ ಸರಬರಾಜು ಸರಿಯಾಗಿ ಆಗಬೇಕು. ಇದು ಸರಿಯಾಗಿ ನಡೆಯಬೇಕಾದರೆ ದೇಶದಲ್ಲಿ ಇಂಡಿವಿಜುಯಲ್ ಹೋಲ್‌ಸೇಲರ್ಸ್ ಎನ್ನುವವರು ಏನಿದ್ದಾರೆ ಅವರು ಯಾರಿಗೂ ಆಹಾರದ ಸರಬರಾಜನ್ನ ಕೊಡದೆ, ಎಲ್ಲ ಕಡೆಗಳಲ್ಲಿಯೂ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಮಾಡಿ ಜನತೆಗೆ ಆಹಾರ ಪದಾರ್ಥಗಳು ತಲುಪುವಂಥ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಸರ್ಕಾರ ತೀವ್ರ ಕ್ರಮ ತೆಗೆದುಕೊಂಡು, ಆಹಾರವನ್ನು ಸರಿಯಾದ ರೀತಿಯಲ್ಲಿ ಜನತೆಗೆ ಹಂಚುವಂತೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸರ್ಕಾರ ಸಾಧಿಸಿದ್ದಾಗ್ಯೂ ಹಳ್ಳಿಗಾಡು ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಜನತೆಗೆ ನಿಲುಕುವಂತೆ ಮಾಡುವುದು ಬಹಳ ಉಳಿದಿದೆ ಎಂದು ನಾನು ತಿಳಿಸಬಯಸುತ್ತೇನೆ. ನಮ್ಮ ದೇಶದ ಸಂಸ್ಕೃತಿ ನಾಗರೀಕತೆಯ ಬುನಾದಿಯ ಮೇಲೆ ಜೀವನವನ್ನು ನಡೆಸುವಂಥ ರೀತಿಯಲ್ಲಿ, ಸ್ವಾವಲಂಬನೆ ರೀತಿಯ ಬೇಸಿಕ್ ಎಜುಕೇಷನ್ ಮಟ್ಟದ ಗುರಿಯನ್ನು ಇನ್ನೂ ಈ 20 ವರ್ಷಗಳಲ್ಲಿ ಮುಟ್ಟಿಲ್ಲ ಎಂದು ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಯನ್ನು ಮಂಜೂರು ಮಾಡುವುದು ಹೆಚ್ಚಲ್ಲ. ಕೆಲವು ಊರುಗಳಲ್ಲಿ ಜೀವನ ಮಾಡುವುದೇ ಕಷ್ಟವಾಗಿರುವಾಗ ಊರಿನ ಜನರು ಮುಂದೆ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕೆನ್ನುವುದು ಸಾಧ್ಯವಿಲ್ಲವಾಗಿ, ಅನೇಕ ಊರುಗಳಲ್ಲಿ ಮರಗಳ ಕೆಳಗಡೆ, ಮುರಿದು ಬಿದ್ದಿದ್ದಂಥ ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ ಶಾಲೆಗಳನ್ನು ನಡೆಸುತ್ತಿರುವುದನ್ನು ಕಣ್ಣಾರೆ ಕಾಣುತ್ತೇವೆ. ಕೋಟ್ಯಾಂತರ ರೂಪಾಯಿಗಳ ಖರ್ಚಿನಲ್ಲಿ ನಾನಾ ಯೋಜನೆಗಳನ್ನು ಮಾಡಿರತಕ್ಕ ಸರ್ಕಾರ ಕೆಲವು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಟ್ಟರೆ ಶಾಶ್ವತವಾಗಿ ನೆನಪು ಉಳಿಯುತ್ತದೆ. ಅತ್ಯಾವಶ್ಯಕವಾಗಿ ಶಾಲಾ ಕಟ್ಟಡಗಳು ಎಲ್ಲಿ ಬೇಕಾಗಿದೆಯೋ ಆ ಊರುಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಸರ್ಕಾರವನ್ನು ನಾನು ಪ್ರಾರ್ಥಿಸುತ್ತೇನೆ.

ಇತ್ತೀಚಿನ ಕೆಲವು ದಿವಸಗಳಲ್ಲಿ ವಿಶ್ವವಿದ್ಯಾನಿಲಯದವರು ಒಂದು ನಿರ್ಣಯ ಮಾಡಿದ್ದಾರೆ. ಅದರಿಂದ ಎಷ್ಟರಮಟ್ಟಿಗೆ ಹುಡುಗರಿಗೆ ತೊಂದರೆಯಾಗಿದೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಶೇಕಡ 40ಕ್ಕಿಂತ ಯಾರಿಗೆ ಕಡಮೆ ಅಂಕಗಳು ಬಂದಿವೆಯೋ ಅವರನ್ನು ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟ ಕಾಲೇಜುಗಳಲ್ಲಿ ಸೇರಿಸುವುದಿಲ್ಲ. ಅವರನ್ನು 11ನೇ ಸ್ಟ್ಯಾಂಡರ್ಡ್ ಇರುವ ಶಾಲೆಗಳಿಗೆ ಸೇರಿಸಬೇಕು ಎನ್ನುವ ವಿಶ್ವವಿದ್ಯಾನಿಲಯದ ನಿರ್ದೇಶನವೇನಿದೆಯೋ ಅದರಿಂದ ನಾವೇ ಒಂದು ವರ್ಗಕ್ಕೆ ಕೆಟ್ಟದ್ದು ಮಾಡುವ ಭಾವನೆಯನ್ನು ಮೂಡಿಸಿದ ಹಾಗೆ ಆಗುತ್ತದೆ. ಈ ದಿಸೆಯಲ್ಲಿ ಸರ್ಕಾರ ತೀವ್ರ ಯೋಚಿಸಿ ಇದನ್ನು ಬದಲಾಯಿಸಬೇಕು. ಇದರಿಂದ ಹೆಚ್ಚಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಹುಡುಗರಿಗೆ ತೊಂದರೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಓದತಕ್ಕ ಸೌಲಭ್ಯಗಳು ಸರಿಯಾಗಿ ಇಲ್ಲದ್ದರಿಂದ ಸುಮಾರು ಶೇಕಡ 35ರಿಂದ 45ರ ವರೆಗೆ ಅಂಕಗಳನ್ನು ಪಡೆದು ಬಹುತೇಕ ವಿದ್ಯಾರ್ಥಿಗಳು ಪಾಸಾಗುತ್ತಾರೆ. ಹೆಚ್ಚಿನ ಸೌಲಭ್ಯಗಳನ್ನು ಪಡೆದ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿದ್ದರೆ ಉತ್ತಮ ಮಟ್ಟದ ಪರ್ಸೆಂಟೇಜ್ ಮಾರ್ಕ್ಸ್ ತೆಗೆದುಕೊಂಡು ಉತ್ತಮ ವಿದ್ಯಾವಂತರಾಗಬಹುದು. ಈ ನ್ಯೂನತೆಯನ್ನು ಸರ್ಕಾರ ಹೋಗಲಾಡಿಸಿ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಸರ್ಕಾರಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಕಂದಾಯದ ವಿಷಯದಲ್ಲಿ ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಕಂದಾಯ ಇರಬೇಕು. ಕಂದಾಯವನ್ನು ತೆಗೆದು ಹಾಕುವುದು ಸೂಕ್ತವಲ್ಲ ಮತ್ತು ಆದಾಯ ತೆರಿಗೆ, ವ್ಯವಸಾಯ ತೆರಿಗೆಯನ್ನು ಏನು ವಿಧಿಸಬೇಕೆಂದಿದ್ದಾರೆ ಅದನ್ನು ಕೈಬಿಡಬೇಕು ಎಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಯಾವ ದೇಶದಲ್ಲಿಯೇ ಆಗಲಿ ಆಹಾರ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಮೂಲ ವಸ್ತು. ಇದನ್ನು ಬೆಳೆಯತಕ್ಕವರು ಯಾವ ವರ್ಗದವರೇ ಆಗಿರಲಿ ಅವರಿಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಹಿಂದಿನಿಂದ ಇದ್ದ ಕಂದಾಯ ಇರಬೇಕು. ಸರ್‌ಚಾರ್ಜ್, ಸೆಸ್, ಮತ್ತೊಂದು ಮಗದೊಂದು ಇರಬಾರದು. ಕಂದಾಯ ಇರತಕ್ಕ ಹಳೇ ಕಂದಾಯದ ಜೊತೆಗೆ ಬೇಕಾದರೆ ಎಂಟಾಣೆ, ಒಂದು ರೂಪಾಯಿ ನೇರವಾಗಿ ಏರಿಸಿ. ಆದರೆ ಕಂದಾಯದ ವಿಷಯದಲ್ಲಿ ಇರತಕ್ಕ ಡೋಲಾಯಮಾನ ನೀತಿಯನ್ನು ಬಿಟ್ಟು ನಿರ್ದಿಷ್ಟವಾದ ನಿಲುವು ತೆಗೆದುಕೊಂಡು ಜನತೆಗೆ

(ಶ್ರೀ ಡಿ. ಎಸ್. ಗೌಡ)

ಅನುಕೂಲ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇದರಲ್ಲಿ ಬಹು ಮುಖ್ಯವಾದ ಸಮಸ್ಯೆ ಏನಿದೆ ಎಂದರೆ 1965-66ನೇ ಇಸವಿಯಲ್ಲಿ ದೇಶದ ಬಹುಭಾಗದಲ್ಲಿ ಮಳೆಯಾಗಿಲ್ಲ. ಬೆಂಗಳೂರು, ತುಮಕೂರು, ಚಿತ್ರದುರ್ಗ, ಕೋಲಾರ, ಈ ಜಿಲ್ಲೆಗಳಲ್ಲಿಯಂತೂ ಮಳೆಯನ್ನೇ ಕಾಣಲಿಲ್ಲ. ಸುಮಾರು 200 ಪಲ್ಲ ರಾಗಿ ಬೆಳೆಯತಕ್ಕ ನಾವು ಒಂದು ಕಾಳನ್ನೂ ಪಡೆಯಲಿಲ್ಲ. ಬಿತ್ತನೆಗೆ ಹಾಕಿದ್ದ ಕಾಳೂ ಬರಲಿಲ್ಲ. ದೇವನಹಳ್ಳಿ, ಹೊಸಕೋಟೆ ಪ್ರದೇಶಗಳಲ್ಲಿ ಈ ರೀತಿ ನಡೆದಿದೆ. ನಾಲ್ಕಾಣೆ, ಎರಡಾಣೆ ಬೆಳೆ ಕೂಡ ಆಗಿಲ್ಲ. ಆದುದರಿಂದ ಸಂಬಂಧಪಟ್ಟ ಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಇದರ ರಿಕಾರ್ಡುಗಳನ್ನು ತರಿಸಿಕೊಂಡು ಆದಷ್ಟು ಜಾಗ್ರತೆ 1965-66ನೇ ಸಾಲಿನ ಕಂದಾಯದಲ್ಲಿ ರಿಯಾಯಿತಿಯನ್ನು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ನನ್ನ ಕ್ಷೇತ್ರದ ಬಗ್ಗೆ ಕೆಲವಾರು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಲೋಕೋಪಯೋಗಿ ಇಲಾಖೆಯವರು ನಮ್ಮ ಕ್ಷೇತ್ರದ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅಕ್ಕಪಕ್ಕದ ಇತರ ಪ್ರಾಂತಗಳಿಗೆ ಹೋಲಿಸಿಕೊಂಡರೆ ದೇವನಹಳ್ಳಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆಗಿರತಕ್ಕ ಕೆಲಸಗಳ ಪರ್ಸೆಂಟೇಜ್ ಬಹಳ ಕಡಮೆ. ಈ ತಾಲ್ಲೂಕಿನಲ್ಲಿ 8-10 ಮೈಲಿ ದೂರದವರೆಗೂ ನಡೆದು ಹೋಗತಕ್ಕ ಪರಿಸ್ಥಿತಿ ಇದೆ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಎತ್ತಿನ ಗಾಡಿ ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ. ತಾಲ್ಲೂಕು ಬೋರ್ಡಿನವರು ರಸ್ತೆಗಳ ಕೆಲಸವನ್ನು ವಹಿಸಿಕೊಂಡು ಮಾಡುವುದು ಸರಿ. ಆದರೆ ಅವರಿಗೆ ಈ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಲೋಕೋಪಯೋಗಿ ಇಲಾಖೆಯವರು ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ದೇವನಹಳ್ಳಿ ಇತಿಹಾಸ ಪ್ರಸಿದ್ಧವಾದ ಸ್ಥಳ. ಹಿಂದೆ ಬ್ರಿಟಿಷರ ಸಂಗಡ ಯುದ್ಧದಲ್ಲಿ ಧೈರ್ಯದಿಂದ ಹೋರಾಡಿದ ಹುಲಿ ಎನಿಸಿಕೊಂಡ ಟಿಪ್ಪೂ ಸುಲ್ತಾನನ ಜನ್ಮಸ್ಥಳ. ಬೆಂಗಳೂರು ನಗರವನ್ನು ಕಟ್ಟಿದ ಕೆಂಪೇಗೌಡನ ಪೂರ್ವಜರು ಹುಟ್ಟಿದ ಮತ್ತು ಕಟ್ಟಿದ ಸ್ಥಳ ದೇವನಹಳ್ಳಿ. ಇದು ಕೈಗಾರಿಕೆಯ ಅಥವಾ ವ್ಯಾಪಾರದ ಕೇಂದ್ರವಲ್ಲ. ಇದು ವ್ಯವಸಾಯದ ಪ್ರದೇಶ. ಈ ಟೌನು ಯಾವ ವಿಧದಲ್ಲಿಯೂ ಮುಂದುವರಿಯುವುದಕ್ಕೆ ಅವಕಾಶವಿಲ್ಲದಂತಾಗಿದೆ. ಆದುದರಿಂದ ಸರ್ಕಾರದಲ್ಲಿ ನನ್ನ ಪ್ರಾರ್ಥನೆ ಏನೆಂದರೆ ಈ ದೇವನಹಳ್ಳಿ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟು ಟಿಪ್ಪು ಸುಲ್ತಾನನ ಹೆಸರಿನಲ್ಲಿ ಸರಿಯಾದ ಸ್ಮಾರಕ ಭವನವನ್ನು ನಿರ್ಮಿಸುವುದಲ್ಲದೆ ಅದಕ್ಕಿಂತ ಮಿಗಿಲಾಗಿ ದೇವನಹಳ್ಳಿ ಬಹಳ ಗಂಡು ಭೂಮಿ. ಅಲ್ಲಿ ಪೈಲ್ವಾನರು ಮತ್ತು ಗರಡಿಯವರು ಇದ್ದಾರೆ. ಅಲ್ಲಿ ಒಂದು ಸೈನಿಕ ಶಾಲೆಯನ್ನು ಟಿಪ್ಪು ಸುಲ್ತಾನನ ಹೆಸರಿನಲ್ಲಿ ಪ್ರಾರಂಭ ಮಾಡ ಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ಟಿನ ಬಗ್ಗೆ ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರು ತಮ್ಮತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈಗ ನಾನು ಇದನ್ನು ತುಲನೆಮಾಡಿ ನನಗೆ ಗೊತ್ತಿರುವಂತೆ ನನ್ನ ಜಿಲ್ಲೆಮಟ್ಟಿಗೆ ಕೆಲವು ವಿಚಾರಗಳನ್ನು ಸಭೆಯ ಮುಂದೆ ಹೇಳಬೇಕಾಗಿದೆ. ನಮಗೆ ಕೊಟ್ಟಿರುವುದಕ್ಕಿಂತ ನಮ್ಮಿಂದ ತೆಗೆದುಕೊಂಡಿರುವುದೇ ಜಾಸ್ತಿಯಾಗಿದೆ ಎಂದು ನಮ್ಮ ಜಿಲ್ಲೆಯ ಬಗ್ಗೆ ಹೇಳಬೇಕಾಗಿದೆ. ಇನ್ನು ಆಹಾರದ ವಿಷಯದಲ್ಲಿ ನಮ್ಮ ಜಿಲ್ಲೆ ಸ್ವಾವಲಂಬಿಯಾಗುವುದಕ್ಕೆ ಬಜೆಟ್ಟಿನಲ್ಲೇನಾದರೂ ಹಣ ಒದಗಿಸಿರುವರೇ ಎಂದು ನೋಡಿದರೆ ಒಂದು ವಿಚಾರ ಸ್ಪಷ್ಟವಾಗಿ ಕಾಣುವುದು ಭೂಸುಧಾರಣೆ ಕಾಯಿದೆಯಿಂದ ಸಾಗುವಳಿ ಮಾಡುವ ರೈತರ ಸ್ಥಿತಿ ಹೀನವಾಗಿದೆ. ಅಲ್ಲದೆ ಹಿಂದೆ ಮುಂಬಯಿ ರಾಜ್ಯದಲ್ಲೇನು ಸೌಲತ್ತು ಇತ್ತು ಅದನ್ನು ಕಸಿದುಕೊಂಡು ಗುಂಟೆಗೆ 8 ಆಣೆ ಕೊಡುವವರಿಗೆ ಎರಡೂವರೆ ರೂಪಾಯಿ ಕೊಡು ವಂತೆ ಮಾಡಿದ್ದಾರೆ. ರೈತರ ಬಗ್ಗೆ ಬಹಳ ಅನುಕೂಲಮಾಡಿರುವುದಾಗಿ ಹೇಳುತ್ತಾರೆ. ಆದರೆ ಸರಿಯಾಗಿ ಏನೂ ಕಾಣುವುದಿಲ್ಲ. ಚುನಾವಣಾ ಕಾಲದಲ್ಲಿ ತಮಗೆ ಅಂದರೆ ಕಾಂಗ್ರೆಸ್ಸಿಗೆ ಓಟು ಕೊಟ್ಟರೆ ತೀರ್ವೆ, ನೀರಾವರಿ ಕಡಿಮೆ ಮಾಡುವುದಾಗಿ ನಿಜಲಿಂಗಪ್ಪನವರು ಮತ್ತು ರಾಮಕೃಷ್ಣ

ಹೆಗ್ಗಡೆಯವರು ಹೇಳಿದರು. ರೈತರಿಗೆ ಹೆಚ್ಚು ಅನುಕೂಲಪಡಿಸುವುದಾಗಿ ಹೇಳಿದರು. ಆದರೆ ಏನಾಗಿದೆ ?

> "ಪ್ರಜಾರಾಜ್ಯದಲ್ಲಿ ಕಂದಾಯ ಭೂತವೆಂಬುದು ಮೈಮೇಲೆ ಬಂದು ರೈತನ ಹಿತ ಸಾಧಿಸದೆ ಕಂದಾಯ ತೆಗೆದು ಜೋರಾಗಿ ವ್ಯವಸಾಯ ತೆರಿಗೆ ಹಾಕಿತು. ಈ ಪ್ರಜಾ ರಾಜ್ಯದಲ್ಲಿ ಕಂದಾಯರದ್ದು ಆದರೂ ಮೈಮೇಲೆ ಬಂತು ರಣಹದ್ದು. ಕಂದಾಯ ಕಿತ್ತೊಗೆದು ಅದರ ಬದಲಾಗಿ ವ್ಯವಸಾಯ ತೆರಿಗೆ ಹೇರಿದರು ಜೋರಾಗಿ."— ದಿನಕರದೇಸಾಯಿ.

ಸಣ್ಣ ಸಣ್ಣ ನೀರಾವರಿ ಕೆಲಸವಮಾಡಿಕೊಡುವುದಾಗಿ ಹೇಳಿದ್ದರು. ಅದರ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯ ಸರ್ವೆ ಸೆಟ್ಲ್‌ಮೆಂಟ್ ಆಫೀಸರು ಎಂ. ಜಿ. ದೇಸಾಯಿಯವರು ಐ. ಸಿ. ಎಸ್. ಆಫೀಸರಾಗಿದ್ದವರು ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ :

> As a matter of fact, almost all the tanks are in a serious state of disrepair In every village, one meets people with tears. Gardens are now getting dry due to shortage of water. There is complaint about this and rightly so.

ಈ ಸ್ಥಿತಿ ಇದೆ. ಆದರೆ ನೀರು ತೆರಿಗೆ ಏರಿದೆ. ನಾಲೆಯಿಲ್ಲದಿದ್ದರೂ ನೂರಾರು ವರ್ಷಗಳ ಹಿಂದೆ ನಮ್ಮ ಅಜ್ಜಂದಿರು ಕಟ್ಟಿದ ಕೆರೆಗಳಿಗೂ, ಕಟ್ಟೆಗಳಿಗೂ ನೀರು ತೆರಿಗೆ ಹಾಕಿದ್ದಾರೆ. ಒಟ್ಟಿನಲ್ಲಿ ಸರಕಾರಿ ಬೊಕ್ಕಸಕ್ಕೆ ಹಣ ಬರಬೇಕು. ರೈತರಿಗೆ ಕಂದಾಯ, ನೀರು ತೆರಿಗೆ, ಮುಂತಾದ್ದನ್ನು ಸಾಕಷ್ಟು ಸೌಲತ್ತು ಕೊಡದೆ ಹಾಕಿರುತ್ತಾರೆ. ಇತಿಹಾಸ ಹೀಗಿದೆ. ಬಾವಿ ತೆಗೆಯಲು ಸಹಾಯ ಮಾಡುತ್ತೇವೆ, ಬಂಡಾರ, ಕೆರೆ ಕಟ್ಟಲಾಗುವುದು, ಸಾಲದ ವ್ಯವಸ್ಥೆ ಇದೆ ಎಂದು ಹೇಳುತ್ತಾರೆ, ಆದರೆ ರೈತರಿಗೆ ಅದರಿಂದ ಸಹಾಯವಾಗುತ್ತಿಲ್ಲ. ಖಾಯಂ ಹಕ್ಕು ಭೂಮಿಯಮೇಲೆ ಸೇಕಡ 80 ಮಂದಿಗೆ ಇಲ್ಲ, ಅಂಥವರು ಭೂಮಿ ಉಳುತ್ತಿದ್ದಾರೆ. ಹಾಗಾದರೆ ಅವರು ಈ ಸೌಲತ್ತುಗಳನ್ನು, ಸಾಲ, ಮುಂತಾದುವನ್ನು ತೆಗೆದುಕೊಳ್ಳುವುದು ಹೇಗೆ ? ಬೆಳೆ ತಕಾವಿ ಸಾಲ ಕೊಡುವುದಾಗಿ ಮಂತ್ರಿಗಳು ಹೇಳಬಹುದು. ಕಾರವಾರ ಜಿಲ್ಲೆಯಲ್ಲಿ ನೀರಾವರಿಗೆ ಸಾಲ ಕೊಟ್ಟಿದ್ದೇವೆಂದು ಹೇಳಬಹುದು. ಆದರೆ ತಮಗೆ ಬೇಕಾದವರಿಗೆ ಹಳೆಯ ಬಾವಿ ಇದ್ದು ಅದನ್ನು ಆಳಪಡಿಸಿ ಬಾವಿ ತೆಗೆದಿರುವುದಾಗಿ ಹೇಳಿ ಮೂರೂವರೆ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿರುವವರಿದ್ದಾರೆ. ಇದನ್ನು ತೋರಿಸಬಹುದು. ಉಪ್ಪುನೀರು ಬಾರದಂತೆ ತಡೆಗಟ್ಟಬೇಕೆಂದು ಹೇಳಿದರೆ ಇನ್ನೂ ಆ ಕೆಲಸವಾಗಿಲ್ಲ. ಸರಿಯಾಗಿ ಕೆಲಸವಾಗದಿದ್ದರೂ ಸಹ ಕಂಟ್ರಾಕ್ಟರ ಕಿಸೆ ತುಂಬುತ್ತಿದೆ. ಹೆಚ್ಚು ಬೆಳೆ ತೆಗೆಯಲು ಅನುಕೂಲವಾಗಿಲ್ಲ. ಜಂತ್ರಡಿ (sluice gate) ತೆಗೆಯುವ ಕೆಲಸ ಸರಿಯಾಗಿ ಮಾಡದೆ ಪೂರ್ಣವಾಗಿ ರಬಿ ಬೆಳೆ ಅಂದರೆ ಕಾರುಬೆಳೆ ಹೋಯಿತು. ಜೋಗ ಗ್ರಾಮದಲ್ಲಿ 50 ಎಕರೆಯಲ್ಲಿ ನೀರು ಹೋಗಿ ಎಲ್ಲಾ ಹಾಳಾಯಿತು. ಈ ಪ್ರಕಾರ ನಮ್ಮ ಜಿಲ್ಲೆ ಪರಿಸ್ಥಿತಿ ಇದೆ. 1962 ರಲ್ಲಿ ತೀರ್ವೆ ಕೊಡುವವರು ರೈತರು, ಜಮೀನುದಾರರಲ್ಲ ಎಂದು ಹೇಳಿ ಓಟು ಪಡೆದರು. ರೈತರಿಗೆ ಮೋಸಮಾಡಿದ ಇತಿಹಾಸವೇ ಬೇರೆಯಾಗಿದೆ. ಜನರು ಈಗ ಬುದ್ಧಿವಂತರಾಗಿದ್ದಾರೆ ಹಣ ಖರ್ಚು ಮಾಡಿ ರಾಮಕೃಷ್ಣ ಹೆಗ್ಗಡೆಯವರು ಆರಿಸಿಬಂದರು. ಹಾಗೆ ಹೇಳಿದಮಾತ್ರಕ್ಕೆ ಅವರು ಅಪಾರ್ಥ ಮಾಡಿಕೊಳ್ಳುವುದು ಬೇಡ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರನ್ನು ಬಿಟ್ಟರೆ ಕಾಂಗ್ರೆಸ್ಸಿನವರು ಯಾರೂ ಚುನಾಯಿತರಾಗಿಲ್ಲ. ಹಿಂದಿನ ಭಾಷಣದಲ್ಲಿ ವಿರೋಧ ಪಕ್ಷದವರೂ ಮತ್ತು ಇತರರೂ ಎಲ್ಲರೂ ಕೂಡಿ ದೇಶಾಭಿವೃದ್ಧಿ ಮಾಡಬೇಕೆಂದು ಹೇಳಿದರು. ಆದರೆ ಅದರಿಂದ ಯಾವ ಸತ್ಪರಿಣಾಮವೂ ಆಗಲಿಲ್ಲವಲ್ಲಾ ಎಂದು ದುಃಖವಾಗುತ್ತಿದೆ. ಭೂಸುಧಾರಣೆ ಕಾಯಿದೆ ವಿಚಾರದಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಹಿಂದಿದ್ದ ಸೌಲತ್ತನ್ನು ಕಿತ್ತುಕೊಂಡಿದ್ದಾರೆ. ನಮ್ಮ ತಾಲ್ಲೂಕಿನ ಜಿಲ್ಲೆಯಲ್ಲಿ 30 ರಿಂದ 50 ಸಾವಿರದವರೆಗೆ ಗೇಣೀ ಬಾಕಿ ದಾವೆಗಳಾಗಿವೆ. ಈಗ ಮಾಡಿರುವ ಕಾನೂನು ವಕೀಲರಿಗೆ, ಅನುಕೂಲವಾಗಿದೆ, ರೈತರಿಗೆ ಅದರಿಂದ ಅನುಕೂಲವಾಗಿಲ್ಲ. ಹೀಗಾದರೆ ಆಹಾರ ಹೆಚ್ಚಾಗಿ ಬೆಳೆ ಮಾಡಲು ಹೇಗೆ ಸಾಧ್ಯ ? ಬಂಗಾಳದಲ್ಲಿ ಹೇಗಾಯಿತೆಂಬುದನ್ನು ನೋಡಬಹುದು ! ಕಾರವಾರ ಜಿಲ್ಲೆಯಲ್ಲಿ ಒಮ್ಮೆ ನೋಟ್ಯಾಕ್ಸ್ ಕ್ಯಾಂಪೈನ್ ನಡೆಯಿತು. ನಮ್ಮ ರಾಜ್ಯದಲ್ಲಿ ಈಗ ಆಗುತ್ತಿರುವಂತೆ ನಡೆಯುತ್ತಾ ಹೋದರೆ ಅಸಹಕಾರ ಚಳುವಳಿ movement ಸತ್ಯಾಗ್ರಹ ಮುಂತಾದುವನ್ನು ಮಾಡಬೇಕಾದ ಪ್ರಸಂಗ ಬರಬಹುದು. ಆದುದರಿಂದ ಉತ್ತರ ಕನ್ನಡ ಜಿಲ್ಲೆಯ ಕಡೆ ಸ್ವಲ್ಪ ಹೆಚ್ಚು ಗಮನಕೊಡಬೇಕು. ಇದನ್ನು ಯಾವಾಗಲೂ ಹೇಳುತ್ತಿದ್ದಾರೆ. ಉಳುವವರೇ ಹೊಲದ ಒಡೆಯರು ಎಂಬುದನ್ನು ನಮ್ಮ ಜಿಲ್ಲೆಯಲ್ಲಿ ಪ್ರಯೋಗಕ್ಕೆ ತರಬೇಕು.

(ಶ್ರೀ ಡಿ. ಎಸ್. ನಾಡಕರ್ಣಿ)

ಹೊಲಸು ಕಾಯಿಲೆ ಬೇಡ, ಬಡಿದಾಟ ಬೇಡ. ಪರಿಹಾರ ಕೊಟ್ಟುಬಿಡಿ ಎಂಬುದಾಗಿ ನಮ್ಮ ಮಾಲೀಕರು ರೈತರು ಹೇಳುತ್ತಿದ್ದಾರೆ. ಈ ವಿಚಾರವನ್ನು ಹೆಗಡೆಯವರು ಮಂತ್ರಿಮಂಡಲದ ಮುಂದಿಟ್ಟು ಈ ಪ್ರಕಾರ ಏಕೆ ಮಾಡಬಾರದು ? ಈಗಿನ ಸ್ಥಿತಿಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಆದುದರಿಂದ ನಮ್ಮ ಜಿಲ್ಲೆಯ ಜಮೀನುದಾರರುಗಳಿಗೆ ಮತ್ತು ರೈತರಿಗೆ ಪರಿಹಾರ ನೀಡಿ ನ್ಯಾಯ ದೊರಕಿಸಿಕೊಡಬೇಕೆಂದು ಸರಕಾರದವರಲ್ಲಿ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಬಾಪುಗೌಡ (ಷಹಾಪುರ).—ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ಮಾನ್ಯ ಅರ್ಥಸಚಿವರಾದ ಶ್ರೀಮಾನ್ ಹೆಗಡೆಯವರು 1967-68ನೇ ಸಾಲಿನ ಬಡ್ಜೆಟ್ಟನ್ನು ಪ್ರಾಮಾಣಿಕವಾದ ರೀತಿಯಲ್ಲಿ ವಿಚಾರ ವಿನಿಮಯ ಮಾಡಿ ದೇಶದ ಆಗುಹೋಗುಗಳನ್ನು ಚರ್ಚೆಮಾಡಿ ಬಹಳ ತೂಕವಾದ ಒಂದು ಬ್ಯಾಲೆನ್ಸ್‌ಡ್ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಬಡ್ಜೆಟ್ಟನ್ನು ಸಭೆಯ ಮುಂದೆ ಇಡುವ ಕಾಲಕ್ಕೆ ರಾಜ್ಯದ ಸಂಪನ್ಮೂಲಗಳನ್ನು ಮತ್ತು ಮೊದಲನೇ, ಎರಡನೇ ಹಾಗೂ ಮೂರನೇ ಯೋಜನೆಗಳಲ್ಲಿ ಕೈಗೊಂಡ ಕಾರ್ಯಗಳನ್ನು ಅವಲೋಕಿಸಿದರೆ ಆದಷ್ಟು ಮಟ್ಟಿಗೆ ಹೆಚ್ಚಿನ ಪ್ರಮಾಣದಲ್ಲಿ 67-68ನೇ ಸಾಲಿನಲ್ಲಿ ಮಾಡಿರುವುದು ಕಂಡುಬರುತ್ತದೆ. 67-68ರಲ್ಲಿ ದೇಶದ ಆರ್ಥಿಕ ಮಟ್ಟವನ್ನು ಹೆಚ್ಚು ಪ್ರಗತಿಯಲ್ಲಿ ಮಾಡುವಾಗ ತಪ್ಪುಗಳನ್ನೂ ಮಾಡಿದ್ದಾರೆ. ಆದರೆ ಈ ಸಭೆಯಲ್ಲಿ ಹೊಸದಾಗಿ ಭಾಗ ವಹಿಸತಕ್ಕಂತಹ ಸದಸ್ಯರುಗಳಿಗೆ ಇಲ್ಲಿ ಮಾತಾಡಲು ಒಂದು ಅವಕಾಶ ಸಿಕ್ಕಿದೆ. ಬಡ್ಜೆಟ್ಟಿನ ಕಾರ್ಯಕಲಾಪಗಳನ್ನು ನೋಡಿದರೆ ನಾವು ದೇಶದ ಆರ್ಥಿಕ ಮಟ್ಟವನ್ನು ಸಾಮಾಜಿಕ ಮಟ್ಟವನ್ನು ಮತ್ತು ದೇಶದ ಇನ್ನಿತರ ಜನಜೀವನದಲ್ಲಿ ಆಗುಹೋಗುವ ಕಾರ್ಯಗಳಿಗಾಗಿ ಎಷ್ಟು ಮಟ್ಟಿಗೆ ಅವುಗಳನ್ನು ಧೃಡಪಡಿಸಲಿಕ್ಕೆ ಮಾಡಬೇಕು ಎನ್ನುವುದನ್ನು ವಿಚಾರ ಮಾಡಿದರೆ ಸ್ವಲ್ಪ ಮನಸ್ಸಿಗೆ ಒಂದು ತರಹದ ಅಸಹ್ಯಭಾವನೆ ಕೂಡ ಆಗುತ್ತದೆ. ಮತ್ತು ಇದರ ಕಡೆಗೆ ಎಷ್ಟು ವೇಗದಿಂದ ಹೋಗಬೇಕೋ ಅಷ್ಟು ವೇಗದಿಂದ ಹೋಗುತ್ತಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು. ವಿರೋಧ ಪಕ್ಷದ ಸದಸ್ಯರು ನಮಗೆ ಅಧಿಕಾರವಿದೆ ಎಂದು ಹೇಳುತ್ತಾ ಬಡ್ಜೆಟ್ಟಿನಲ್ಲಿ ದೇಶದ ಕೆಲವು ಕಾರ್ಯಗಳನ್ನು ಮಾಡುವಾಗ ತಪ್ಪುಗಳು ಆಗೇ ಆಗುತ್ತವೆ. ಅದನ್ನು ತಿದ್ದಲಿಕ್ಕೆ ಅವರುಗಳು ಸಲಹೆ ಕೊಡಬೇಕು. ಅದನ್ನು ಸರಿಪಡಿಸಲಿಕ್ಕೆ ಅವರು ಕನ್‌ಸ್ಟ್ರಕ್ಟೀವ್ ಸಜೆಷನ್ನುಗಳನ್ನು ಸರಕಾರಕ್ಕೆ ಕೊಡಬೇಕು ಮತ್ತು ಈ ಅಧಿಕಾರ ಅವರಿಗಿದೆ ಎನ್ನುವುದನ್ನು ನಾವು ಇಲ್ಲಿ ಮರೆಯಬಾರದು. ಆದರೆ ರಾಜ್ಯದಲ್ಲಿ ಪ್ರಗತಿ ಸಾಧನೆ ಮಾಡಲು ಪ್ರಜಾಪ್ರಭುತ್ವದಲ್ಲಿ ಈಗಾಗಲೇ ಹಳ್ಳಿಗಳ ಮಟ್ಟದಲ್ಲಿ ಪಂಚಾಯಿತಿಗಳನ್ನು ಹಾಗೂ ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕಾ ಅಭಿವೃದ್ಧಿ ಮಂಡಲಿಗಳನ್ನು ಮಾಡಿದ್ದಾರೆ. ಇಲ್ಲೂ ಕೂಡ ಹಳ್ಳಿಗಳಿಗೆ ಸಂಬಂಧಪಟ್ಟ ಹಾಗೂ ತಾಲ್ಲೂಕಾ ಮಟ್ಟದ ಸಮಸ್ಯೆಗಳನ್ನು ವಿಚಾರ ಮಾಡುತ್ತಾರೆ. ಪಂಚಾಯತಿಗಳಲ್ಲಿಯೂ ಕೂಡ ವಿರೋಧ ಮಾಡುವ ಸದಸ್ಯರೂ ಇದ್ದಾರೆ ಅವರೂ ಟೀಕೆಗಳನ್ನು ಮಾಡುತ್ತಾರೆ. ತಾಲ್ಲೂಕಾ ಮಟ್ಟದಲ್ಲಿ ಆಗುವ ಟೀಕೆಗಳನ್ನು ನೋಡಿದರೆ ಅವೂ ಕೂಡ ಅಷ್ಟು ಸಮಂಜಸವಾಗಿರುವುದಿಲ್ಲ. ಆದರೆ ಇಲ್ಲಿ ಆಗುತ್ತಿರುವ ಚರ್ಚೆಯನ್ನು ನೋಡಿದರೆ ಆಡಳಿತದಲ್ಲಿ ಅವರ ದೃಷ್ಟಿಗೆ ಅನುಗುಣವಾಗಿ ಎಷ್ಟು ಕಾರ್ಯಗಳು ಆಗಬೇಕೋ ಅಷ್ಟು ಆಗುತ್ತಿಲ್ಲ. ಇದನ್ನು ಎಷ್ಟು ಹೇಳಿದರೂ ನೋಡಿದರೂ ಮತ್ತು ಕೇಳಿದರೂ ಅದರಿಂದ ಸಮಾಧಾನವಾಗುವುದಿಲ್ಲ. ಆದರೆ ಇಲ್ಲಿ ಬಂದಿರುವ ಯಾವ ಸದಸ್ಯರೇ ಆಗಲೀ ವೈಯ್ಯಕ್ತಿಕವಾಗಿ ಟೀಕೆ ಮಾಡದೇ ನಾವು ಆದರ್ಶರಾಗಿರಬೇಕು. ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಇಲ್ಲಿ ವಿಚಾರ ವಿನಿಮಯ ಮಾಡಬೇಕು. ಇಂತಹ ಒಂದು ನೀತಿಯನ್ನು ಆದಷ್ಟು ಮಟ್ಟಿಗೆ ಇಲ್ಲಿ ತಂದು ಒಂದು ಶಿಸ್ತಿನಿಂದ ಒಂದು ರೀತಿಯ ಡಿಸಿಪ್ಲಿನ್ ರೀತಿಯಲ್ಲಿ ಎಲ್ಲ ವಿಚಾರಗಳನ್ನೂ ಇಲ್ಲಿ ವಿಚಾರ ಮಾಡಬೇಕು. ಇನ್ನು ಮುಂದಿನ ಐದು ವರ್ಷಗಳಲ್ಲಿ ಯಾವ ರೀತಿಯ ಸಮಸ್ಯೆಗಳು ಬರುತ್ತವೆ ಎನ್ನುವುದನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿಕೊಂಡು ಅದಕ್ಕೆ ಅನುಗುಣವಾಗಿ ಕೆಲಸ ಮಾಡಲು ಸಾಧ್ಯವಾಗುವುದು ಎಂದು ನಾನು ಇಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಹೇಳುವಾಗ ನಮ್ಮ ಬಡ್ಜೆಟ್ಟನ್ನು ನೋಡಿದರೆ ಹೆಚ್ಚಿನ ಹಣವನ್ನು ಒಕ್ಕಲುತನಕ್ಕಾಗಿ ಇಟ್ಟಿದ್ದಾರೆ. ಈಗಾಗಲೇ ಸಾಕಷ್ಟು ಕಾರ್ಯಗಳು ಇದರಲ್ಲಿ ನಡೆದಿವೆ. ಪಂಪುಸೆಟ್ಟುಗಳನ್ನು ಹಾಗೂ ಬಾವಿಗಳನ್ನು ತೋಡಲು ಮತ್ತು ಕೆರೆ ಕಟ್ಟೆಗಳನ್ನು ಕಟ್ಟಲು ಸಾಕಷ್ಟು ಸಹಾಯ ಮಾಡುತ್ತಿದ್ದಾರೆ. ಆದರೂ ಕೂಡ ಸಾಮಾನ್ಯ ರೈತರಲ್ಲಿ ಸಮಾಧಾನವಿಲ್ಲ. ರೈತರಿಗೆ ಅನುಕೂಲವಾಗಬೇಕೆಂದು ಹೇರಳವಾಗಿ ಹಣವನ್ನು ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳ ಮುಖಾಂತರ ಪಂಪುಸೆಟ್ಟುಗಳಿಗಾಗಿ, ಬಾವಿಗಳಿಗಾಗಿ ಕೊಡುತ್ತಿದ್ದಾರೆ. ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳು ಹಣ ಕೊಡುವಾಗ ಕೆಲವು ಕಡೆಗಳಲ್ಲಿ ತಪ್ಪುಗಳಾಗುತ್ತವೆ. ಆದರೂ ಕೂಡ

ಅವುಗಳನ್ನು ಸರಿಪಡಿಸಬಹುದು. ಇದರಲ್ಲಿ ತಪ್ಪುಗಳಾಗುವುದು ಅಲ್ಲಿರುವ ಅಧ್ಯಕ್ಷರ ಹಾಗೂ ಕಾರ್ಯದರ್ಶಿಗಳ ಮೂಲಕ ಆಗುತ್ತವೆ. ಅಲ್ಲಿ ಅಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಗಳಾಗಿ ನಮ್ಮ ಜನರನ್ನೇ ಆರಿಸಿ ಕಳುಹಿಸುತ್ತೇವೆ. ಇದರಲ್ಲಿ ಕಾಂಗ್ರೆಸ್ ಪಕ್ಷ ಇಲ್ಲ, ಜನತಾ ಪಕ್ಷ ಇಲ್ಲ, ಕಮ್ಯೂನಿಸ್ಟ್ ಪಕ್ಷ ಇಲ್ಲ. ಇದರಲ್ಲಿ ವ್ಯವಸಾಯಗಾರರೇ ಹೆಚ್ಚು ಇರುತ್ತಾರೆ. ಅಗ್ರಿಕಲ್‌ಚರ್ ಸೆಕ್ಟಾರ್ ಎಂದು ಏನು ಹೇಳುತ್ತೇವೆ ಅವರೇ ಇರುತ್ತಾರೆ ಮತ್ತು ಅವರು ಯಾವ ಪಕ್ಷಕ್ಕೂ ಸೇರಿದವರಲ್ಲ. ಇಲ್ಲಿನ ಜನರು ತಪ್ಪು ಮಾಡುವ ಕಾಲಕ್ಕೆ ಅವುಗಳನ್ನು ಅಲ್ಲೇ ವಿಚಾರಮಾಡಿ ಜವಾಬುದಾರರಾಗಿರುವವರು ಅಲ್ಲೇ ಸಮಸ್ಯೆಗಳನ್ನು ಪರಿಹಾರ ಮಾಡಬಹುದು ಎನ್ನುವುದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳಬೇಕು. ಹೆಚ್ಚಿನ ಪ್ರಮಾಣದಲ್ಲಿ ಬಾವಿಗಳನ್ನು ತೋಡಿಸಲು ಲ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕುಗಳ ಮೂಲಕ ಹಣ ಕೊಡುವಾಗ ಕೆಲವು ಕಡೆ ತಡವಾಗುತ್ತದೆ ಮತ್ತು ತಪ್ಪುಗಳೂ ಆಗುತ್ತವೆ. ಇದನ್ನು ಸರಕಾರದವರು ಅದಷ್ಟು ಒಂದು ರೀತಿಯಾದ ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಇದನ್ನು ಆದಷ್ಟು ವೇಗದಿಂದ ನಿಷ್ಠಾವಂತಿಕೆಯಿಂದ ಮಾಡಿದರೆ ಜನತೆಗೆ ಪ್ರಯೋಜನವಾಗುತ್ತದೆ. ಇಲ್ಲಿ ಇನ್ನೂ ಒಂದು ಮಾತು ಹೇಳಿದರೆ ತಪ್ಪಾಗಲಾರದು. ನಮ್ಮಲ್ಲಿ ಕೋಆಪರೇಟೀವ್ ಕಾಮನ್‌ವೆಲ್ತ್ ಎಂದು ಇದೆ. ಕೋಆಪರೇಟೀವ್ ಸೆಕ್ಟಾರ್‌ನಲ್ಲಿ ಜೀವನಾಳವಾಗಿರುವುದು ಅಲ್ಲರುವ ಜನರ ಒಂದು ಆರ್ಥಿಕ ನೀತಿಯ ಮಟ್ಟ ಅನುಕೂಲವಾಗುವಂತೆ ಒಂದು ಸರಿಯಾದ ನೀತಿ ನಮ್ಮ ಮುಂದೆ ಇಲ್ಲ. ಇದನ್ನು ಸಫಲವಾಗುವಂತೆ ಮಾಡಿದರೆ ಸರಕಾರದವರು ನೇಮಿಸುವ ಸಿಬ್ಬಂದಿಯವರು ನಿಷ್ಠಾವಂತರಾಗಿ ಕೆಲಸ ಮಾಡಿದರೆ ಅದರಿಂದ ದೇಶದ ಪ್ರಗತಿಯಾಗುತ್ತದೆ. ಇಲ್ಲಿರುವ ಜನರ ನೀತಿಯನ್ನು ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡಿದರೆ ಇಲ್ಲಿ ಯಶಸ್ವಿಯಾಗಿ ಕೆಲಸಗಳಾಗುತ್ತವೆ ಎನ್ನುವುದರಲ್ಲಿ ಸಂದೇಹವಿಲ್ಲ. ಕೆಲವು ಕುಂದುಕೊರತೆಗಳು ಇಲ್ಲಿ ಬರುತ್ತವೆ. ಎಷ್ಟೋ ಸೊಸೈಟಿಗಳಲ್ಲಿ ಆಡಿಟ್ ಕೆಲಸವಾಗಿರುತ್ತದೆ. ಆಡಿಟರು ಹೇಳಿರುವಂತೆ ಕೆಲವು ಕಡೆಗಳಲ್ಲಿ ಅಕ್ರಮಗಳಾಗಿರುತ್ತವೆ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ನಮ್ಮ ಹಳ್ಳಿಗಳಲ್ಲಿರುವ ಪಂಚಾಯಿತಿಗಳಲ್ಲಿಯೂ ಕೂಡ ತಪ್ಪಾಗುತ್ತವೆ. ಅವನ್ನು ಸಕಾಲದಲ್ಲಿ ಚರ್ಚೆ ಮಾಡುವುದರಿಂದ ಸರಿಪಡಿಸಿಕೊಳ್ಳಬಹುದು. ಇದಕ್ಕೆ ತಕ್ಕ ಸಿಬ್ಬಂದಿಯೂ ನಮ್ಮಲ್ಲಿರುವುದರಿಂದ ಅಂತಹ ತಪ್ಪುಗಳನ್ನು ತಿದ್ದಿ ಸರಿಪಡಿಸಿಕೊಳ್ಳಬಹುದು. ಇದೇ ರೀತಿ ಸೊಸೈಟಿಗಳಲ್ಲಿಯೂ ಕೂಡ ರೈತರಿಗಾಗಿ ಬೇಕಾಗುವ ಗೊಬ್ಬರ ಹಾಗೂ ಇತರ ಸಾಮಾನುಗಳನ್ನು ಕೊಡುತ್ತಾರೆ. ಇದೇ ರೈತರಿಗೆ ಜೀವಾಳ. ಇದನ್ನು ರೈತರಿಗೆ ಕೊಟ್ಟು ಇನ್ನೂ ಹೆಚ್ಚು ಕಾರ್ಯಗಳು ನಡೆಯಲಿಕ್ಕೆ ಸರಕಾರ ಅವಕಾಶ ಮಾಡಿಕೊಟ್ಟು ಇಲ್ಲಿ ಆಗುವ ತಪ್ಪುಗಳನ್ನು ಪರಿಶೀಲನೆ ಮಾಡಿದರೆ ಇದರಿಂದ ಜನಕ್ಕೆ ಹೆಚ್ಚು ಲಾಭವಾಗುತ್ತದೆ. ಇದೇ ರೀತಿಯಲ್ಲಿ ಇಂದಿನ ದಿವಸಗಳಲ್ಲಿ ಇನ್ನೂ ಹೆಚ್ಚು ಪ್ರಮಾಣದಲ್ಲಿ ನಮ್ಮ ಭಾಗದಲ್ಲೂ ಆಗಬೇಕಾಗಿದೆ ಎಂದು ಇಲ್ಲಿ ಹೇಳಬೇಕಾಗಿದೆ.

ನಮ್ಮ ಹೈದರಾಬಾದು ಕರ್ಣಾಟಕ ಪ್ರದೇಶದಲ್ಲಿ 1961ರ ಅಂಕಿ ಅಂಶಗಳನ್ನು ನೋಡಿದರೆ ಶಿಕ್ಷಣದಲ್ಲಿ ಶೇಕಡಾ 14ರಷ್ಟು ಮಾತ್ರ ಪ್ರಗತಿಯಾಗಿದೆ. ನಮ್ಮ ಭಾಗದಲ್ಲಿ ಹೆಚ್ಚು ಶಾಲೆಗಳಿಲ್ಲ. ಇಲ್ಲಿ ಇಂಜನಿಯರಿಂಗು ಕಾಲೇಜು ಮೆಡಿಕಲ್ ಕಾಲೇಜು ಹಾಗೂ ಇನ್ನಿತರ ಕಾಲೇಜುಗಳಿದ್ದರೂ ಇನ್ನೂ ಹೆಚ್ಚು ಶಾಲಾ ಕಾಲೇಜುಗಳು ಬೇಕು ಎನ್ನುವ ಬೇಡಿಕೆಗಳೂ ಇವೆ. ಈ ಬೇಡಿಕೆಗಳನ್ನು ಸರಕಾರ ಕಾರ್ಯಗತ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದೇ ರೀತಿಯಲ್ಲಿ ನಮ್ಮ ಭಾಗಕ್ಕೆ ಇನ್ನೂ ಹೆಚ್ಚು ಹಣ ಖರ್ಚು ಮಾಡಿ ನಮ್ಮ ದೇಶಕ್ಕೆ ಜೀವನಾಳದಂತಿರುವ ರೈತರಿಗೆ ಹೆಚ್ಚು ಸಹಾಯ ಮಾಡಬೇಕು. ಇದರಲ್ಲೂ ರಾಯಚೂರು, ಬಿದರ್ ಹಾಗೂ ಗುಲ್ಬರ್ಗಾದಲ್ಲಿರುವ ರೈತರಿಗೆ ಸ್ವಲ್ಪ ಹೆಚ್ಚು ಸಹಾಯ ಮಾಡಬೇಕು.

ನಮ್ಮ ದಿವಂಗತ ಪ್ರಧಾನ ಮಂತ್ರಿಗಳು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಅಡಿಗಲ್ಲಿನಂತೆ ಇದ್ದರು. ಅವರು ಪವಿತ್ರವಾದ ಅಡಿಗಲ್ಲು, ಅಂತಹ ಅಡಿಗಲ್ಲಮೇಲೆ ನಿರ್ಮಾಣವಾಗತಕ್ಕ ಈ ಪ್ರಾಜೆಕ್ಟನ್ನು ಕೈಕೊಂಡರೆ ಈ ದೇಶದ ಆ ಭಾಗದ ಸುಮಾರು ಹದಿಮೂರೂವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ ಮತ್ತು ಇಡೀ ದೇಶದ ಆಹಾರದ ಕೊರತೆ ಬೀಳತಕ್ಕ ಪ್ರಸಂಗ ಬೀಳುವುದಿಲ್ಲ ಎಂದು ಹೇಳುತ್ತೇನೆ. ಆದಷ್ಟು ಮಟ್ಟಿಗೆ ಇಂದಿನ ಈ ವರ್ಷದಲ್ಲಿ ಕೇಂದ್ರ ಸರ್ಕಾರದ ನೆರವು ಅದಕ್ಕೆ ಬರಲಿ ಬರದೇ ಇರಲಿ ದೇಶದ ಆಹಾರ ಪ್ರಶ್ನೆಯ ದೃಷ್ಟಿಯಿಂದ ಅದನ್ನು ಕೈಕೊಳ್ಳಬೇಕು. ಈಗಾಗಲೇ ಸಾಕಾದಷ್ಟು ರಸ್ತೆಗಳು ಆಗಿವೆ, ಕಟ್ಟಡಗಳು ಆಗಿವೆ, ಇನ್ನಿತರ ಎಷ್ಟೋ ಕಾರ್ಯಗಳು ಆಗಿವೆ, ಅವನ್ನೆಲ್ಲಾ ನೋಡಿದರೆ, ನಿಜವಾಗಿಯೂ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ತೆಗೆದುಕೊಂಡರೆ ಖಂಡಿತವಾಗಿಯೂ ಅನುಕೂಲವಾಗುತ್ತದೆ ಎಂದು ಹೇಳಬೇಕೆಂದು ನನಗೆ ಅನಿಸುತ್ತದೆ.

ಇದೇ ರೀತಿಯಲ್ಲಿ ಕಲ್ಬುರ್ಗಿಯಲ್ಲಿ ಎಂ.ಎಸ್.ಕೆ. ಮಿಲ್ ಇತ್ತು. ಅದನ್ನು ಮುಚ್ಚಿ ಸುಮಾರು ಮೂರು ದಿವಸ ಆಯಿತು, 29ನೇ ತಾರೀಖಿನ ಆರ್ಡರ್ ಪ್ರಕಾರ ಮುಚ್ಚಲಾಗಿದೆ. ಅದು ಅನೇಕ

(ಶ್ರೀ ಬಾಪುಗೌಡ)

ಜನರಿಗೆ ಅನ್ನ ಬಟ್ಟೆ ಕೊಡುತ್ತಾ ಇತ್ತು. ಮೂರುವರೆ ಸಾವಿರ ಜನರು ಅದರ ಮೇಲೆ ಅವಲಂಬನೆಯಾಗಿದ್ದಾರೆ, ಸುಮಾರು 15 ಸಾವಿರ ಜನರು ನಿರ್ಗತಿಕರಾಗತಕ್ಕ ಸನ್ನಿವೇಶ ಅಲ್ಲಿ ಇದೆ. ಇಂತಹ ಪ್ರಸಂಗದಲ್ಲಿ ಅದಕ್ಕೆ ಹೆಚ್ಚಿನ ಹಣ ಕೊಟ್ಟೂ ಕೂಡ ಮ್ಯಾನೇಜಿಂಗ್ ಡೈರೆಕ್ಟರ ಕಡೆಯಿಂದ ಹಣ ದುರುಪಯೋಗವಾಗಿದೆ. ಸರ್ಕಾರದವರು ಇಂದಿನವರೆಗೂ ಕೈಕಟ್ಟಿಕೊಂಡು ಕುಳಿತಿದ್ದಾರೆ. ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಕ್ರಮತೆಗೆದುಕೊಂಡಿದ್ದ ಪಕ್ಷದಲ್ಲಿ 3½ ಸಾವಿರ ಜನರು ಕೆಲಸ ಮಾಡತಕ್ಕ ಎಂ. ಎಸ್. ಕೆ. ಮಿಲ್‌ನ್ನು ಮುಚ್ಚತಕ್ಕ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಆದ್ದರಿಂದ ತೀವ್ರ ಆ ಎಂ. ಎಸ್. ಕೆ. ಮಿಲ್‌ನ್ನು ತೆರೆಯಬೇಕು ಇಲ್ಲದೆ ಇದ್ದರೆ ಕಲ್ಬುರ್ಗಿ ನಗರದ ಸಾಮಾನ್ಯ ಜನರ ಜೀವನ ಬಹಳ ಕಿರುಕುಳಕ್ಕೊಳಗಾಗುವ ಪ್ರಸಂಗ ಬರುತ್ತದೆ ಎಂಬ ಮಾತನ್ನು ಹೇಳಿ ಇಂದಿನ ದಿವಸ ನಾಲ್ಕು ಮಾತಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri B. P. GANGADHAR (Tumkur).—Mr. Speaker, the Government which has been proclaiming from house tops a socialistic pattern of government or a Government which is going to build a socialistic pattern of society in our State, must take some bold steps in introducing socialism in this country. I want to tell them that they are incapable of bringing in a single legislation in that direction. As one of the measures to bring in socialism I may suggest to them that they can bring in a legislation whereby the salaries can be fixed at Rs. 100 and the maximum as 1,000 and that piece of legislation may be called as Maximum and Minimum Salaries Act. By that the lowest paid official will not get less than Rs. 100 and the topmost will not get more than Rs. 1,000. If they do so, large amounts can be saved which can be made use of for betterment of our country towards agriculture, education or whatever it may be. Similarly there are many items where top heavy administration can be reduced and cut to the lowest level. I was suggesting to the treasury benches the following facts to show how money could be saved for the purpose of the Government.

We see there is a big batallion of ministers in the country. In fact in Madras there was a very compact ministry and it has been doing a very able work. Here there is a big ministry which is responsible for draining a large portion of State exchequer and large amounts are wasted. If we reduce the number of ministers we can save large amounts of money that can be made use of for the betterment of the country. Similarly we can reduce the number of officers of the status of Deputy Commissioner and above. They are superfluous. We are having very many number of them and they are absolutely unnecessary. Similarly we can abolish the posts of Divisional Commissioners and Sub Division Officers who are in good number in the State. If these things are done it will solve the country's problem of economy. The Department of Agriculture and Horticulture may be brought together and so much expenditure incurred in these departments may be saved. Likewise large amounts can be saved in various departments. If all these are very strictly adhered to and moneys are care fully spent, I may respectfully submit that large amounts can be saved and they may be made use of for the betterment of the country.

One more item is there. The Government of course is taking a bold step towards prohibition. Of course we can see the intentions of the Government and also that they are going to scrap prohibition. It is true that the members on this side vehemently argued that prohibition must be strictly enforced. Of course the hon'ble member Sri Vatal Nagaraj was making a sarcastic remark against the minister concerned. But in my humble opinion I feel it is the experience of everyone that it has not been successful. Gandhiji said many things but we do not practice any one of them. We have made law very stringent and inspite of this offences are committed. There is a lot of money spent which could have been derived from prohibition. If that law is scrapped I think in the usual course our Government may get a sum of nearly 16 to 18 crores annually. If so much of money is saved, the land revenue which you are going to abolish, can be done. You are teasing the people and ryot in the sense that even though the ryot is incapable of paying and even though the Ministers in the past just prior to the election called a Press conference and made it very clear that the land revenue will be abolished, you have not done it. In fact our poor ryots took it in good faith and they believed that the promises would be kept up. In fact from many platforms of Congress we heard it. It is only a deceit played on the public just to catch more votes. That is the reason why they are today occupying the treasury benches. I submit that this scrapping of prohibition will give us adequate money so that we can give the entire money and very many poor peasants can be saved and a number of cases in the courts will be solved. But our Government must make a strong and bold step to do it.

Coming to the question of education, we see today large number of boys and girls in big queues seeking admission in various colleges. In Tumkur I saw thousands of students not getting admission for the Pre-University Class. Students who have secured 50 per cent marks are not getting admission into B.Sc. If that were to be the trend, then what is the use of educating those boys upto P.U.C.? The parents will have spent large amounts. I earnestly appeal to the Education Minister to make up his mind to see that at least in such places where accommodation is available, to sanction some more classes. In the I Grade College, Tumkur, there is so much space available. In the interest of students and parents I appeal to the Education Minister to sanction some more classes, opening some more sections, so that all those boys who have unfortunately come upto PUC may get seats in the various colleges. At least there may be some general education for our children.

There are a large number of teachers who have been serving in the Department. So far, they have not been confirmed. If this state of affairs were to continue, there will be a certain amount of apathy on the part of these teachers and so long as this continues, we cannot expect that they will be serving the country and the institutions well or will give good tuition to the students Government must make up their mind see that such persons are immediately confirmed.

(SRI B. P. GANGADHAR)

4-30 P.M.

Coming to the question of corruption, it is a big current which is sweeping the entire State. We do not see a single office where it is not existing. Commecing from the Taluka Office right upto the Ministers it is rampant. Every Minister says that he is honest or a Harischandra and therefore no enquiry need be held against him. Similarly, very recently when an enquiry was held against Sri Bakshi Gulam Mohammed he was found guilty of corruption.

Mr. SPEAKER.—That gentleman is not here and we have no right to refer to him here.

Sri H. SIDDAVEERAPPA.—The hon. Member did not cast any aspersion against that individual. What he said was by way of illustration what appeared in the press and it is already seen by the whole country.

Mr. SPEAKER.—Omit the name and illustrate? Why should the name be dragged in?

Sri H. SIDDAVEERAPPA.—When there are allegations against this Ministry, if no enquiry is held, they may say "We are Harischandras". If an enquiry is held it will come out.

Sri B. P. GANGADHAR.—In the interest of the purity of administration at least in future there should be some honest attempt by the Government to see that this corruption is brought down. What is the use of the Vigilance Commission and the Anti-corruption Department? They are so helpless that they cannot lay their hands on any particular individual who is really the culprit. They will go and catch some clerks here and there who accept Rs. 2 or 10. That is the state of affairs that continues in this country.

Coming to co-operative societies, this co-operative affair in our country, it is said that it has become a very fine pasture for the congress bulls to breed.

Mr. SPEAKER.—That does not reflect well either on him or on the House. Let us try to maintain the decency and decorum of the House at a high level.

Sri B. P. GANGADHAR.—In every society we see that huge defalcations are going on. I may submit that there is not a single society which is doing its work very well. Unfortunately there are no foodgrains in the societies available for the people. Whatever grains are supplied to the societies find their way to the market and wherever we go in the market we see abundant supply of milo and other foodgrains. The Food Minister will kindly take note of this. Sugar is also available in plenty in the market. They are aware of it and yet nothing has happened.

Since my time is over, I close my speech.

SRI M. A. AMALORPAVAM (Bharatinagar).—Mr. Speaker, Sir The Hon'ble Minister for Finance deserves congratulations for the budget presented by him because it is a budget which is tax-free and at the same time it is a balanced budget. We have heard hard-hitting speeches from the Opposition criticising and condemning the budget provisions made by the Government. But I dare say without fear of contradiction that any and every Member who studies the budget in a dispassionate manner would come to the conclusion that the Finance Minister has done a good piece of work despite the fact that we were confronted with the problems which were not easy to overcome. Adverse seasonal conditions, failure of monsoon, Chiness Aggression followed by Pakistani Aggression, soaring prices, scarcity of commodities naturally made the Government think many times before resorting to activities which would evoke enthusiastic appreciation from the Opposition. The economy which was geared to development was thrown out of gear and as a result of the Chinese and Pakstani Aggression we had to switch over from developmental economy to defence economy. As a result we had to put an end to all the developmental activities and we had to spend crores and crores of rupees in order to defend the sacred soil. But our hon'ble Members of the Opposition keep on condemning the Government without making a realistic approach to the problems. During the past decade the Government has spend more than Rs. 90 crores on developmental activities and if you make even a cursory study of the budget you will definitely come to the conclusion that no other Government would have done better than what the present Government has done. We expected from the experienced, enlightened and educated Opposition leaders like Sri Sidd-veerappa, Sri Channabasappa, Sri Gopala Gowda, Sri Sivappa and others a very constructive criticism of the budget and the other activities of the Government; but unfortunately we have never been able to get the kind of criticism which we expected from such eminent and experienced men. Even today we have very great resspect for those hon. Members who are sitting in the Opposition. The other day Sri Siddaveerappa while dilating on the budget told us very frankly and cleared us our doubt that the Oppposition is not bereft of constructive criticism and that they do not offer such criticism because the Government does not bother to follow the sungestions that are given by the Opposition.

Therefore, we realise that even to this minute the hon'ble members on the other side have not decided to cooperate with the Government and offer suggestions in constructive manner which would certainly help to improve administration. In democracy, the Opposition has every right to criticise severely, vehemently, and see that the ruling party realises its errors, and rectifies its errers. It is the right of the public, but unfortunately a very negative approach is made. Particularly when the hon'ble members want to criticise the Hon'ble Chief Minister, they always wax eloquent and it looked as though they seem to think that this was the best forum to give vent to their pent-up wrath and acriminious personal insults. We were wonder-struck, particularly those

(SRI M. A. AMALORPAVAM)

who have come newly to this House, how if this kind of tendency is persisted in, a dignified debate could be continued. I was rather hesitant to talk during the first and second session because there were a spate of points of orders and a flood of clarifications and it looked as if the Treasury Benches as well as the Congresmen will not be in a position to participate in the debate at all. Nobody could object to the Opposition parties taking up cudgels and condemning the Government for their being in the wrong, but to my surprise and astonishment they have never been able to see anything good in the Government at all, they have never seen anything good in the administration, they have never seen anything good in the developmental activities at all. They have always found things to be wrong, things to be erroneous, things to be such as to warrant only ridicule and sometimes very strongly-worded insults. Sir, we do realise Government has not been able to do all that we would like it to do; Government has not done all that it ought to have done; but we should also realise the limitations of the Government, the difficulties which the Government had to face, and as a consequence the Government has not done many things which certainly call for immediate repair. For instance, taking education, though nearly Rs. 33 crores is spent on education, unfortunately hundereds and thousands of students are now struggling for seats. To take my own area, the Civil Area I am not going to be parochial or petty minded there is not a single Government College for a population of 5 to 6 lakhs. Leave alone College, there is not a single Governmet High School either for boys or for girls; there is not a single technical or professional institution in Civil Area. I request the Hon'ble Minister for Education kindly to look into the matter and see that such a vast majority of the people in the metropolitan city of Bangalore are not denied their legitimate right of having proper education in Civil Area. Except for one private college, most of the people in Civil Area have to go to the City area or hundreds of thousands of students would have been denied their chances of higher education. So in all humility I appeal to the Government kindly to take immediate steps to see that this disparity that is existing between the Civil Area and the City area is immediately put an end to and these facilities which are available in the City area are extended to the people in the Civil Area also.

With regard to Medical and health activities, I crave to submit to the Government through you, Sir, for a city which has got 18 lakhs of people including the floating population there are only two major hospitals catering to the needs of men and women, the Bowring and the Victoria apart from the Vani Vilas Hospital. These are the only two hospitals available. How could two major hospitals cater to the needs of nearly 18 lakhs of people? Government should certainly take steps to suggest to the Corporation that they should open certain hospitals. In foreign countries the civil bodies do have the responsibility of opening

hospitals and medical institutions for the citizens. Unless some provision is made for the people of the Civil Area and the City Area of this Metropolitan City by suggesting to the Corporation to open a few more hospitals, the existing hospitals which are now hell on earth would certainly degenerate and they could never be expected to cater to the needs of the teeming lakhs of people here. Barring a few men, all the people living in Bangalore are labourers, who belong to lower middle class and they cannot afford to pay money to these doctors and try to get the treatment which is given only if their services are purchased. Therefore, I humbly submit to Government that they must not be contented with the kind of medical treatment that is made available to the people. Since the time at my disposal is very short, I am not in a position to talk in a comprehensive manner; in an exhaustive manner and I shall reserve my further remarks for the future, during the debate on demands for grants when I shall certainly seek the permission of the Chair to avail myself of more time.

With these words, I thank Mr. Speaker for having given me this opportunity to address this august House.

ಶ್ರೀ ಎನ್. ಹುಚ್ಚುಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ ಅಧ್ಯಕ್ಷರೇ, ನಾನು ಸುಮಾರು 30 ವರ್ಷಗಳಕಾಲ ಕಾಂಗ್ರೆಸ್ ಸ್ನೇಹಿತರ ಜೊತೆಯಲ್ಲಿ ಕೆಲಸ ಮಾಡಿದವನು. ಮೂವತ್ತು ವರ್ಷಗಳ ಕಾಲ ಕೆಲಸ ಮಾಡಿದ ಅನುಭವ ಮತ್ತು ಈಗ ಇಲ್ಲಿ ನಡೆದಿರತಕ್ಕ ವಿದ್ಯಮಾನಗಳನ್ನು ಸ್ವಲ್ಪ ಮಟ್ಟಿಗೆ ತಿಳಿಸಲಿಚ್ಛಿಸುತ್ತೇನೆ. ಈಗತಾನೆ ಶ್ರೀಮಾನ್ ಅಮಲೋರಪಾವಂರವರು—ಎದುರು ಪಕ್ಷದಿಂದ ಒಂದು ಕನ್‌ಸ್ಟ್ರಕ್ಟಿವ್ ಕ್ರಿಟಿಸಿಸಂ ಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ ಎಂದು ಹೇಳಿದರು. ಅವರು ಅದನ್ನು ಕಾರ್ಯಗತ ಮಾಡತಕ್ಕ ನೆಪದ ಮೇಲೆ ಹೇಳಿದ್ದಾರೆ. ಆದರೆ ಎದುರು ಪಕ್ಷದ ಸಲಹೆಗಳಲ್ಲದೆ, ಕಾಂಗ್ರೆಸ್ ಪಕ್ಷದ ಸದಸ್ಯರು ಅನೇಕ ವರ್ಷಗಳಿಂದ ಕೊಟ್ಟಿರತಕ್ಕ ಸಲಹೆಗಳನ್ನು ಎಷ್ಟರ ಮಟ್ಟಿಗೆ ಕಾರ್ಯಗತಮಾಡಿದ್ದಾರೆ, ಇವರು ಹೇಳತಕ್ಕ, ತೋರಿಸತಕ್ಕಂತಹ ಈ ವಾಹನ ಯಾವ ಕಡೆಗೆ ಹೋಗುತ್ತಿದೆ ಎಂದು ನೋಡಿದರೆ ಶ್ರೀಮಾನ್ ಅಮಲೋರಪಾವಂರವರಿಗೆ ವ್ಯಕ್ತವಾಗಬಹುದು. ಎದುರು ಪಕ್ಷದವರು ಅನೇಕ ಸಲಹೆಗಳನ್ನು ಕೊಡಬಹುದು. ಆದರೆ ಅದನ್ನು ಕಾರ್ಯಗತ ಮಾಡತಕ್ಕ ಮನಸ್ಸು, ಶಕ್ತಿ, ಕೇಳತಕ್ಕಂಥವರಿಗೆ ಇರಬೇಕು.

[MR. SPEAKER in the Chair]

ಈಗ ಆಳತಕ್ಕಂತಹ ಪಕ್ಷದಲ್ಲಿ ಒಂದು ಒಳ ಗುಂಪು ಕೂಡ ಇದೆ. ಆ ಗುಂಪಿನ ಅಧಿಕಾರ ಆ ಗುಂಪಿನ ಇಚ್ಛೆ ನಡೆಯುತ್ತದೆ ಅಲ್ಲದೆ, ವಿರೋಧಗುಂಪಿನವರದ್ದು ನಡೆಯುತ್ತಾ ಇಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದವರು ಇದ್ದಾರೆ. ಅವರೆಲ್ಲರೂ ಈ ಒಳಗುಂಪಿನಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ನೋಡಿ ಎಷ್ಟು ಮಟ್ಟಿಗೆ ಸಂತೋಷಗೊಂಡಿದ್ದಾರೆ, ಅಥವಾ ವ್ಯಥೆಯಾಗಿದೆಯೇ ಎಂಬುದು ಅವರಿಗೆ ಗೊತ್ತಿಲ್ಲದೆ ಬೇರೆಯವರಿಗೆ ಗೊತ್ತಾಗಲಾರದು. ಇದು ನಿಜವಾದ ಸತ್ಯಾಂಶ.

ಶ್ರೀಮಾನ್ ಹೆಗ್ಗಡೆಯವರು ಒಂದು ಭಾಷಣದಲ್ಲಿ "ಅತ್ಯುತ್ತಮ ಶ್ರೇಣಿಯ ನಾಯಕತ್ವ ನಮಗೆ ಇದೆ" ಎಂದು ಹೇಳಿದರು. ಶ್ರೀಮಾನ್ ಸಿದ್ದವೀರಪ್ಪನವರು ಅವರ ಭಾಷಣದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದಾರೆ. ಈ ನಾಯಕತ್ವದ ಬಲ ಯಾವುದು ಎಂಬುದನ್ನು ನೋಡಬೇಕು. ಈ ಒಳ ಗುಂಪಿನ ಬಲ ಅವರದ್ದು. ಅದರ ಜೊತೆಗೆ ಹಣ, ಅದರ ಜೊತೆಗೆ ಜಾತಿ. ಇದು ನಿಜವಾದಂತಹ ಬಲ. ಆ ರೀತಿಯಲ್ಲಿ ಒಳ ಪಂಗಡವಿತ್ತು. ಈ ಬಲ ದೇಶದಲ್ಲೆಲ್ಲಾ ಎದ್ದು ಕಾಣುತ್ತಿದೆ. ಇದನ್ನು ವಿವರಿಸಿ ಒಂದೆರಡು ಮಾತುಗಳನ್ನು ಹೇಳುತ್ತಿದ್ದೇನೆ. ಹೀಗೆ ಹೊಗಳುಭಟ್ಟರ ಮಾತುಗಳನ್ನು ಕೇಳಿ, ಈ ರಾಜ್ಯದ ಹಿತದೃಷ್ಟಿಯನ್ನು ಹಾಳುಮಾಡಿ, ನಿಜವಾದ ಸ್ಥಿತಿಯನ್ನು ಹಾಳು ಮಾಡುವುದಕ್ಕಿಂತ ಅದನ್ನು ಒಳ್ಳೆಯ ರೀತಿಗೆ ತರಲು ದೇಶವನ್ನು ಆಳತಕ್ಕ ಮಾನ್ಯ ಮುಖ್ಯಮಂತ್ರಿಯವರು ಸ್ವಲ್ಪ ಮನಸ್ಸು ಮಾಡಬೇಕು. ಅವರು ಈ ಹೊಗಳುಭಟ್ಟರ ಮಾತಿಗೆ ಮರುಳಾಗಬಾರದೆಂದು ನಾನು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಜನಸಾಮಾನ್ಯರು ಈ ಮಾತಿಗೆ ಮರುಳಾಗತಕ್ಕ ಸ್ಥಿತಿಯಲ್ಲಿಲ್ಲ. ಈಗಾಗಲೇ 1967ನೇ ಸಾರ್ವತ್ರಿಕ ಚುನಾವಣೆಯಲ್ಲಿ ಜನರೇ ಸ್ವಲ್ಪಮಟ್ಟಿಗೆ ಬುದ್ಧಿ ಕಲಿಸಿದ್ದಾರೆ. ಶಾಸಕರಂತೂ ಈ ಮಾತುಗಳಿಗೆ ಮರುಳಾಗತಕ್ಕವರಲ್ಲ. ಇದನ್ನು ಇನ್ನೂ ವಿವರಿಸಿ ಹೇಳಬಹುದು. ಇವತ್ತಿನ ದಿವಸ ಇಲಾಖೆಯ ಮುಖ್ಯ ಅಧಿಕಾರಿಗಳನ್ನು ತೆಗೆದುಕೊಳ್ಳೋಣ. 1956ನೇ ಇಸವಿಯಲ್ಲಿ ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಜಾತಿಯ ಜನ ಎಷ್ಟು ಇದ್ದರು ಇವತ್ತು ಎಷ್ಟು ಇದ್ದಾರೆ ಎಂದು ನೋಡಬೇಕಾಗಿದೆ. ಜಾತಿಯ ಮೇಲೆ ಏತಕ್ಕೆ ಹೇಳಬೇಕಾಗುತ್ತದೆ ಎಂದರೆ, ಬರೀ ಪ್ರಮೋಷನ್‌ನಲ್ಲಿ ಕಾನೂನು ಪ್ರಕಾರವಾಗಿ ಬಂದಿರತಕ್ಕದ್ದು ಬೇರೆ. ಈಗ ಉದಾಹರಣೆಗೆ ತೆಗೆದುಕೊಂಡರೆ, ಪಿ.ಡಬ್ಲ್ಯು.ಡಿ. ಇಲಾಖೆ ತೆಗೆದುಕೊಂಡರೆ, ಸೆಕ್ರೆಟರಿ, ಜಾಯಿಂಟ್ ಸೆಕ್ರೆಟರಿಯಿಂದ ಹಿಡಿದು ಚೀಫ್ ಇಂಜನೀಯರ್‌ವರೆಗೆ ಇವರ ಕಡೆಯವರೇ ಇದ್ದಾರೆ. ಸೆಕ್ರೆಟರಿಯವರನ್ನಾದರೂ ಕೂಡ ಬೇರೆಯವರನ್ನು ಇಟ್ಟುಕೊಳ್ಳುವುದು ಒಳ್ಳೆಯದೆಂದು ನಮ್ಮ ಮುಖ್ಯ ಮಂತ್ರಿಯವರ ಗಮನಕ್ಕೆ ಬಂದಿದ್ದರೆ ಚೆನ್ನಾಗಿತ್ತು. ಏಕೆಂದರೆ, ಸೀಜರ್‌ನ ಹೆಂಡತಿ ಒಂದು ಆಕ್ಷೇಪಣೆಗೆ ದೂರವಾಗಿ ನಿಲ್ಲತಕ್ಕ ಯೋಜನೆ ಮಾಡಬೇಕೆಂದು ಹಿಂದಿನವರು ಹೇಳುತ್ತಾರೆ. ಈ ರಾಜ್ಯದಲ್ಲಿ ಅನೇಕ ಜಾತಿಯವರು ಅನೇಕ ಪಂಥಗಳವರು ಇದ್ದಾರೆ. ಇವರೆಲ್ಲರ ಮನಸ್ಸಿಗೆ ಒಪ್ಪುವಂತೆ ಕೆಲಸ ಮಾಡಬೇಕೆಂದು ಈ ಮಂತ್ರಿಮಂಡಲದವರಿಗೆ ತಿಳಿದಿದ್ದರೆ ಈ ದೇಶದ ರಾಜ್ಯಭಾರ ಉತ್ತಮವಾಗುತ್ತಿತ್ತು ಎಂದು ಹೇಳುತ್ತೇನೆ. ಅದಕ್ಕೆ ಬದಲಾಗಿ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಅವರ ಹತ್ತಿರದವರನ್ನು ಇಟ್ಟುಕೊಂಡಿದ್ದಾರೆ. ಈ ಇಲಾಖೆಯಲ್ಲಿ ಅನೇಕ ಜನ ಚೀಫ್ ಇಂಜನೀಯರುಗಳು ಇದ್ದಾರೆ. ಯಾರು ಸೀನಿಯರ್ ಚೀಫ್ ಇಂಜನೀಯರ್ ಇರುತ್ತಾರೋ ಅವರಿಗೆ ಎಸ್ಟಾಬ್ಲಿಷ್‌ಮೆಂಟ್ ಕೊಡುವುದಕ್ಕೆ ಬದಲಾಗಿ, ಅವರಿಗೆ ಬೇಕಾದ ಬೇರೆ ಒಬ್ಬರನ್ನು ತೆಗೆದುಕೊಂಡು ಅವರಿಗೆ ಎಷ್ಟಾಬ್ಲಿಷ್‌ಮೆಂಟನ್ನು ವಹಿಸಿದ್ದಾರೆ. ಸೀನಿಯರ್ ಇರುವವರಿಗೆ ಎಷ್ಟಾಬ್ಲಿಷ್‌ಮೆಂಟನ್ನು ವಹಿಸಬೇಕೆನ್ನುವುದು ಹಿಂದಿನಿಂದ ಒಂದು ಸಂಪ್ರದಾಯವಾಗಿತ್ತು. ಅದನ್ನು ಮರೆತು ನಡೆಯುತ್ತಿದ್ದಾರೆ.

ಇನ್ನು ಕೈಗಾರಿಕೆಗಳನ್ನು ತೆಗೆದುಕೊಂಡರೆ, ಇಲ್ಲಿಯ ಅಧಿಕಾರಿಗಳು ಪ್ರಮೋಷನ್ನಾಗಿ ಬರುವವರಲ್ಲ, ಸರ್ಕಾರದವರೇ ಅವರನ್ನು ನೇಮಿಸುತ್ತಾರೆ. ಭದ್ರಾವತಿ ಕಾರ್ಖಾನೆಯಲ್ಲಿ, ಎನ್.ಜಿ.ಇ.ಎಫ್.ನಲ್ಲಿ, ಸ್ಯಾಂಡಲ್ ಸೋಪ್ ಕಾರ್ಖಾನೆಯಲ್ಲಿ ಇರುವ ಅಧಿಕಾರಿಗಳೆಲ್ಲ ಒಂದೇ ಜಾತಿಯವರು. ಎಲ್ಲಿ ನೋಡಿದರೂ ಸಹ ಇವರ ಜಾತಿಯವರೇ ಇದ್ದಾರೆ. ಇಷ್ಟೇ ಅಲ್ಲ, ಯಾವುದಾದರೂ ಕೆಲಸ ಕಾರ್ಯಗಳನ್ನು ಮಾಡಬೇಕಾದರೂ ಸಹ ಜಾತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತಾರೆ. ಒಂದು ನಾಲೆ ತೆಗೆಸಬೇಕಾದರೂ ಸಹ ತಮಗೆ ಬೇರ್ಯಾವ ದೃಷ್ಟಿಯೂ ಇಲ್ಲ. ಇದೆಲ್ಲಾ ಜನರಿಗೆ ತಿಳಿಯುತ್ತಿದೆ. ಇವರು ಮಾಡುತ್ತಿರುವುದು ತಪ್ಪು ಎಂದು ಜನರು ತಿಳಿಯುತ್ತಿರುವುದು ಮಂತ್ರಿಮಂಡಲದವರಿಗೆ ಗೊತ್ತಿದೆಯೋ ಇಲ್ಲವೊ. ಮಂಡ್ಯದ ವರುಣಾ ನಾಲೆಯನ್ನು ತೆಗೆದರೆ 24 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದರಲ್ಲಿಯೂ ಜಾತಿಯ ಸೋಂಕು ಸೇರಿದೆಯೆಂದು ಅಲ್ಲಿಯ ಜನರು ಹೇಳಿಕೊಳ್ಳುತ್ತಿದ್ದಾರೆ, ಇದನ್ನು ನಾನು ಕೇಳಿದ್ದೇನೆ. ಇದು ಎಷ್ಟರಮಟ್ಟಿಗೆ ನಿಜ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇನ್ನೂ ಒಂದು ಉದಾಹರಣೆಯನ್ನು ಹೇಳಬಹುದು, 3000 ರಿಟ್ ಪಿಟಿಷನ್ ಹೈಕೋರ್ಟಿನಲ್ಲಿವೆ. ಇದರಲ್ಲಿ 2800 ರಿಟ್ ಪಿಟಿಷನ್‌ಗಳು ಪ್ರಮೋಷನ್‌ಗೆ ಸೇರಿದವು. ಮತ್ತು ಸೀನಿಯಾರಿಟಿಗೆ ಸಂಬಂಧಪಟ್ಟವು. ಅದರಲ್ಲಿ ಎಷ್ಟು ಜಾತಿಯ ಅಂಶ ಸೇರಿದೆ ಎಂಬುದನ್ನು ಪರೀಕ್ಷೆ ಮಾಡಿದರೆ ಗೊತ್ತಾಗುತ್ತದೆ. ಈ ಕಾಂಗ್ರೆಸ್ ಸಂಸ್ಥೆಯವರು ವರ್ಗ ರಹಿತ ಜಾತಿ ರಹಿತ ಸಮಾಜ ಸ್ಥಾಪನೆ ಮಾಡುತ್ತೇವೆಂದು ಹೊರಟವರು. ದೊಡ್ಡ ಮನುಷ್ಯರು ಈ ವಿಚಾರದಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಇವರು ಮರೆತು ಹೋಗಿದ್ದಾರೆ. ಎಲ್ಲೆಲ್ಲೂ ಇದೇ ಮಾತಾಗಿದೆ. ಇದು ನಮ್ಮ ದೇಶದಲ್ಲಿರತಕ್ಕಂಥ ಸತ್ಯವಾದ ಸಂಗತಿ. ಇದನ್ನು ಆಡಳಿತಗಾರರ ಮನಸ್ಸಿನಲ್ಲಿಡಬೇಕು. ಭಾಷಾವಾರು ಪ್ರಾಂತ್ಯ ರಚನೆಯಾಗಬೇಕೆಂದು ಕೆಲವರು ಹೇಳಿದಾಗ, ಮತ್ತೆ ಕೆಲವರು ಭಾಷಾವಾರು ಪ್ರಾಂತ್ಯ ರಚನೆಯಾದರೆ, ಆಡಳಿತದಲ್ಲಿ ಸಂಕುಚಿತ ಮನೋಭಾವ ಬೆಳೆಯುತ್ತದೆ, ಜಾತಿ ಮನೋಭಾವ ಬೆಳೆಯುತ್ತದೆ, ಇದಕ್ಕೆ ಅವಕಾಶ ಕೊಡಬಾರದೆಂದು ಕೆಲವರು ಹೇಳಿದರು. ಈ ಅನುಮಾನ ಈಗ ಸತ್ಯವಾಗಿ ಕಾಣುತ್ತಿದೆ. ಶ್ರೀಮಾನ್ ನಿಜಲಿಂಗಪ್ಪನವರು ಸಹ ಒಂದಾವರ್ತಿ ಭಾಷಾವಾರು ಪ್ರಾಂತ್ಯ ರಚನೆಯಾಗಬಾರದಿತ್ತು ಎಂದು ಹೇಳಿದ್ದರು. ಆದರೆ ಅವರು ಕೊಟ್ಟ ಕಾರಣ ಬೇರೆ ಇರಬಹುದು. ಸಂಕುಚಿತ ಮನೋಭಾವ ಜಾತಿ ಮನೋಭಾವ ಈ ರೀತಿಯಾಗಿ ಬೆಳೆಯುವುದಕ್ಕೆ ಅವಕಾಶವಾಗಿರುವುದು ನಮ್ಮ ದುರದೃಷ್ಟವೆಂದು ಹೇಳುತ್ತೇನೆ. ಪ್ರಜಾಪ್ರಭುತ್ವವನ್ನು ಬೆಳೆಸುತ್ತೇವೆಂದು ನಮ್ಮ ಹಿರಿಯರು ಸಾರಿಕೊಂಡು ಬಂದಿದ್ದಾರೆ. ಜಾತಿ ಬೆಳೆಯು

ವುದಕ್ಕೆ ಯಾವಾಗ ನಾವು ಅವಕಾಶ ಕೊಡುತ್ತೇವೋ ಆಗ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ, ಪ್ರಜಾಪ್ರಭುತ್ವ ವೊಟಕಾಗುತ್ತದೆ, ಜಾತಿವಾದ ಪ್ರಜಾಪ್ರಭುತ್ವಕ್ಕೆ ಪರಮವೈರಿ ಎಂದು ದಿವಂಗತ ನೆಹರೂ ಅವರು ಸಾರಿ ಸಾರಿ ಹೇಳಿದ್ದಾರೆ. ಅವರ ಮಾತಿಗೆ ಇವರು ಗಮನ ಕೊಡುತ್ತಿಲ್ಲ. ಇವರು ಒಂದು ಕಡೆ ಪ್ರಜಾಪ್ರಭುತ್ವ ಬೆಳೆಸುತ್ತೇವೆಂದು ಹೇಳುತ್ತಾರೆ, ಮತ್ತೊಂದು ಕಡೆ ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದ್ದಾರೆ. ಕಾಂಗ್ರೆಸ್ ಕಡೆಯವರು ಅಧಿಕಾರ ನಡೆಸುವುದು ಎಲ್ಲಿ ತಪ್ಪಿ ಹೋಗುತ್ತದೆಂದು ತಿಳಿದು ಸೂಪರ್‌ಸೀಡ್ ಮಾಡಿದರು. ಅದೇ ಇಂಗ್ಲೆಂಡ್ ದೇಶದಲ್ಲಿ ಇಂತಹ ಪರಿಸ್ಥಿತಿ ಇದ್ದರೆ ಮತ್ತೊಮ್ಮೆ ಚುನಾವಣೆ ನಡೆಯಿಸಿ, ಯಾವ ಪಕ್ಷ ಆಡಳಿತ ನಡೆಸುವುದಕ್ಕೆ ಯೋಗ್ಯವೋ ಅದಕ್ಕೆ ಅಧಿಕಾರ ವಹಿಸಿಕೊಡುತ್ತಿದ್ದರು. ಆದರೆ ಇಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೋ ಇಲ್ಲವೋ ಎನ್ನುವ ಅನುಮಾನ ಇಟ್ಟುಕೊಂಡು ಕಾರ್ಪೋರೇಷನ್ ಸೂಪರ್‌ಸೀಡ್ ಮಾಡಿದರು. ಕಾರ್ಪೋರೇಷನ್‌ಗೆ ಸಂಬಂಧಪಟ್ಟ ಮಂತ್ರಿಗಳು ಒಂದು ಕಡೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ, ಏನೆಂದರೆ, ಚುನಾಯಿತ ಸದಸ್ಯರುಗಳು 10 ವರ್ಷಗಳಲ್ಲಿ ಮಾಡುವ ಪ್ರಗತಿಯನ್ನು ಸರ್ಕಾರಿ ನೌಕರರು ಕೆಲವೇ ತಿಂಗಳುಗಳಲ್ಲಿ ಸಾಧಿಸಿದ್ದಾರೆಂದು. ಪ್ರಜಾಪ್ರಭುತ್ವ ಬೆಳೆಸುತ್ತೇವೆಂದು ಹೇಳಿಕೊಳ್ಳುವ ಈ ಮಂತ್ರಿಗಳು, ತಮ್ಮ ಮೇಲೆಯೆ ದೂರು ಬರುತ್ತೆ ಎಂಬುದನ್ನು ಮರೆತಿದ್ದಾರೆ. ಸರ್ಕಾರೀ ನೌಕರರೇ ಉತ್ತಮವಾಗಿ ಆಡಳಿತ ನಡೆಸಿದರೆ, ನಾವುಗಳಾದರು ಏತಕ್ಕೆ ಇರಬೇಕು. ಮಂತ್ರಿಮಂಡಲವಾದರೂ ಏತಕ್ಕೆ ಇರಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಇವರು ಅಷ್ಟೊಂದು ಸುಲಭವಾಗಿ ಅಧಿಕಾರವನ್ನು ಬಿಟ್ಟು ಕೊಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮಲ್ಲಿ ಒಂದು ಗಾದೆ ಇದೆ, ದತ್ತು ಪುತ್ರನಿಗೆ ಹೇಗೆ ಪಿತೃ ಭಕ್ತಿ ಬರುತ್ತದೆ ಎಂದು. ಇವರು ಮಾಡುತ್ತಿರುವ ಆಡಳಿತ ಮಾತ್ರ ಸರಿಯಾಗಿ ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದಾರೆ. ಶ್ರೀ ಆರ್. ಎಂ. ಪಾಟೀಲರು ಸುಖವಾಗಿ ಬೆಳೆದವರು, ದೇಶದ ಸ್ವಾತಂತ್ರ್ಯಕ್ಕಾಗಿ ಯಾವ ರೀತಿಯಿಂದಲೂ ದುಡಿಯಲಿಲ್ಲ. ಆದುದರಿಂದ ಇವರಿಂದ ಇದಕ್ಕಿಂತ ಹೆಚ್ಚು ನಿರೀಕ್ಷಿಸುವಂತಿಲ್ಲ. ಕಾರ್ಪೋರೇಷನ್ ಚುನಾವಣೆಯಾಗಲೀ, ಮುನಿಸಿಪಲ್ ಚುನಾವಣೆಯಾಗಲೀ, ತಾಲ್ಲೂಕ್ ಬೋರ್ಡ್ ಚುನಾವಣೆಯಾಗಲೀ ನಡೆಸುವುದಕ್ಕೆ ತುರ್ತು ಪರಿಸ್ಥಿತಿ ಇದೆಯೆಂದು 7–8 ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದಾರೆ. ಮಹಾ ಚುನಾವಣೆ ಮಾತ್ರ ನಡೆಯುವುದಕ್ಕೆ ತುರ್ತು ಪರಿಸ್ಥಿತಿ ಅಡ್ಡ ಬರಲಿಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮಾತ್ರ ತುರ್ತು ಪರಿಸ್ಥಿತಿ ಕಾರಣವೇನು ? ಎಲ್ಲಿ ಕಾಂಗ್ರೆಸ್ ಆಡಳಿತ ಹೊರಟು ಹೋಗುತ್ತದೋ ಎನ್ನುವ ಭಯ ಇವರಿಗೆ ಇದೆ. ಈ ಚುನಾವಣೆಗಳನ್ನು ನಡೆಸುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ.

ಇನ್ನು ಮುಖ್ಯ ಮಂತ್ರಿಯವರು ಮಂತ್ರಿ ಮಂಡಲವನ್ನು ರಚಿಸುವ ವಿಧಾನ. ಈ ಮಂತ್ರಿ ಮಂಡಲದಲ್ಲಿ ಇರುವವರು ಇಡೀ ದೇಶಕ್ಕೆ ಸಂಬಂಧಪಟ್ಟವರಾಗಿರಬೇಕು. ಆದರೆ ಜನಸಾಮಾನ್ಯರ ಜೊತೆಯಲ್ಲಿ ಬೆರೆಯುವ ಮತ್ತು ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುವ ಮನೋಭಾವವಿಲ್ಲದಂಥವರು ಮಂತ್ರಿಮಂಡಲದಲ್ಲಿ ಇದ್ದಾರೆ. ಯಾರು ಚುನಾವಣೆಯನ್ನು ಎದುರಿಸಿ, ಜನರ ಬೆಂಬಲವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲವೋ ಅಂತಹವರು ಮಂತ್ರಿಮಂಡಲದಲ್ಲಿ ಇದ್ದಾರೆ. ಕೇವಲ ಅವರ ಸ್ವಂತ ಆಶೆ ಆಕಾಂಕ್ಷೆಗಳನ್ನು ಮಾತ್ರ ಈಡೇರಿಸಿಕೊಳ್ಳುವಂತಹವರು ಮಂತ್ರಿಮಂಡಲದಲ್ಲಿ ಇದ್ದಾರೆ. ಈ ಮಂತ್ರಿಗಳಲ್ಲಿ ಕೆಲವರಿಗೆ ಕೆಲಸವೇ ಇಲ್ಲ. ಯಾವುದೋ ಒಂದು ಪಂಗಡ ಅಥವಾ ಜಾತಿಯವರನ್ನು ತೃಪ್ತಿಪಡಿಸುವುದಕ್ಕೆ ಆ ಜಾತಿಯ ಕೆಲವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿದ್ದಾರೆ. ಅವರಿಂದ ಕೆಲಸವನ್ನು ತೆಗೆದುಕೊಳ್ಳಬಹುದೇ ಎಂಬುದನ್ನು ಯೋಚನೆ ಮಾಡಲಿಲ್ಲ. ಅಂತೂ ಕೆಲಸ ಸಾಕಷ್ಟು ಕೊಡದೆ ಕೂರಿಸಿದ್ದಾರೆ.

ಇನ್ನು ನಮ್ಮ ಮುಖ್ಯಮಂತ್ರಿಗಳು ವ್ಯವಸಾಯ ಮತ್ತು ಕೈಗಾರಿಕಾ ಇಲಾಖೆಗಳಂಥ ದೊಡ್ಡ ದೊಡ್ಡ ಇಲಾಖೆಗಳನ್ನೇ ವಹಿಸಿಕೊಂಡಿದ್ದಾರೆ. ಇವರಿಗೆ ವ್ಯವಸಾಯದ ಗಂಧವೇ ಇಲ್ಲ, ನೇಗಿಲನ್ನು ಎಂದಾದರೂ ನೋಡಿದ್ದಾರೋ ನನಗೆ ತಿಳಿಯದು. ವ್ಯವಸಾಯದ ಖಾತೆಯನ್ನು ತೆಗೆದುಕೊಳ್ಳುವವರಿಗೆ ಪುಸ್ತಕದ ಜ್ಞಾನ ಇದ್ದರೆ ಸಾಲದು, ವ್ಯವಸಾಯವನ್ನು ಮಾಡಿ ಅನುಭವ ಜ್ಞಾನ ಇರಬೇಕು. ಏಕೆಂದರೆ, ನಮ್ಮ ದೇಶದಲ್ಲಿ ವ್ಯವಸಾಯದ ಅಭಿವೃದ್ಧಿಯಾಗಬೇಕಾಗಿದೆ. ಆಹಾರ ಧಾನ್ಯವನ್ನು ಹೆಚ್ಚು ಬೆಳೆಯಬೇಕಾಗಿದೆ. ಆದರೆ ಶಕ್ತಿ ಇಲ್ಲದವರು ಈ ಖಾತೆಯನ್ನು ವಹಿಸಿಕೊಂಡರೆ ದೇಶ ಯಾವ ರೀತಿ ಉದ್ಧಾರವಾಗುತ್ತದೆಂದು ಕೇಳುತ್ತೇನೆ.

(ಶ್ರೀ ಎನ್. ಹುಚ್ಚಮಾಸ್ತಿ ಗೌಡ)

5-00 P. M.

ಈಗಿನ ಸಂದರ್ಭದಲ್ಲಿ ವ್ಯವಸಾಯಾಭಿವೃದ್ಧಿಗೆ ಆಗಬೇಕಾದ ಮುಖ್ಯಾಂಶಗಳನ್ನು ಚೆನ್ನಾಗಿ ಗಮನದಲ್ಲಿಡಬೇಕು. ಏಕೆಂದರೆ, ಈಗ ಈ ದೇಶದ ಜನಸಂಖ್ಯೆ ಶತಗುಣವಾಗಿ ಬೆಳೆಯುತ್ತಿದೆ. ಆದರೆ ಅದಕ್ಕೆ ಸರಿಯಾಗಿ ವ್ಯವಸಾಯಾಭಿವೃದ್ಧಿ, ಆಹಾರೋತ್ಪತ್ತಿ ಆಗದಿದ್ದರೆ ಜನ ಹಸಿದು ಸಾಯ ಬೇಕಾಗುತ್ತದೆ. ಈಗ ಇವರು ಮಾಡಿರುವ ಹೊರದೇಶಗಳಿಂದ ಬರುವ ಆಹಾರ ಸರಬರಾಜು ಸದಾ ಕಾಲದಲ್ಲಿಯೂ ಸಿಗುವುದಿಲ್ಲ. ಸಿಕ್ಕಿದರೂ ಪರದೇಶಗಳಿಂದ ಆಹಾರವನ್ನು ತರುವುದು ಅವಮಾನ. ಅದನ್ನು ಗಮನದಲ್ಲಿಟ್ಟುಕೊಂಡು ವ್ಯವಸಾಯಾಭಿವೃದ್ಧಿ ಮಾಡಬೇಕು. ಮುಖ್ಯವಾಗಿ ರೈತರಿಗೆ ಬೇಕಾದುದು ಸಕಾಲಕ್ಕೆ ಗೊಬ್ಬರ, ಉತ್ತಮವಾದ ಬೀಜ, ನೀರಿನ ಸೌಕರ್ಯ, ಬೆಳೆಗಳ ರೋಗರುಜಿನಗಳನ್ನು ತಡೆಯುವುದಕ್ಕೆ ಬೇಕಾದ ಕ್ರಮ ಮತ್ತು ವ್ಯವಸಾಯೋಪಕರಣಗಳ ಸರಬರಾಜು-ಇವುಗಳ ಪೈಕಿ ಯಾವ್ಯಾವ ಕೆಲಸಗಳನ್ನು ಪೂರ್ಣವಾಗಿ ಮಾಡಿದ್ದಾರೆ, ಹೇಳಲಿ. ಕೇವಲ ಗೊಬ್ಬರದ ವಿಷಯವನ್ನೇ ತೆಗೆದುಕೊಂಡರೆ ಇಡೀ ಇಂಡಿಯಾದೇಶದಲ್ಲಿಯೇ ರೈತರಿಗೆ ಬೇಕಾದ ಗೊಬ್ಬರದ ಕಾಲು ಭಾಗದಷ್ಟು ಇವರು ಉತ್ಪತ್ತಿ ಮಾಡುತ್ತಿಲ್ಲ. ಇವರು 20 ವರ್ಷಗಳಿಂದ ಮಾಡಿರುವುದು ಏನು ? ರೈತರಿಗೆ ಅಧಿಕವಾಗಿ ಬೇಕಾಗಿರುವುದು ಗೊಬ್ಬರ. ಅದನ್ನೇನಾದರೂ ಹೆಚ್ಚಿಗೆ ಉತ್ಪತ್ತಿ ಮಾಡಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇಂತಹ ನಾನಾ ಕಾರಣಗಳನ್ನು ನಾನು ಕೊಡಬಲ್ಲೆ. ಮಂಗಳೂರಿನಲ್ಲಿ ಒಂದು ಗೊಬ್ಬರದ ಕಾರ್ಖಾನೆ ಇನ್ನೇನು ಆಯಿತು ಎಂದು ಹೇಳಿದರು. ಅದನ್ನೇನು ಕಾರ್ಯಗತ ಮಾಡಿದ್ದಾರೆಯೇ ? ಶ್ರೀಮಾನ್ ನಿಜಲಿಂಗಪ್ಪನವರು 1956ನೇ ಇಸವಿಯಿಂದ ಒಂದೇ ಸಮ ಮಂಗಳೂರಿನಲ್ಲಿ ಕೃತಕಗೊಬ್ಬರವನ್ನು ಉತ್ಪತ್ತಿ ಮಾಡುವ ಕಾರ್ಖಾನೆ ಬರುತ್ತೆಂದು ಹೇಳುತ್ತಾ ಬಂದಿದ್ದಾರೆ. ಯಾವಾಗ ಈ ಮಾತು ಈಡೇರುತ್ತೋ ಹೇಳಲಾರೆ. ಯಾವ ಭರವಸೆಯನ್ನೂ ಇಟ್ಟುಕೊಳ್ಳುವಂತಿಲ್ಲ. ಇನ್ನು ವ್ಯವಸಾಯೋಪಕರಣಗಳನ್ನು ನಮ್ಮ ರಾಜ್ಯದಲ್ಲಿ ತಯಾರಿಸುತ್ತೇವೆಂದು ಬೇಕಾದಷ್ಟು ಸಾರಿ ಹೇಳುತ್ತಿರುತ್ತಾರೆ. ಪವರ್ ಟಿಲ್ಲರ್ಸನ್ನು ಬೇಕಾದಷ್ಟು ತಯಾರು ಮಾಡಿಸುತ್ತೇವೆಂದು ಹೇಳಿ ಹೆಬ್ಬಾಳ್‌ನಲ್ಲಿ ಏಳೆಂಟು ವರ್ಷಗಳ ಹಿಂದೆ ಡೆಮಾನ್‌ಸ್ಟ್ರೇಟ್ ಮಾಡಿಯೂ ತೋರಿಸಿದರು. ಇಲ್ಲಿ ಒಂದು ಕಂಪೆನಿ ರಿಜಿಸ್ಟರ್ ಮಾಡಿ, ಲೈಸೆನ್ಸ್ ಪಡೆದು ಬಹು ಬೇಗ ಯಂತ್ರಗಳ ತಯಾರಿಕೆ ಪ್ರಾರಂಭವಾಗುತ್ತದೆಂಬ ಭರವಸೆ ಕೊಟ್ಟರು. ಯಾವಾಗ ಪ್ರಾರಂಭವಾಗುತ್ತೋ ಗಣೇಶನ ಮದುವೆಯ ಕಾಲಕ್ಕೆ ಆಗಬಹುದು. ಮೈಸೂರು ದೇಶದ ಹಿಡುವಳಿಗಳನ್ನು ಜಪಾನ್ ದೇಶದ ಹಿಡುವಳಿಗಳಿಗೆ ಹೋಲಿಸಬಹುದು. ಅಲ್ಲಿ ಸಣ್ಣ ಹಿಡುವಳಿದಾರರಿಗೆ ಬೇಕಾದಷ್ಟು ವ್ಯವಸಾಯೋಪಕರಣಗಳನ್ನು ಒದಗಿಸಿ ಆಗಿಂದಾಗ್ಗೆ ಅಗತ್ಯವಾಗಿ ಬೇಕಾದ ಬದಲಾವಣೆಗಳನ್ನು ಮಾಡಿ ಸಾಕಷ್ಟು ಉಪಕರಣಗಳನ್ನು ಒದಗಿಸಿ ವ್ಯವಸಾಯಾಭಿವೃದ್ಧಿಗೆ ತಕ್ಕ ಸೌಕರ್ಯಗಳನ್ನು ಕೊಡುತ್ತಿದ್ದಾರೆ. ಪ್ರತಿಯೊಬ್ಬ ರೈತನಿಗೂ ಅನುಕೂಲ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಇದು ನಮ್ಮ ಮೈಸೂರು ದೇಶ ಮತ್ತು ಇಂಡಿಯಾ ದೇಶದ ಸರ್ಕಾರಗಳಿಗೆ ಏಕೆ ಹೊಳೆಯಲಿಲ್ಲವೆಂದು ನಾನು ಪ್ರಶ್ನೆ ಮಾಡುತ್ತೇನೆ. ಮುಖ್ಯವಾಗಿ ನಮ್ಮಲ್ಲಿ ಹೆಚ್ಚಿಗೆ ವ್ಯವಸಾಯಾಭಿವೃದ್ಧಿಯಾಗಿ ಹೆಚ್ಚು ಹೆಚ್ಚು ಆಹಾರೋತ್ಪತ್ತಿ ಉಂಟಾಗದೆ ಹೋದರೆ ನಿಜವಾಗಿ ನಾವು ಮುಂದುವರಿಯುವುದು ಸಾಧ್ಯವಾಗುವುದಿಲ್ಲ. ಇನ್ನು 3-4 ವರ್ಷಗಳೊಳಗೆ ಆಹಾರ ಸ್ವಪರಿಪೂರ್ಣತೆಯನ್ನು ನಾವು ಹೊಂದಬಹುದು ಎಂದು ಮಂತ್ರಿಗಳು ಹೇಳುತ್ತಿದ್ದಾರೆ. 2 ವರ್ಷಗಳ ಹಿಂದೆ ಆಹಾರಾಭಾವ ಸ್ಥಿತಿ ಬಂದಾಗ ಕೇವಲ ಪಂಪುಸೆಟ್ಟುಗಳನ್ನು ಒದಗಿಸುದರಲ್ಲಿಯೇ ಶ್ರೀಮಾನ್ ಹೆಗ್ಗಡೆಯವರು ಕೇವಲ ಒಂದು ವರ್ಷದಲ್ಲಿಯೇ ಆಹಾರ ಸ್ವಪರಿಪೂರ್ಣತೆಯನ್ನು ನಾವು ಹೊಂದಬಹುದು ಎಂದು ಹೇಳಿದರು. ದೊಡ್ಡ ದೊಡ್ಡ ಮಾತುಗಳನ್ನು ಹೇಳುವುದರಲ್ಲಿ ಇವರನ್ನು ಮೀರಿಸುವವರು ಯಾರು ಇಲ್ಲವೆಂದು ನನಗೆ ಕಾಣುತ್ತದೆ. ಆದರೆ ಹೇಳಿದಮಾತನ್ನು ಮಾತ್ರ ಕಾರ್ಯಗತ ಮಾಡುವ ಸಾಮರ್ಥ್ಯವೂ ಇಲ್ಲ. ಮಾತನಾಡುವ ಮುನ್ನ ಆಲೋಚಿಸಿ ಹೇಳುವ ಅಭ್ಯಾಸವೂ ಇಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಸದಸ್ಯರು ಹೇಳಿದಮಾತು ಸರಿಯಲ್ಲ. ಕೇವಲ ಒಂದು ವರ್ಷದಲ್ಲಿ ಆಹಾರದಲ್ಲಿ ಸ್ವಪರಿಪೂರ್ಣತೆಯನ್ನು ಮಾಡುತ್ತೇವೆಂದು ನಾವು ಹೇಳಲಿಲ್ಲ. ಸ್ವಪರಿಪೂರ್ಣತೆಯನ್ನು ಹೊಂದಲು ಬಹಳ ಕಡಿಮೆ ಕಾಲದಲ್ಲಿ ಅಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಅದಕ್ಕೋಸ್ಕರ ಒಂದು ವರ್ಷದಲ್ಲಿಯೇ ಅದನ್ನು ಮಾಡಿ ಸಾಧಿಸುತ್ತೇವೆಂದು ಹೇಳಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ತೆಗೆದುಕೊಂಡುಬನ್ನಿ ನೋಡೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ತುಂಗಭದ್ರಾ ನೀರಿನ ವಿಷಯವಿರಲಿ. ಕೃಷ್ಣಾನದಿಯ ನೀರಿನ ಹಂಚಿಕೆಯವಿಷಯವೂ ಇರಲಿ. ಅವುಗಳ ಬಗ್ಗೆ ಅನೇಕರು ಮಾತನಾಡಿದ್ದಾರೆ.

ಇವರು ಈಗ ಕಟ್ಟಲಿರುವ ಹಾರಂಗಿ ಮತ್ತು ಕಂಬದಕಡ ಪ್ರಾಜೆಕ್ಟುಗಳ ವಿಷಯವೇನಾಯಿತು? ಅವುಗಳಿಂದ ನಾವು ಪ್ರಯೋಜನ ಹೊಂದಬೇಕಾದರೆ ಇನ್ನೆಷ್ಟುಕಾಲ ಹಿಡಿಯುತ್ತದೋ ಗೊತ್ತಿಲ್ಲ. ಇವರು ಈಗ ಖಂಡಿತವಾಗಿ ಕಟ್ಟುವುದಿಲ್ಲ; ಈಗ ಸಾಕಾದಷ್ಟು ಹಣ ಇವರಿಗೆ ಇಲ್ಲವೆಂದು ನಾನು ಹೇಳುತ್ತೇನೆ. ಅದು ಬರೀ ಕನಸಿನಂತಿದೆಯೆಂದು ಈಗ ಹೇಳಬಹುದು. ಇನ್ನು ಕೈಗಾರಿಕೆಯ ಅಭಿವೃದ್ಧಿಯಲ್ಲಿ ಇವರು ತೋರಿಸುತ್ತಿರುವ ನೀತಿಯ ಬಗ್ಗೆ ಕೆಲವು ಸ್ನೇಹಿತರು ಈಗಾಗಲೇ ಮಾತನಾಡಿ ಹೇಳಿದರು. ಮಂಡ್ಯ ಸಕ್ಕರೆ ಕಾರ್ಖಾನೆ ಈಗಾಗಲೇ ನಿಂತುಹೋಯಿತು. ಎಂ.ಎಸ್.ಕೆ. ಮಿಲ್ಸ್‌ನ್ನು 1 ಕೋಟಿ 30 ಲಕ್ಷ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡರು. ಮೊನ್ನೆತಾನೆ ಹೊಸ ಹೊಸ ಯಂತ್ರಗಳನ್ನು ಜೋಡಿಸಿ ಪ್ರಾರಂಭೋತ್ಸವ ಮಾಡಿದಾಗ ಮುಖ್ಯಮಂತ್ರಿಗಳು ಹೇಗಾದರೂ ಮಾಡಿ ನಡೆಸುತ್ತೇವೆ, ನಿಲ್ಲಿಸುವುದಿಲ್ಲ, ಎಂದು ಹೇಳಿದರು. ಕೇವಲ ಅತ್ಯಲ್ಪಕಾಲದಲ್ಲಿಯೇ ಅದು ನಿಂತು ಹೋಯಿತು. ಈಗ ಮಂಡ್ಯಾ ಸಕ್ಕರೆ ಕಾರ್ಖಾನೆಯನ್ನು ಮತ್ತು ಎಂ.ಎಸ್.ಕೆ. ಮಿಲ್ಲು ಇವೆರಡನ್ನೂ ಲಿಕ್ವಿಡೇಟ್ ಮಾಡಿಸಿ ಯಾರೋ ತಮಗೆ ಬೇಕಾದವರಿಗೆ ಅವನ್ನು ಕೊಡಿಸುವ ಏರ್ಪಾಡು ಇವರ ಮನಸ್ಸಿನಲ್ಲಿದೆ ಎಂಬುದು ಗೊತ್ತಾಗುತ್ತಿದೆ. ಕೈಗಾರಿಕಾ ನೀತಿಯಲ್ಲಿ ಒಂದು ಹೊಸ ಪದ್ಧತಿ ಜಾರಿಗೆ ಬರುತ್ತಿದೆ. ಕೈಗಾರಿಕೆಗಳನ್ನು ಪ್ರಾರಂಭಮಾಡುವುದು ಪ್ರಾರಂಭವಾಗುವ ಮರುಕ್ಷಣದಲ್ಲಿಯೇ ಅದನ್ನು ಬೇರೆ ತಮಗೆ ಬೇಕಾದವರಿಗೆ ಮಾರಿಬಿಡುವುದು. ಇಂತಹ ನಾಲ್ಕಾರು ನಿದರ್ಶನಗಳನ್ನು ನಾನು ಕೊಡಬಲ್ಲೆ. ಇದರಿಂದ ಮುಂದೆ ನಮ್ಮ ಮಕ್ಕಳು, ಮೊಮ್ಮಕ್ಕಳು ಇವರು ಮಾಡಿದ ಅನುಪಯುಕ್ತವಾದ ಸಾಲವನ್ನು ತೀರಿಸುವ ಪರಿಸ್ಥಿತಿ ಬರುತ್ತದೆ. ನಮ್ಮ ದೇಶದ ಅನೇಕ ಕಾರ್ಖಾನೆಗಳನ್ನು ಹಾಗೂ ಕೈಗಾರಿಕೆಗಳನ್ನೂ ತಮಗೆ ಬೇಕಾದವರಿಗೆ ಕೊಂಡುಕೊಳ್ಳುವಂತೆ ಹುರಿದುಂಬಿಸಿ ಕೆಲವು ಕೈಗಾರಿಕೆಗಳನ್ನು ಅಧೋಗತಿಗೆ ತರುತ್ತಿದ್ದಾರೆ. ಅದಕ್ಕೋಸ್ಕರ ಇವರನ್ನು ಯಾವ ರೀತಿ ಶಿಕ್ಷೆ ಮಾಡಿದರೂ ಬಹಳ ಕಡಮೆಯೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಕೈಗಾರಿಕೆಗಳನ್ನು ನಡೆಸುವುದರಲ್ಲಿ ಇಂತಹ ಮನೋಭಾವ ಇವರಲ್ಲಿದ್ದರೆ ನಿಜವಾಗಿ ಸಮಾಜ ವಾದದ ತತ್ವವನ್ನು ಇವರು ಯಾವರೀತಿ ಜಾರಿಗೆ ತರುತ್ತಾರೋ ಗೊತ್ತಿಲ್ಲ. ಸರ್ಕಾರಿ ಕ್ಷೇತ್ರದಲ್ಲಿರುವ ಕಾರ್ಖಾನೆಗಳನ್ನು ಖಾಸಗೀಯವರಿಗೆ ಕೊಟ್ಟು ಇಂಥ ಸಮಾಜವಾದವನ್ನು ಇವರು ಸೃಷ್ಟಿಮಾಡುತ್ತಿದ್ದಾರೆ, ಸರ್ಕಾರಿ ಕಾಲೇಜುಗಳನ್ನೂ ಹೈಸ್ಕೂಲುಗಳನ್ನೂ ಖಾಸಗೀಯವರಿಗೆ ಕೊಟ್ಟುಬಿಡುವುದಾಗಿ ಹಿಂದೊಮ್ಮೆ ವಿದ್ಯಾಮಂತ್ರಿಗಳಾಗಿದ್ದ ಶ್ರೀಮಾನ್ ಕಂಠಿಯವರು ಹೇಳಿದ್ದರು. ಇನ್ನು ಕೊಂಚದಿನಗಳಾದಮೇಲೆ ವಿಧಾನಸೌಧವನ್ನೇ ಬೇರೆಯವರಿಗೆ ಕೊಟ್ಟುಬಿಡುತ್ತಾರೋ ಏನೋ ಎಂಬ ಸಂದೇಹಬಂದಿದೆ. ನಮಗೆ ಬಂಡವಾಳ ಇದೆ. ಬೇಕಾದಷ್ಟು ಸಾಲವನ್ನು ಮಾಡಬಹುದು ಎಂಬುದಾಗಿ ಇವರು ಹೇಳುವುದು ಸರಿಯಲ್ಲ. ಸಾಲಮಾಡುವುದು ಇರತಕ್ಕ ಅಸೆಟ್ಸ್‌ನ್ನು ಬಿಲ್ಡಪ್ ಮಾಡುವುದಕ್ಕೆ ಇವರು ಆರೀತಿ ಮಾಡದೆ ಸಾಲಮಾಡುವುದೂ ಅಲ್ಲದೆ ಅಸೆಟ್ಸನ್ನು ಖಾಸಗೀ ಕ್ಷೇತ್ರದವರಿಗೆ ಕೊಡುವುದೇ ಆಗಿದೆ. ಇವರ ಈಗಿನ ಕೈಗಾರಿಕೆ ನೀತಿಯಿಂದ ಆಡಳಿತದ ವೈಖರಿ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡಬಹುದು. ಹೀಗಿರುವುದರಿಂದ ನಿಜವಾಗಿ ಈ ದೇಶದ ಜನಗಳಿಗೆ ಸುಖವಾಗುತ್ತದೆಯೇ?

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ್).—ಶ್ರೀ ಕಂಠಿಯವರೂ ಮತ್ತು ಅರಣ್ಯ ಸಚಿವರು ಇತ್ತೀಚೆಗೆ ಆ ರೀತಿ ಖಾಸಗೀ ಕ್ಷೇತ್ರಗಳಿಗೆ ಅವನ್ನು ಕೊಡುವುದು ಬೇಡ ಎಂದು ನಿಲ್ಲಿಸಿದ್ದಾರೆ.

ಶ್ರೀ ಎಸ್. ಆರ್. ಕಂಠಿ (ನ್ಯಾಯ ಶಾಖೆಯ ಮಂತ್ರಿಗಳು).—ಆ ರೀತಿ ಕಾಂಟ್ರೊವರ್ಸಿ ತರುವುದು ಬೇಡ. ನಮ್ಮ ರಾಜ್ಯದಲ್ಲಿ 165 ಕಾಲೇಜುಗಳಿವೆ. ಅವುಗಳ ಪೈಕಿ 15 ಮಾತ್ರ ಸರ್ಕಾರಿ ಕಾಲೇಜುಗಳು. ನಮ್ಮ ಪಕ್ಕದ ರಾಜ್ಯದಲ್ಲೊಂದರಲ್ಲಿ ಸುಮಾರು 1400 ಹೈಸ್ಕೂಲುಗಳ ಪೈಕಿ 200 ಕಿಂತ ಕಡಮೆ ಸರ್ಕಾರಿ ಹೈಸ್ಕೂಲುಗಳಿವೆ. ಆ ರೀತಿ ಕೊಡುತ್ತೇವೆಂದು ಹೇಳಿದರೆ ಯಾರೂ ತೆಗೆದುಕೊಳ್ಳುವುದಿಲ್ಲ. ನೀವು ಶೇಖಡ 10 ರಷ್ಟು ಆಗಬೇಕು ಎಂದು ಇಟ್ಟುಕೊಂಡರೆ ಹಾಗೆಯೇ ಇಟ್ಟುಕೊಳ್ಳಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಪರಿಸ್ಥಿತಿಯಲ್ಲಿ ಆಡಳಿತ ನಡೆಯುತ್ತಿರುವಾಗ ಇವರು ಈಗ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಯಾವರೀತಿ ಹಕ್ಕು ಇದೆ? ನಿಜವಾಗಿ ಈಗ ಅವರಿಗೆ ಬೇಕಾದ ಜನರ ಬೆಂಬಲ ಇದೆಯೇ ಎನ್ನುವುದನ್ನು ನಾವು ಯೋಚನೆಮಾಡಬೇಕಾಗಿದೆ. 1957ನೇ ಇಸವಿಯಲ್ಲಿ ಜನರ ಬೆಂಬಲ ಸಿಕ್ಕಿದ ರೀತಿಯಲ್ಲಿ ಕಾಂಗ್ರೆಸ್ ಸಂಸ್ಥೆಗೆ ಈಗ ಸಿಗುತ್ತದೆಂದು ಹೇಳುವುದು ಬಹಳ ಕಷ್ಟ. ಇವರಿಗೆ ಆ ರೀತಿ ಭಾವನೆ ಇದ್ದರೆ ಅದು ಮುಂದೆ ಹೆಚ್ಚು ಅಪಾಯವಾಗುತ್ತದೆಂದು ನನಗೆ ಕಾಣುತ್ತದೆ. ಶ್ರೀ ನಿಜಲಿಂಗಪ್ಪನವರು ಇತ್ತೀಚೆಗೆ ಈ ಅಧಿಕಾರವನ್ನೇ ಬಿಟ್ಟು ಜೋಗಿ ಮಠಕ್ಕೆ ಹೋಗುತ್ತೇನೆಂದು ಹೇಳುತ್ತಿದ್ದಾರೆ. ಅವರಿಗೆ ಇದನ್ನು ತಪ್ಪಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಮಂತ್ರಿಗಳ ಮೇಲೆ ಈಗ ಇರತಕ್ಕ ಆರೋಪಣೆಗಳನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ಖಂಡಿತವಾಗಿ ಜೋಗಿಮಠಕ್ಕೆ ಹೋಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

(ಶ್ರೀ ಎಸ್. ಹುಚ್ಚಮಾಸ್ತಿಗೌಡ)

ಅವರು ಅಧಿಕಾರದಿಂದ ಹೋಗುವುದರೊಳಗಾಗಿ ಒಂದು ವಿಚಾರಣೆ ನಡೆಯಬೇಕು. ಇವರನ್ನೂ ಇವರ ಸ್ನೇಹಿತರು ಕೆಲವರನ್ನೂ ಸಹ ಶಿಕ್ಷೆಗೆ ಗುರಿಮಾಡಿ ಸೆಂಟ್ರಲ್ ಜೈಲಿನಲ್ಲಿ ಇಡಬೇಕಾಗುತ್ತದೆ. ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಶ್ರೀಮಾನ್ ನಿಜಲಿಂಗಪ್ಪನವರು ರಾಜ್ಯಾಂಗ ಶಾಸನ ಸಭೆಯಲ್ಲಿದ್ದು, ಜಾತ್ಯಾತೀತ ರಾಷ್ಟ್ರವನ್ನು ಕಟ್ಟುತ್ತೇವೆಂದು ಹೊರಟವರು ಕೆಲವಾರು ಜಾತೀಯ ಸಂಸ್ಥೆಗಳಿಗೆ ಸುಮಾರು 22ಲಕ್ಷ ರೂಪಾಯಿಗಳನ್ನು ಡೊನೇಷನ್ಸ್ ರೂಪದಲ್ಲಿ ಕೊಡುತ್ತಿದ್ದಾರೆ ಮತ್ತು ಜಾತೀಯ ಸಂಸ್ಥೆಗಳಿಗೆ ತಮಗೆ ಇಷ್ಟಬಂದ ರೀತಿಯಲ್ಲಿ ಗ್ರಾಂಟುಗಳನ್ನು ಕೊಡುತ್ತಿದ್ದಾರೆ. ಆ ರೀತಿ ಏತಕ್ಕೆ ಕೊಡಬೇಕು ? ಯಾವುದೇ ಜಾತಿಯ ಹೆಸರುಗಳನ್ನು ಇಟ್ಟುಕೊಂಡಿರತಕ್ಕ ಸಂಸ್ಥೆಗಳಿಗೆ ಗ್ರಾಂಟು ಕೊಡುವುದಿಲ್ಲವೆಂಬುದಾಗಿ ದಿಟ್ಟತನದಿಂದ ಇವರು ಹೇಳಬೇಕು. ಜಾತ್ಯಾತೀತ ರಾಷ್ಟ್ರ ಕಟ್ಟಬೇಕು ಎಂದು ರಾಜ್ಯಾಂಗ ಶಾಸನ ಮಾಡಿದ ಧೀರರು ಈ ರೀತಿ ಮಾಡಬಹುದೇ? ಸರಿಯಾಗಿ ಕೆಲಸ ಮಾಡುವುದಕ್ಕೆ ಇವರಿಗೆ ಚೈತನ್ಯವಿಲ್ಲದಿದ್ದರೆ ಈ ಸ್ಥಾನದಲ್ಲಿ ಇವರು ಏಕೆ ಇರಬೇಕು ? ಇವರು ರಾಜ್ಯಾಂಗ ಶಾಸನಸಭೆಯಲ್ಲಿದ್ದು ಹಾಗೂ ಕೇಂದ್ರ ವರ್ಕಿಂಗ್ ಕಮಿಟಿಯಲ್ಲಿದ್ದು, ಈ ದೇಶದ ಮುಖ್ಯಮಂತ್ರಿಗಳಾಗಿ ಒಳ್ಳೆಯ ಹೆಸರನ್ನು ಪಡೆಯದೆ ಇವರ ಆಡಳಿತ ಕಾಲದಲ್ಲಿ ಸಾವಿರಾರು ಜನ ಹೊಟ್ಟೆಗಿಲ್ಲದೆ ಸತ್ತರು ; ಜಾತೀಯ ಆಡಳಿತವನ್ನು ಸ್ಥಾಪಿಸಿದರು ಎಂಬ ಶಾಶ್ವತವಾದ ಹೆಸರನ್ನು ಗಳಿಸಿಕೊಂಡು ಹೋಗಬೇಕಾಗುತ್ತದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕೆಂದು ನಾನು ಈ ಸಭೆಯಲ್ಲಿ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಏನಾದರೂ ಆಗಲಿ ಕಾಂಗ್ರೆಸ್ ಪಕ್ಷದವರು ತಮ್ಮಲ್ಲಿ ಏನೇ ಭಿನ್ನಾಭಿಪ್ರಾಯವಿರಲಿ, ಈಗಿನ ರೀತಿಯಲ್ಲಿ ನಡೆಯುತ್ತಿರುವುದು ಖಂಡಿತ ಸರಿಯಲ್ಲ. ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿ, ಈ ದೇಶದಲ್ಲಿ ಅತ್ಯಂತ ಉತ್ತಮವಾದ ಸಮಾಜವಾದಿ ಸಮಾಜ ರಚನೆಯನ್ನು ಸ್ಥಾಪನೆ ಮಾಡುತ್ತೇವೆಂದು ಹೊರಟಿರುವ ಕಾಂಗ್ರೆಸ್ ಪಕ್ಷದ ಸ್ನೇಹಿತರನೇಕರು ಈ ಸಂದರ್ಭದಲ್ಲಿ ಕೈಕಟ್ಟಿ ಕುಳಿತುಕೊಳ್ಳಕೂಡದು. ಸತ್ಯಸಂಧತೆಯಿಂದ ಕೂಡಿದ್ದೇವೆಂದು ಹೇಳುವವರು ನೀವು ಇದನ್ನು ಕೂಡಲೇ ಎದರಿಸಬೇಕು. ಆ ಧೈರ್ಯ ನಿಮಗಿಲ್ಲದ ಪಕ್ಷದಲ್ಲಿ ರಾಜೀನಾಮೆಕೊಟ್ಟು ಅಧಿಕಾರ ಬಿಟ್ಟು ಬನ್ನಿ ಎಂದು ನಮ್ರತೆಯಿಂದ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ (ಮಧುಗಿರಿ).—ಸನ್ಮಾನ್ಯ ಸಭಾಧ್ಯಕ್ಷರೇ, 1967-68ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಾನ್ಯ ಅರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಹಾಗೆಯೇ ಮಾನ್ಯ ಅರ್ಥಿಕ ಮಂತ್ರಿಗಳು ಅವರ ಭಾಷಣದಲ್ಲಿ ಭೂಕಂದಾಯವನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರದವರು ನಿರ್ಧಾರವನ್ನು ಕೈಗೊಂಡಿರುವುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಆರ್ಥಿಕ ಮಂತ್ರಿಗಳು ಹೇಳಿರುವುದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಅವರು ಅದನ್ನು ಅದಲುಬದಲು ಮಾಡದೆ ಬೇರೆ ರೀತಿಯ ಇನ್‌ಕಂಟ್ಯಾಕ್ಸ್ ವಗೈರೆ ಯಾವುದನ್ನೂ ಹಾಕದೆ ರೈತರನ್ನು ಕಂದಾಯದಿಂದ ವಿಮುಕ್ತರನ್ನಾಗಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈಗ ರೈತರಿಗೆ ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಹಾಕಿದರೆ ಅದರಿಂದ ರೈತರಿಗೆ ಕಿರುಕುಳಗಳಾಗುತ್ತವೆ. ಆದ್ದರಿಂದ ದಯವಿಟ್ಟು ಅದರಿಂದ ರೈತರನ್ನು ವಿಮುಕ್ತರನ್ನಾಗಿ ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ತುಮಕೂರು ಡಿಸ್ಟ್ರಿಕ್ಟಿನ ಮಧುಗಿರಿ, ಶಿರಾ ಪಾವಗಡ ಮುಂತಾದ ಪ್ರದೇಶಗಳಲ್ಲಿ ನೀರಾವರಿ ಅನುಕೂಲತೆಗಳು ಏನೂ ಇಲ್ಲ. ಅದೂ ಅಲ್ಲದೆ ಈ ಪ್ರದೇಶಗಳಲ್ಲಿ ಬಹುಭಾಗ ಆಂಧ್ರಕ್ಕೂ ಮೈಸೂರು ದೇಶಕ್ಕೂ ಅಗ್ರಿಮೆಂಟ್ ಜೋನ್ ಆಗಿರುವುದರಿಂದ ಅಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹಿಂದೆ ಕೆ. ವಿ. ರಾವ್ ಎಂಬುವರು ಚೀಫ್ ಇಂಜಿನಿಯರ್ ಆಗಿದ್ದಾಗ ಅಲ್ಲಿ ಪಿಕ್‌ಅಪ್ ಅನ್ನು ಕಟ್ಟಬಹುದು ಅದು ಅಗ್ರಿಮೆಂಟ್ ಜೋನಾಗಿ ಬರುವುದಿಲ್ಲ ಎಂದು ಸಲಹೆ ಮಾಡಿದ್ದಾರೆ. ಆದ್ದರಿಂದ ಅದನ್ನು ಸರ್ಕಾರದವರು ದಯವಿಟ್ಟು ಕಾರ್ಯರೂಪಕ್ಕೆ ತರಲಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಈಗ ಆ ನಾಲ್ಕು ತಾಲ್ಲೂಕಿನ ಜನ ಪ್ರಕೃತಿಯ ಮೇಲೆ ಜೂಜಾಡುತ್ತಿದ್ದಾರೆ. ಅಲ್ಲಿ ಬೇರೆ ಯಾವುದೂ ನೀರಾವರಿ ಅನುಕೂಲತೆಗಳು ಇಲ್ಲದೆ ಇರುವುದರಿಂದ ಅವರು ಬರೀ ಮಳೆಯನ್ನೇ ನೆಚ್ಚಿಕೊಂಡಿದ್ದಾರೆ. ಈಗ ದಯವಿಟ್ಟು ಸರ್ಕಾರದವರು ಫಸಲಿನ ಮೇಲೆ ಇನ್‌ಷೂರೆನ್ಸ್ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಇದರಿಂದ ರೈತನ ಒಂದು ಆರ್ಥಿಕ ಅಭಿವೃದ್ಧಿ ಖಂಡಿತಾ ಜಾಸ್ತಿಯಾಗುತ್ತದೆ. ಈಗ ಸರ್ಕಾರದವರು ಬಾವಿ ಸಾಲ ಮತ್ತು ಸಮಪಾತಾಳ ಬದುಗಳನ್ನು ಹಾಕಿರುವುದು ಬಹಳ ಅನುಕೂಲವಾಗಿದೆ. ಬಾವಿ ಸಾಲವನ್ನು

ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮುಖಾಂತರ ಕೊಡುತ್ತಾರೆ. ಎಲ್ಲಾ ಕೇಂದ್ರಗಳಲ್ಲಿಯೂ ಅರ್ಜಿಗಳನ್ನು ಕರೆಸಿದೆ. ಆದರೆ ರೈತರಿಗೆ ಅದರಿಂದ ಸಾಲವನ್ನು ಒದಗಿಸುತ್ತಿಲ್ಲ. ಆದ್ದರಿಂದ ದಯವಿಟ್ಟು ಸರ್ಕಾರದವರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕನ್ನು ವಿಕೇಂದ್ರೀಕರಣ ಮಾಡಿ. ಇಲ್ಲದಿದ್ದರೆ ರೆವಿನ್ಯೂ ಅಧಿಕಾರಿಗಳಾಗಲೀ, ಡಿಸ್ಟ್ರಿಕ್ಟ್ ಬ್ಯಾಂಕುಗಳಾಗಲೀ, ಅದೂ ತಪ್ಪಿದಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಪ್ರೈಮರಿ ಬ್ಯಾಂಕಿನಿಂದಾಗಲೀ ಬಾವಿಗಳಿಗೆ ಸಾಲವನ್ನು ಕೊಡಲು ಆದಷ್ಟು ಜಾಸ್ತಿ ಅವಕಾಶ ಮಾಡಿಕೊಡಬೇಕು. ಜಾಗ್ರತೆಯಾಗಿ ರೈತರಿಗೆ ಸಾಲ ಸಿಕ್ಕುವಂತೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದಲ್ಲಿ ಉದ್ಯೋಗಸ್ಥರು ಮಾತ್ರ ಜಾಸ್ತಿಯಾಗುತ್ತಿದ್ದಾರೆ. ರೈತನಿಗೆ ಅದರಿಂದ ಅನುಕೂಲವಾಗುವುದಿಲ್ಲ ಎಂದು ನನ್ನ ಭಾವನೆ. ಹಿಂದೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಎಲ್ಲರೂ ತಾಯ್ ಚುಂಗ್ ಬತ್ತವನ್ನು ಬೆಳೆಯಿರಿ ಅನುಕೂಲವಾಗುತ್ತದೆ. ಯಾವಾಗ ಬೇಕಾದರೂ ಅದನ್ನು ಹಾಕಿ ಎಂದು ಸರ್ಕಾರದವರು ಪ್ರಚಾರ ಮಾಡಿದರು. ಆದರೆ ಅದನ್ನು ಹಾಕಿದವರಿಗೆ ಫಸಲು ಆಗಲಿಲ್ಲ. ಇದೇ ರೀತಿ ನಮ್ಮ ಕ್ಷೇತ್ರದಲ್ಲಿ ಸಿದ್ದೇಗುಂಟೆ ಎಂಬಲ್ಲಿ 300 ಎಕರೆ ಜಮೀನು ಇದೆ. ಅಲ್ಲಿ ಇಡೀ ಗ್ರಾಮಸ್ಥರೆಲ್ಲಾ ತಾಯ್‌ಚುಂಗ್ ಬೆಳೆ ಮಾಡಿದರು. ಒಟ್ಟಿಟ್ಟು ಇರುವ ಆ ಹಳ್ಳಿಯಲ್ಲಿ 3 ತಿಂಗಳು ನೀರು ಬಂದರೂ ಅರ್ಧ ಫಸಲು ಮಾತ್ರ ಆಯಿತು. ಇನ್ನು ಕೆಲವು ಕಡೆ 3 ತಿಂಗಳಿಗೆ ಬೆಳೆ ಆಗುತ್ತದೆ ಎಂದು ಬತ್ತದ ಪೈರು ನಾಟಿ ಹಾಕಿದರು. 4 ತಿಂಗಳಾದರೂ ಬೆಳೆ ಬರಲಿಲ್ಲ. ಕೊನೆಗೆ 5 ತಿಂಗಳಾದರೂ ಇಲ್ಲದೆ ಫಸಲು ಒಣಗಿಹೋಯಿತು. ಆದ್ದರಿಂದ ಅಧಿಕಾರಿಗಳು ಸಲಹೆ ಕೊಡುವಾಗ ಸರಿಯಾದ ರೀತಿಯಲ್ಲಿ ಸಲಹೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಬಿ. ಡಿ. ಓ. ಗಳನ್ನು ತೆಗೆಯುವುದು ಉತ್ತಮ. ಏನು ಒಂದು ಕಾರ್ಯವನ್ನು ವಿಸ್ತರಣಾ ಯೋಜನೆಯಿಂದ ಯಶಸ್ವಿಯಾಗುತ್ತದೆ ಎಂದು ನಂಬಿದ್ದೆವೋ ಅದು ಖಂಡಿತ ಯಶಸ್ವಿ ಆಗಿಲ್ಲ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ಈಗ ಇರುವ ಬಿ. ಡಿ. ಓ. ಗಳನ್ನು ತೆಗೆದು ಆ ಸ್ಥಳದಲ್ಲಿ ತಹಶೀಲ್ದಾರರನ್ನು ನೇಮಿಸುವುದು ಬಹಳ ಉತ್ತಮ.

ಇನ್ನು ನಮ್ಮ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿವೆ. ಆ ಪ್ರಾಥಮಿಕ ಶಾಲೆಗಳಿಗೆ ಈಗ ನಮ್ಮ ಸ್ನೇಹಿತರಾದ ಡಿ. ಎಸ್. ಗೌಡರು ಹೇಳಿದ ಹಾಗೆ ಅನೇಕ ಕಡೆ ಕಟ್ಟಡಗಳಿಲ್ಲ. ಈಗ ಇರುವ ಅಲ್ಪ ಸ್ವಲ್ಪ ಕಟ್ಟಡಗಳ ರಿಪೇರಿಯನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿದ್ದಾರೆ. ಅವರಲ್ಲಿ ಹಣವಿಲ್ಲ. ಇದರಿಂದಾಗಿ ಅನೇಕ ಕಡೆ ಅನೇಕ ಕಟ್ಟಡಗಳು ಬಿದ್ದುಹೋಗುವ ಸ್ಥಿತಿಯಲ್ಲಿವೆ. ಆದ್ದರಿಂದ ದಯವಿಟ್ಟು ಪ್ರಾಥಮಿಕ ಶಾಲೆಗಳನ್ನು ಮತ್ತು ಆ ಕಟ್ಟಡಗಳ ರಿಪೇರಿ ವಗೈರೆಗಳನ್ನು ಸರ್ಕಾರದವರೇ ವಹಿಸಿಕೊಳ್ಳುವುದು ಉತ್ತಮ. ಅದೂ ಅಲ್ಲದೆ ಸರ್ಕಾರದಿಂದ ಧನಸಹಾಯವನ್ನು ಪಡೆಯುವ ಅನೇಕ ಶಾಲೆಗಳು ವ್ಯಾಪಾರ ಕೇಂದ್ರಗಳಾಗಿವೆ ಎನ್ನುವುದು ಅನೇಕರಿಗೆ ಗೊತ್ತಿದೆ. ಅದನ್ನು ತಪ್ಪಿಸಲು ಸರ್ಕಾರದವರು ಏರ್ಪಾಡು ಮಾಡಬೇಕು. ಅದೂ ಅಲ್ಲದೆ ಹಾಸ್ಟಲುಗಳು ಅನೇಕ ಜಾತಿಯ ಆಧಾರದ ಮೇಲೆ ನಡೆಯುತ್ತಾ ಇವೆ. ನೆಪಕ್ಕೆ ಒಬ್ಬಿಬ್ಬರನ್ನು ಸೇರಿಸಿಕೊಂಡು ಸಾರ್ವಜನಿಕರ ಹಾಸ್ಟಲುಗಳು ಎಂದು ಬೋರ್ಡು ಮಾತ್ರ ತಗುಲಿ ಹಾಕಿಕೊಂಡಿರುತ್ತಾರೆ. ಸರ್ಕಾರದವರು ಇದನ್ನು ಕಂಡು ಹಿಡಿದು ಇಂಥಾ ಜಾತೀಯ ಸಂಸ್ಥೆಗಳಿಗೆ ಹಣವನ್ನು ಕೊಡಬಾರದು ಎಂದು ನಾನು ಅವರನ್ನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡುವಾಗ ಮತ್ತು ಸರ್ಕಾರದಿಂದ ಧನಸಹಾಯವನ್ನು ಕೊಡುವಾಗ ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದವರಿಗೆ ಕೊಡಬೇಕೆಂದು ಸರ್ಕಾರದವರು ಒಂದು ಹುಕುಂ ಮಾಡಿದ್ದಾರೆ. ಅದಕ್ಕೆ ತಹಶೀಲ್ದಾರರು ಸರ್ವಾಧಿಕಾರಿಗಳಾಗಿದ್ದಾರೆ. ಅವರ ಸರ್ಟಿಫಿಕೇಟಿನಿಂದ ಹಿಂದುಳಿದವರು, ಮುಂದುವರಿದವರು ಎಂದು ತೀರ್ಮಾನಕ್ಕೆ ಬರುತ್ತಾರೆ. ಅನೇಕ ಸಂದರ್ಭಗಳಲ್ಲಿ ಬಹಳ ಅನ್ಯಾಯ ಆಗುತ್ತಾ ಇದೆ. ಬೇರೆ ಯಾವುದಾದರೂ ಒಂದು ರೀತಿ ಕಂಡು ಹಿಡಿದು ಅದನ್ನು ತಪ್ಪಿಸಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ವೈದ್ಯಕೀಯ ವಿಷಯವನ್ನು ಹೇಳುವುದಾದರೆ, ವೈದ್ಯಕೀಯ ಸ್ಥಿತಿ ತುಂಬಾ ಕಳವಳವಾಗಿದೆ ಎಂದು ಹೇಳಿದರೆ ತಪ್ಪು ಇಲ್ಲ. ನನ್ನ ಕ್ಷೇತ್ರದಲ್ಲಿ 6 ಆಸ್ಪತ್ರೆಗಳಿವೆ. ಹಲವಾರು ತಿಂಗಳುಗಳಿಂದ 3 ಕಡೆ ಡಾಕ್ಟರುಗಳಿಲ್ಲ. ಡಾಕ್ಟರುಗಳಿದ್ದರೆ ಔಷಧಿ ಇಲ್ಲ. ಹೀಗಾಗಿದೆ. ದಯವಿಟ್ಟು ಹಳ್ಳಿಗಳ ಕಡೆ ಸ್ವಲ್ಪ ಜಾಸ್ತಿ ಔಷಧೋಪಚಾರಕ್ಕೆ ಹಣ ಒದಗಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಆಹಾರದ ಹಂಚಿಕೆ, ಇದು ಪಟ್ಟಣಗಳಲ್ಲಿ ಸರಿಯಾಗಿ ಹಂಚಿಕೆಯಾಗುತ್ತಿದೆಯೇನೋ ಗೊತ್ತಿಲ್ಲ. ಆದರೆ ಹಳ್ಳಿಗಳಲ್ಲಿ ಆಹಾರವನ್ನು ಹಂಚುವುದು ಬಹಳ ವಿಚಿತ್ರವಾಗಿದೆ. ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ, ಚಿನ್ನಕೊಪ್ಪ ಎಂಬ ಊರಿನಲ್ಲಿ ಸುಮಾರು 2,000 ಜನಸಂಖ್ಯೆ ಇದೆ. ಅಲ್ಲಿ

(ಶ್ರೀ ಜಿ. ಟಿ. ಗೋವಿಂದರೆಡ್ಡಿ)

ಒಂದು ಸೊಸೈಟಿ ಇದೆ. ಅದರಲ್ಲಿ ಗ್ರಾಮಪಂಚಾಯಿತಿಗಳವರು ಆಹಾರ ದಿನಸಿಯನ್ನು ಹಂಚಿಕೆ ಮಾಡುತ್ತಿದ್ದಾರೆ. 3 ಜನಗಳು ಫೇರ್ ಪ್ರೈಜ್ ಡಿಪೋಗಳನ್ನು ಇಟ್ಟಿದ್ದಾರೆ. ಇದೇ ರೀತಿಯಲ್ಲಿ ಎಲಕೂರು ಎಂಬಲ್ಲಿ 5,000 ಜನಸಂಖ್ಯೆ ಇದೆ. ಒಂದು ಸೊಸೈಟಿ ಕೆಲಸ ಮಾಡುತ್ತಿದೆ. 2 ಸಾವಿರ ಜನಸಂಖ್ಯೆ ಇರುವ 5 ಡಿಪೋಗಳಿಗೆ ಒಂದೊಂದಕ್ಕೆ 5 ಮೂಟೆ ಆಹಾರ ಧಾನ್ಯವನ್ನು ಕೊಡುತ್ತಾರೆ. ಆದರೆ ಆ ಆಹಾರ ಧಾನ್ಯ ಸರಿಯಾಗಿ ವಿಲೇವಾರಿ ಆಗುವುದಿಲ್ಲ. ನ್ಯಾಯವಾಗಿ ಎಲ್ಲರಿಗೂ ಸಾಮಾನ್ಯ ವಾಗಿ ಸಿಕ್ಕುವಂತೆ ಏರ್ಪಾಡು ಮಾಡಬೇಕು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡು ವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಸನ್ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದ ಆರ್ಥಿಕ ಮಂತ್ರಿ ಗಳು ಮಂಡಿಸಿರತಕ್ಕ 1967-68ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನಾನು ಸರ್ಕಾರದ ಆಡಳಿತದಲ್ಲಿ ಎಷ್ಟರಮಟ್ಟಿಗೆ ಉಳಿತಾಯ ಮಾಡಿ ನಮ್ಮ ದೇಶದ ಆಗು ಹೋಗುಗಳಿಗೆ ಅದೇ ಹಣವನ್ನು ಖರ್ಚು ಮಾಡಿ ದೇಶದ ಅಭ್ಯುದಯವನ್ನು ಸಾಧಿಸಬಹುದು ಎಂಬುದನ್ನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ ಒಂದೇ ನಮೂನೆಯ ಕಾರ್ಯ ಕ್ರಮವನ್ನು ಹೊಂದಿರತಕ್ಕ ಅನೇಕ ಇಲಾಖೆಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡಲು ವಿಧವಿಧವಾದ ಪ್ರತ್ಯೇಕವಾದ ಏರ್ಪಾಡುಗಳನ್ನು ಹೊಂದಿ ಕಾರ್ಯಾಚರಣೆಯಲ್ಲಿ ಇರುವುದನ್ನು ನೋಡಿದರೆ ಇದರಲ್ಲಿ ಅಗತ್ಯವಾದ ಮಾರ್ಪಾಡು ಆಗಲೇಬೇಕು. ಈ ಮಾರ್ಪಾಡುಗಳಿಂದ ಲಕ್ಷಾಂತರ ರೂಪಾಯಿ ಹಣ ಸರ್ಕಾರಕ್ಕೆ ಉಳಿದು ಅದು ಸದ್ವಿನಿಯೋಗ ಆಗುವುದಕ್ಕೆ ಅವಕಾಶವಾಗುತ್ತದೆ. ಎಂದು ನಾನು ನಂಬಿ ದ್ದೇನೆ. ಇಂಥಾ ಸರ್ವೇ ಸಾಮಾನ್ಯವಾಗಿ ಒಂದೇ ವಿಧವಾದ ಕಾರ್ಯಾಚರಣೆಯನ್ನು ನಡೆಸಲು ಅಧಿಕಾರಿಗಳನ್ನು ಹೊಂದಿರತಕ್ಕ ಇಲಾಖೆಗಳನ್ನು ಸರ್ಕಾರದವರು ಪರಿಶೀಲಿಸಿ, ಒಂದು ಗೂಡಿಸಿ ಕಾರ್ಯಾಡಳಿತವನ್ನು ಉತ್ತಮ ಸ್ಥಿತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿ, ಇಂಥಾ ತುರ್ತು ಪರಿಸ್ಥಿತಿಯಲ್ಲಿ ಉಳಿತಾಯವನ್ನು ಸಾಧಿಸಬಹುದು ಎಂದು ನಾನು ಸವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಇದುವರೆಗೆ ಅಧಿಕಾರ ಕೇಂದ್ರೀ ಕೃತವಾಗುತ್ತಾ ಬಂದುದರಿಂದ ಜನತೆಯ ಹಿತ ಸಾಧನೆ ಮಾಡಲು ತೊಂದರೆಯಾಗಿದೆ. ಎಲ್ಲ ಅಧಿ ಕಾರವನ್ನೂ ಬೆಂಗಳೂರಿನಲ್ಲಿಟ್ಟುಕೊಂಡಿರುವುದರಿಂದ ಪ್ರತಿಯೊಂದು ಕೆಲಸಕ್ಕೆ ಬಡವರು ಬೆಂಗಳೂರಿಗೆ ಬರಬೇಕಾಗುವ ಮೂಲಕ ತೊಂದರೆಯಾಗುತ್ತದೆ. ತಾಲ್ಲೂಕು ಅಭಿವೃದ್ಧಿ ಸಮಿತಿಗೆ ಜಿಲ್ಲಾ ಬೋರ್ಡಿಗೆ, ಸ್ಥಳೀಯ ಸಂಸ್ಥೆಗಳಿಗೆ ನಿತ್ಯ ಬೇಕಾಗುವ ಕಾನೂನಿನ ಅಧಿಕಾರವನ್ನು ವಿಕೇಂದ್ರೀಕರಣ ಗೊಳಿಸಿ ಆಡಳಿತವು ಸುಲಭ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕು. ಇದಲ್ಲದೆ ಅಧಿಕಾರಿಗಳಲ್ಲಿ ಅಸಮಾಧಾನ ಅತೃಪ್ತಿ ನಾನಾ ರೀತಿಯಿಂದ ಉಂಟಾಗುವುದಕ್ಕೆ ಅವರ ಏರುಪೇರಾದ ಸಂಬಳ ಸಾರಿಗೆ ಏರ್ಪಾಡು ಕಾರಣವಾಗಿದೆ. ಮೈಸೂರು ರಾಜ್ಯದಲ್ಲಿ ಒಂದೇ ವಿಧವಾದ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಒಂದೊಂದು ರೀತಿಯ ಸಂಬಳ ಸಾರಿಗೆ ಕೊಡುವುದರಿಂದ ಸರಕಾರದ ಕೆಲಸ ವಿಳಂಬ ವಾಗಲು ಕಾರಣವಾಗಿದೆ ಎಂದು ನಾನು ಭಾವಿಸಿದ್ದೇನೆ. ಕಾರ್ಮಿಕ ವರ್ಗದವರಿಗೆ ಮತ್ತು ಸರಕಾರಿ ನೌಕರರಿಗೆ ಜೀವನ ನಡೆಸಲು ಅತ್ಯಗತ್ಯವಾಗಿ ಬೇಕಾದಂಥ ಪದಾರ್ಥಗಳನ್ನು ಕೊಂಡು ಕೊಳ್ಳುವುದಕ್ಕೆ ಹಣ ಒದಗಿಸಲು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮ್ಯಾಗ್ಸಿಮಂ ಮತ್ತು ಮಿನಿಮಂ ವೇಜಿಸ್, ಪೇ ಸ್ಕೇಲ್ಸ್ ಗೊತ್ತುಮಾಡಿ ಆಹಾರ ಪದಾರ್ಥಗಳ ಬೆಲೆ ಹತೋಟಿಯಲ್ಲಿ ಇಟ್ಟು ಕೊಳ್ಳಲು ಸಾಧ್ಯವಾಗುವಂತೆ ಮಾಡಬೇಕು. ನೌಕರರಲ್ಲಿ ತೃಪ್ತಿ ಮತ್ತು ಸಂತೋಷ ಉಂಟಾಗು ವಂತೆ ಸನ್ನಿವೇಶ ಒದಗಿಸಿ ಕೊಡಬೇಕೆಂದು ಸರ್ಕಾರಕ್ಕೆ ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ.

ಅರ್ಥ ಸಚಿವರು ಸೂಚಿಸಿರುವ ಹಾಗೆ ಮಧ್ಯಪಾನ ನಿರೋಧವನ್ನು ತೆಗೆದುಹಾಕುವುದರಿಂದ ಸರಕಾರದ ಆದಾಯ ಹೆಚ್ಚಿಸಿಕೊಳ್ಳಲು ಒಂದು ಉತ್ತಮ ಯೋಜನೆಯಾಗಿದೆ. ಇದನ್ನು ಜಾರಿಗೆ ತರಬೇಕು ಇದರಿಂದ ಸರ್ಕಾರಕ್ಕೆ ಹೇರಳವಾದ ಹಣ ಬರುತ್ತದೆ. ಕುಡಿಯುವ ಚಟ ಇದ್ದವರು ಕುಡಿಯುವುದನ್ನು ಬಿಡಲು ಆಗುವುದಿಲ್ಲ. ವಿರೋಧ ಪಕ್ಷದವರು ಹೇಳುವ ಹಾಗೆ ಸರ್ಕಾರದ ನೀತಿ ಯಿಂದ ಮಧ್ಯಪಾನ ನಿರೋಧ ಕಾನೂನು ವಿಫಲವಾಗಿಲ್ಲ. ಕುಡಿಯುವ ಚಟವಿದ್ದವರು ಕುಡಿಯು ವುದನ್ನು ಬಿಡಲು ಸಾಧ್ಯವಿಲ್ಲ. ರಾಜ್ಯದ ಉತ್ಪತ್ತಿ ಆದಾಯ ಹೆಚ್ಚಿಸುವುದಕ್ಕೆ ಅಗತ್ಯವಾದ ಸಾಧನ ಸಂಪತ್ತು ತಾನಾಗಿಯೇ ದೊರೆತಿರುವಾಗ ಅದನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಹಿಂಜರಿಯ ಬಾರದು. ಇದರಿಂದ ಬರತಕ್ಕಂಥ ಕೋಟ್ಯಾಂತರ ರೂಪಾಯಿ ಹಣವನ್ನು ಆಹಾರ ಉತ್ಪಾದನೆಗೆ

ಉಪಯೋಗಿಸಿಕೊಳ್ಳಬಹುದು, ಮೈನರ್ ಇರಿಗೇಷನ್ ಕಾಮಗಾರಿಗಳಿಗಾಗಿ ರೈತರಿಗೆ ಸಬ್‌ಸಿಡಿ ಕೊಡುವುದಕ್ಕೆ ಉಪಯೋಗಿಸಿಕೊಳ್ಳಬಹುದು. ದೇಶದಲ್ಲಿ ಸಮೃದ್ಧಿ ಶಾಂತಿ ಪರಿಪಾಲನೆ ಮಾಡಲು ಈ ಹಣ ಉಪಯೋಗಿಸುವುದಕ್ಕೆ ಸರ್ಕಾರ ಯೋಚಿಸಬಹುದು.

ಇನ್ನು ಭೂಕಂದಾಯ ರದ್ದು ಮಾಡುವುದು ಒಳ್ಳೆಯದು ಎಂದು ಅನೇಕರು ಹೇಳಿದ್ದಾರೆ. ಆದರೆ ದೊಡ್ಡ ದೊಡ್ಡ ಹಿಡುವಳಿದಾರರಿಗೆ ಇದರಿಂದ ವಿನಾಯಿತಿ ಕೊಡಬೇಕೆಂಬ ಉದ್ದೇಶ ಇದೆಯೆಂದು ಅನೇಕರು ಭಾವಿಸಿದ್ದಾರೆ. ಒಂದು ರೀತಿಯಿಂದ ರೈತ ಕಂದಾಯ ಕೊಡವುದು ಹೊರೆಯಾಗುವುದಿಲ್ಲ. ಆದರು ಕಂದಾಯ ರದ್ದುಮಾಡಿ ರೈತನ ಹಿತ ಸಾಧನೆ ಮಾಡವಬೇಕು ಎಂದು ಹೇಳುತ್ತಾರೆ. ಏನಾದರು ರೈತನ ಹಕ್ಕು ಬಾಧ್ಯತೆ ಕಿತ್ತುಕೊಂಡ ಹಾಗೆ ಮಾತ್ರ ಮಾಡಬಾರದು. ಸರ್ವೇ ಸೆಟಲ್‌ಮೆಂಟ್ ಪ್ರಕಾರ ಭೂಕಂದಾಯ ಪದ್ಧತಿ ಇರಬೇಕು. ಆದುದರಿಂದ ಭೂ-ಕಂದಾಯ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಭೂ-ಕಂದಾಯದ ಹಣವನ್ನು ಸಂಪೂರ್ಣವಾಗಿ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟು ಬಿಟ್ಟು ರೈತನ ಹಿತ ಸಾಧನೆಯಾಗುವಂತೆ ಮಾಡಬೇಕು. ಆದರೆ ಕೊಡತಕ್ಕ ಹಣ ರೈತನಿಗೆ ಸರಿಯಾಗಿ ಸೇರುತ್ತಿಲ್ಲ. ಇದಕ್ಕೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯಲ್ಲಿ ಸರ್ಕಾರಿ ಜಮೀನು ಇರುವ ಕಡೆ ಒತ್ತುವರಿ ಮಾಡಿರತಕ್ಕಂಥಾದ್ದನ್ನು ಕ್ಲಾಸಿಫಿಕೇಷನ್‌ಗೆ ಒಳಪಡಿಸಿ ಅದನ್ನು ಕ್ರಮಗೊಳಿಸಬೇಕು. ಇದರಿಂದ ಆಹಾರ ಉತ್ಪತ್ತಿ ಹೆಚ್ಚು ಮಾಡುವುದಕ್ಕೆ ಅವಕಾಶವಿದೆ. ಇತ್ತ ಕಡೆ ಸರ್ಕಾರ ಗಮನ ಹರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರೊಹಿಬಿಷನ್ ಜಾರಿಗೆ ತರುವುದರಲ್ಲಿ ಸರ್ಕಾರದ ಸದುದ್ದೇಶ ಇದೆ. ಜನರ ಆರೋಗ್ಯ ಭಾಗ್ಯ ಕೆಡದಂತೆ ನೋಡಿಕೊಳ್ಳಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಣಗಳಲ್ಲಿ ಕಡಿಯುವುದಕ್ಕೆ ಅನುಕೂಲವಾಗುವಂತೆ ಮಾಡುವುದಾದರೆ ಆರೋಗ್ಯದ ದೃಷ್ಟಿ ಮುಖ್ಯವಾಗಿ ನಮ್ಮ ಮುಂದೆ ಇರಬೇಕು. ಪಾನ ನಿರೋಧ ತೆಗೆದುಹಾಕುವುದರಿಂದ ಸಿಬ್ಬಂದಿಯ ವೆಚ್ಚ ಬಹಳ ಕಡಿಮೆಯಾಗುತ್ತದೆ. ಪ್ರೊಹಿಬಿಷನ್ ಸಲುವಾಗಿ ಇರತಕ್ಕ ಪೋಲೀಸ್ ಸಿಬ್ಬಂದಿಗೆ ಕೆಲಸವಿಲ್ಲದ ಹಾಗೆ ಆಗುತ್ತದೆ. ಆದರೆ ಅವರ ಸೇವೆಯನ್ನು ಬೇರೆ ಕೆಲಸಕ್ಕೆ ಉಪಯೋಗಿಸಿಕೊಂಡು ಸದ್ವಿನಿಯೋಗ ಮಾಡಿಕೊಳ್ಳಲು ಅವಕಾಶವಿದೆ.

ದೇಶದ ಹಿತ ದೃಷ್ಟಿಯಿಂದ ಅರ್ಥ ಸಚಿವರು ಬಜೆಟ್ ಮಂಡಿಸಿದ್ದಾರೆಂದು ಹೇಳುವುದರಲ್ಲಿ ಯಾವ ಅನುಮಾನವಿಲ್ಲ. ವಿರೋಧ ಪಕ್ಷದಲ್ಲಿ ಅನೇಕ ಸದಸ್ಯರು ಆಡಳಿತದಲ್ಲಿದ್ದು ಅನುಭವ ಪಡೆದವರಾಗಿದ್ದಾರೆ. ಅವರು ವಿರೋಧ ಪಕ್ಷದಲ್ಲಿದ್ದರೂ ಕೂಡ ಯಾವ ಸಂಕುಚಿತ ಮನೋಭಾವನೆ ಇಟ್ಟುಕೊಳ್ಳದೆ ಸರಕಾರದ ಯೋಜನೆಗಳ ಬಗ್ಗೆ ಉತ್ತಮ ಸಲಹೆಗಳನ್ನು ಕೊಡಲು ಹಿಂಜರಿಯಬಾರದು. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಪಕ್ಷಗಳು ಇರಬೇಕು, ಭಿನ್ನಾಭಿಪ್ರಾಯಗಳು ಇರುತ್ತವೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇರತಕ್ಕಂಥವರು ನಾನಾ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಕೊಟ್ಟು ಒಳ್ಳೆಯ ಸಲಹೆಗಳನ್ನೂ ಪ್ರೋತ್ಸಾಹವನ್ನೂ ಕೊಡುವುದಾದರೆ ಯಶಸ್ವಿಯಾಗುತ್ತದೆ.

ಇಂದು ಆಹಾರ ಬಹು ಮುಖ್ಯವಾದ ಸಮಸ್ಯೆಯಾಗಿದೆ. ಈಗಿನ ಕಾಲದಲ್ಲಿ ರೈತನಿಗೆ ಹೆಚ್ಚು ಸೌಲಭ್ಯ ಒದಗಿಸಬೇಕಾಗಿದೆ. ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ ಸರಕಾರ ನಿರ್ಬಂಧ ಇಟ್ಟುಕೊಳ್ಳಬಾರದು. ಕೆಲವು ಜಿಲ್ಲೆಗಳ ಮಟ್ಟಿಗೆ ಕ್ಷಾಮ ಪ್ರದೇಶದ ಬಗ್ಗೆ ನೀರಾವರಿ ಕಾಮಗಾರಿಗಳ ನಿರ್ಬಂಧ ಇಟ್ಟುಕೊಂಡರೆ ನೀರಾವರಿ ಕಾಮಗಾರಿಗಳಿಗೆ ಅವಕಾಶವಾಗುತ್ತದೆಯೇ ? ಸಣ್ಣ ನೀರಾವರಿ ಯೋಜನೆ ಪರಿಣಾಮಕಾರಿಯಾಗಿ ನಡೆಯುವುದಕ್ಕೆ ಅವಕಾಶವಾಗುವಂತೆ ಮಾಡಿಕೊಡಬೇಕು. ರೈತರಿಗೆ ಪ್ರೋತ್ಸಾಹ ಕೊಟ್ಟು ಗೊಬ್ಬರ ಬೀಜ ವ್ಯವಸಾಯ ಸಲಕರಣೆಗಳನ್ನು ಸಕಾಲದಲ್ಲಿ ಸೊಸೈಟಿಗಳ ಮೂಲಕ ಒದಗಿಸಿ ಕೊಡುವುದಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಸರಕಾರಕ್ಕೆ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರಿಗೆ ಒದಗಿಸುವ ಗೊಬ್ಬರ ಸಲಕರಣೆ ಕ್ರಿಮಿನಾಶಕ ಔಷಧಿ ಹೆಚ್ಚಾಗಿ ಸಕಾಲದಲ್ಲಿ ಒದಗಿಸುವುದಕ್ಕೆ ಪುನರ್ ವ್ಯವಸ್ಥೆ ಮಾಡಬೇಕೆಂದು ಕೇಳಿ ಕೊಂಡು ನನಗೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಸನ್ಮಾನ್ಯ ಸಭಾಪತಿಗಳೇ ನನಗೆ ಸಿಕ್ಕಂಥ 10 ನಿಮಿಷದಲ್ಲಿ ಉದ್ಭವವಾದ ಅಂಕಿ ಸಂಖ್ಯೆಗಳುಳ್ಳ ಅನೇಕ ರಚನಾತ್ಮಕವಾದ ಸಲಹೆಗಳನ್ನು ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ರಾಮಕೃಷ್ಣ ಹೆಗಡೆಯವರ ಆಹ್ವಾನದಂತೆ ಬಹಳ ಸ್ವಲ್ಪವೇ ಮಾತನಾಡಿ ಹೆಚ್ಚು ಟೀಕೆಗಳನ್ನು ಮಾಡದೇ ಕೇವಲ ಇದ್ದ ಸಂಗತಿಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

(ಶ್ರೀ ಕೆ. ಎಚ್. ಪಾಟೀಲ್)

ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ನಮ್ಮಲ್ಲಿ ಏನೇ ಭಿನ್ನಾಭಿಪ್ರಾಯ ಇರಲಿ ದೇಶದ ಕಲ್ಯಾಣರಾಜ್ಯವೇ ನಮ್ಮ ಏಕೈಕ ಗುರಿ. ಏನಿದ್ದರೂ ಅವರು ರಚನಾತ್ಮಕವಾದ ಕಾರ್ಯಗಳನ್ನು ಮಾಡಿದರೆ ಮಾತ್ರ ಅವರ ದೊಡ್ಡತನವನ್ನು ಎತ್ತಿ ತೋರಿಸುತ್ತದೆ. ನಾನು ಅನೇಕ ರಚನಾತ್ಮಕವಾದ ಸಲಹೆಗಳನ್ನು ಅವರ ಮುಂದೆ ಇಡಬಯಸುತ್ತೇನೆ. ಇಂದು ಅವರು ಸಾದರುಪಡಿಸಿರುವ ಬಜೆಟ್ಟನ್ನು ಸಮತೋಲನ ಬಜೆಟ್ ಎಂದು ಹೇಳುವುದಾಗಿದ್ದರೂ ಸಹ ನಿಜವಾಗಿ ಅದು ಸಮತೋಲನ ಬಜೆಟ್ ಆಗಿರದೆ ಈ ರಾಜ್ಯವನ್ನೂ ರಾಜ್ಯ ಸರ್ಕಾರವನ್ನೂ ಹೆಚ್ಚು ಹೆಚ್ಚು ಸಾಲಗಾರರನ್ನಾಗಿ ಮಾಡಿ ಜನತೆಯ ತೋರಿಕೆಗೆ ಮಾತ್ರ ಸಮತೋಲನ ಬಜೆಟ್ ಎಂದು ತೋರಿಸಿದಂತಾಗಿದೆ. ಅದರ ಹಿನ್ನೆಲೆಯಲ್ಲಿ ಮತ್ತು ಅವರ ಭಾಷಣದಲ್ಲಿ ಕಂಡುಬರುವ ಜನತೆಯ ಹಿತಕ್ಕೆ ಧಕ್ಕೆ ಬರುವಂತೆ ಕೆಲವು ವಿಷಯಗಳನ್ನು ಮಾತನಾಡಿರುವುದರಿಂದ ಅದನ್ನು ನಿಮ್ಮ ಗಮನಕ್ಕೆ ತರುತ್ತೇನೆ.

5.30 P.M.

ಭೂಕಂದಾಯವನ್ನು ತಕ್ಷಣ ತೆಗೆದು ಹಾಕಬೇಕೆಂದು ಈಗಾಗಲೇ ಸಾಕಷ್ಟು ಸಲಹೆಗಳು ಬಂದಿದ್ದರೂ ಸಹ ಹಿಂದಿನದಕ್ಕಿಂತ ಬದಲಾಗಿ ಮತ್ತೊಂದು ತೆರನಾದ ತೆರಿಗೆಯನ್ನು ಎಲ್ಲಿ ಹಾಕುವರೋ ಎಂಬ ಅರ್ಥ ಬರುವ ರೀತಿಯಲ್ಲಿ ವರ್ತಿಸಿರುವುದನ್ನು ನೋಡಿದರೆ ನಿಜವಾಗಿ ಒಕ್ಕಲುತನಕ್ಕೂ, ಒಕ್ಕಲಿಗರಿಗೂ ಹಿತವನ್ನು ಬಯಸುತ್ತಿದ್ದಾರೆಯೇ ಎನ್ನುವ ಅನುಮಾನ ಬಂದು ಶೋಚನೀಯವಾಗುತ್ತದೆ. ಮಾನ್ಯ ನಿಜಲಿಂಗಪ್ಪನವರು ತಮ್ಮ ಪ್ರಾಮಾಣಿಕತೆಯನ್ನು ಸಾರುತ್ತಾ ಇದ್ದಾರೆ. ಭೂಕಂದಾಯವನ್ನು ಸಂಪೂರ್ಣವಾಗಿ ತೆಗೆದು ಹಾಕದೇನೇ ಪ್ರಗತಿ ಸಾಧ್ಯ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ಹೇಳಿದಂತೆ ಪ್ರಾಮಾಣಿಕತೆಗೆ ಅಂಟಿಕೊಳ್ಳುವಂಥ ಜನ ಅವರಲ್ಲಿ ಬೇಕು. ವಿರೋಧ ಪಕ್ಷಗಳ ಮೇಲೆ ಅನೇಕ ಟೀಕೆಗಳನ್ನು ಮಾಡಿದ್ದಾರೆ. ವೈಯಕ್ತಿಕವಾಗಿಯೂ ಅನೇಕ ಟೀಕೆಗಳನ್ನು ಮಾಡಿದ್ದಾರೆ; ಆದರೆ ಅವರು ನನ್ನ ಬಗ್ಗೆ ಆಗಲಿ ನನ್ನ ಸ್ನೇಹಿತರ ಬಗ್ಗೆ ಆಗಲಿ ಒಂದು ಜಾತೀಯವಾದವನ್ನಾಗಲಿ, ಆಕ್ಷೇಪಣೀಯವನ್ನಾಗಲಿ ಕೇಳಬಯಸುವುದಿಲ್ಲ. ನಾನು ರಾಜ್ಯದ ಹಿತಾಭಿವೃದ್ಧಿಯನ್ನು ಎತ್ತಿ ಹಿಡಿಯುತ್ತಿದ್ದೇನೆ. ಮತ್ತು ಏನಾದರೂ ಇದ್ದರೆ ವಿಚಾರಣೆ ಮಾಡುತ್ತೇನೆ, ಆ ಪ್ರಕಾರ ವಿಚಾರಣೆ ಮಾಡಿ ನಮಗೆ ಆಶ್ವಾಸನೆಯನ್ನು ಕೊಟ್ಟರೆ, ತಮ್ಮ ಹಿರಿಮೆಯನ್ನು ಕಾಪಾಡಿಕೊಳ್ಳುತ್ತಾರೆ ಎಂದು ನಂಬಿ ಮುಂದಿನ ಕೆಲವು ಅಕ್ರಮ ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳು ಆಗುವಾಗ, ಆಗುವ ಪೂರ್ವದಲ್ಲಿ ಅವರ ಸಂಬಂಧಿಕರರಿಗೆ ಹೆಚ್ಚು ಹೆಚ್ಚು ಕಂಟ್ರಾಕ್ಟ್ ವ್ಯವಹಾರಗಳನ್ನು ಅವರ ಅಳಿಯಂದಿರಿಗೆ ಕೊಟ್ಟಿದ್ದಾರೆ. ಅವರ ಹೆಸರನ್ನು ಹೇಳಲು ಬಯಸುವುದಿಲ್ಲ. ಅವರ ಸಂಬಂಧಿಕರು ಅನೇಕ ಕಂಪನಿಗಳನ್ನು ಮಾಡಿಕೊಂಡಿದ್ದಾರೆ. ಪಿ.ಡಬ್ಲ್ಯು.ಡಿ. ಕಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಹೀಗಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಒಂದು ಅಸ್ಪಷ್ಟವಾದ ವಿಷಯಗಳನ್ನು ಹೇಳಿದರೆ ಅದನ್ನು ನಾನು ನಂಬುವುದಕ್ಕೆ ಆಗುತ್ತೇ ? ಮುಖ್ಯಮಂತ್ರಿಗಳ ಸಂಬಂಧಿಕರಿಗೆ, ಸಂಬಂಧಪಟ್ಟ ಹಾಗೆ ನಾನು ಒಂದು ಪಟ್ಟಿಯನ್ನು ಓದುತ್ತೇನೆ.

ಸ್ವಾಮಿ, ಹಳೆಬೆಣ್ಣೆಹಳ್ಳ 3 ಲಕ್ಷ 50 ಸಾವಿರ, ತುಪ್ಪರಿಹಳ್ಳ ಅಲಗವಾಡಿ ಹತ್ತಿರ 2 ಲಕ್ಷ 80 ಸಾವಿರ ರೂಪಾಯಿ, ಅಪ್ರೋಚ್‌ರೋಡ್ ತುಪ್ಪರಿಹಳ್ಳಕ್ಕೆ 50 ಸಾವಿರ. ನವಿಲಗುಂದ ಮೈನ್ ರೋಡ್, ಮೈಲಿ ನಂ. 8ರ ಬ್ರಿಡ್ಜ್ 4½ ಲಕ್ಷ, ಅಳಗವಾಡಿ ಗೊಬ್ಬರಗುಂಡಿ ರೋಡ್ 50 ಸಾವಿರ, ಹೊನ್ನಾವರ ಹತ್ತಿರ ಇರುವ ಬ್ರಿಡ್ಜ್ 4 ಲಕ್ಷ, ಸಿರಸಿ ಡಿವಿಷನ್ ಟ್ಯಾಂಕ್ ವರ್ಕ್ಸ್ 3 ಲಕ್ಷ. ಈ ಡಿವಿಷನ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರ ಅಳಿಯಂದಿರಿಗೆ ಅನೇಕ ಕೆಲಸಗಳನ್ನು ಕೊಟ್ಟಿದ್ದಾರೆ. ಅವರು ಕೆಲಸಗಳನ್ನು ತೆಗೆದುಕೊಂಡು ಮಾಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಯಾವ ಮಾರ್ಗದಿಂದ ಮಾಡಬೇಕು ಆ ಮಾರ್ಗದಿಂದ ಮಾಡಬೇಕು. ಇವರು ಮಂತ್ರಿಗಳಾದೊಡನೆಯೇ ಅವರು ಕಾಂಟ್ರಕ್ಟ್ ದಂಧೆಗಿಳಿದದ್ದೇಕೆ? ಅದರಂತೆ ಟೆಂಡರ್ ಕೊಡಬೇಕು. ಅದು ಬಿಟ್ಟು ಈ ಟೆಂಡರ್ 26 ಪರ್ಸೆಂಟು ಹೆಚ್ಚು ಹಣ ಹಾಕಿ ಟೆಂಡರುಗಳನ್ನು ಕೊಟ್ಟಿರುವುದು ಇವರ ಪ್ರಾಮಾಣಿಕತೆ ಎತ್ತಿ ತೋರಿಸುತ್ತಿದೆಯೇ ? ಸ್ವಾಮಿ, ನೀವೇ ಹೇಳಬೇಕು. ಯಾವುದೂ ಟೆಂಡರ್ ಬರಲಿಲ್ಲ. ಒಂದೇ ಒಂದು ಟೆಂಡರ್ ಬಂದಿತ್ತು ಎಂಬ ವಾದವನ್ನು ಹೇಳಿದರೆ ಪಕ್ಷಪಾತವಾದ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಒಂದು ಕೆಲಸ ಮಾಡುವುದು ಏತಕ್ಕೆ? ನಿಮ್ಮ ಅಧಿಕಾರ ದರ್ಪ ಹೇಗಿದೆ ಎನ್ನುವುದಕ್ಕೆ ಈ ಮಾತನ್ನು ಹೇಳುತ್ತೇನೆ. ನಿಮ್ಮ ಪ್ರಾಮಾಣಿ

ಕತೆಯನ್ನು ಒರೆಗಲ್ಲಿಗೆ ಹಚ್ಚಿರಿ. ನಿಮ್ಮ ಒಂದೇ ಒಂದು ಉದ್ದೇಶವನ್ನು ಹೇಳುತ್ತಿದ್ದೇನೆ. ಗುಲ್ಬರ್ಗ ಡಿವಿಷನ್‌ನಲ್ಲಿ ಹಾಗೂ ಅನೇಕ ಡಿವಿಜನ್‌ಗಳಲ್ಲಿ ಬಹಿರಂಗವಾಗಿ ಟೆಂಡರ್‌ಗಳನ್ನು ಕರೆಯಲಿಲ್ಲ. ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಇದನ್ನು ಪರೀಕ್ಷೆಮಾಡಿ ಈ ಟೆಂಡರುಗಳನ್ನು ಸ್ವೀಕಾರ ಮಾಡುವಾಗ ಅದರ ರೇಟನ್ನು ಹೆಚ್ಚಿಗೆಮಾಡಿ ಒಳಗೊಳಗೆ ಸ್ವೀಕರಿಸಿ ಅದನ್ನು ಹಂಚಿದರು. ಪಿ. ಡಬ್ಲ್ಯು. ಡಿ. ಯವರು ಬಹಿರಂಗವಾಗಿ ಟೆಂಡರುಗಳನ್ನು ಕರೆಯಲಿಲ್ಲ ಕೇವಲ ಒಳಗೊಳಗೆ ಸ್ವೀಕರಿಸಿ ಈ ಕೆಲಸವನ್ನು ಕೊಡುವ ದುಷ್ಟ ಸಂಪ್ರದಾಯಕ್ಕೆ ಇದು ರಾಜಕೀಯ ಮಾಡಿದಂತೆ ಆಗಲಿಲ್ಲವೇ? ಇದು ಅವರ ಪ್ರಾಮಾಣಿಕತೆ ತೋರಿಸುತ್ತಿದೆಯೇ, ಈ ದಿಶೆಯಲ್ಲಿ ಜನರ ದುರ್ದೈವ ಎಂದು ಮಾತ್ರ ಹೇಳಬೇಕಾದೀತು. ಬಹಿರಂಗ ನ್ಯಾಯಾಂಗ ವಿಚಾರಣೆ ಮಾಡಲು ಒಪ್ಪಿದಲ್ಲಿ ಸಾಕಷ್ಟು ಸಾಕ್ಷಿ ಪುರಾವೆಗಳು ಬರುವುದರಲ್ಲಿ ಸಂದೇಹವಿಲ್ಲ. ಸ್ವಾಮಿ, ಇನ್ನು ಶಿಕ್ಷಣ ಮಂತ್ರಿಗಳ ವಿಚಾರದಲ್ಲಿ ಶ್ರೀಮಾನ್ ಕಂಠಿಯವರು ಶಿಕ್ಷಣ ಮಂತ್ರಿಗಳಾಗಿರುವಾಗ ಒಂದು ಸಣ್ಣ ಹಳ್ಳಿಯಲ್ಲಿ 300 ಜನಸಂಖ್ಯೆಯಿದ್ದರೂ ಸಂಪೂರ್ಣ ಸರಕಾರದ ಖರ್ಚಿನಿಂದ ಒಂದು ಹೈಸ್ಕೂಲು ಪ್ರಾರಂಭಿಸಿಲ್ಲವೇ ?

Mr. SPEAKER.—Is the member discussing the previous Budget or this Budget ?

Sri K. H. PATIL.—It is 1967 Budget. But they have challenged.

Mr. SPEAKER.—Why bring in the previous Minister ?

Sri S. R. KANTHI.—I must intervene and say something.

Sri K. H. PATIL.—I am not yielding.

Sri S. R. KANTHI.—He is making allegations against me.

Mr. SPEAKER.—He is not yielding. Soon after his speech is over, I will give the Hon'ble Minister a chance.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ತಮ್ಮದೇ ಆದ ಒಂದು ಕಾನ್‌ಸ್ಟಿಟ್ಯೂಯೆನ್ಸಿಯಿನಲ್ಲಿ ಅನೇಕ ಸರ್ಕಾರಿ ಹೈಸ್ಕೂಲುಗಳನ್ನು ತೆರೆದಿದ್ದಾರೆ. ಖಾಸಗಿ ಜನರು ಕೇಳಿದರೆ ಹೈಸ್ಕೂಲುಗಳಿಗೆ 3 ವರ್ಷದವರೆಗೆ ಗ್ರಾಂಟು ಇಲ್ಲ ಎಂದು ಹೇಳುತ್ತಾರೆ. ಪ್ರಭಾವಯುತ ಶಕ್ತಿಗಳು ಯಾರು ಇಲ್ಲದೇ ಈ ಮಂತ್ರಿಮಂಡಲ ಯಾವುದೂ ಮಾಡುವುದಿಲ್ಲ. ಹುಲಗುಂದ ತಾಲ್ಲೂಕಿನಲ್ಲಿ 4—6 ಸರ್ಕಾರಿ ಹೈಸ್ಕೂಲುಗಳು ಇವೆ. ಅವುಗಳ ಜನಸಂಖ್ಯೆ ಎಷ್ಟು ? ಗೌರ್ನ್‌ಮೆಂಟ್ ಹೈಸ್ಕೂಲುಗಳನ್ನು ನೋಡಿದರೆ ವ್ಯಸನವಾಗುತ್ತದೆ. ಹೈಸ್ಕೂಲುಗಳು ಕೇವಲ 3—4 ಮೈಲಿಗಳ ಅಂತರದಲ್ಲಿವೆ. ಚಿತ್ರಗಿ 2 ಸಾವಿರ ಜನಸಂಖ್ಯೆಗೆ ಒಂದು ಹೈಸ್ಕೂಲು, ಕಂದಗಲ್, ಕರಡಿಸಜ್ಜಲಗುಡ್ಡ, ಧನ್ನೂರ ಇಲ್ಲೆಲ್ಲಾ ಸರ್ಕಾರಿ ಹೈಸ್ಕೂಲುಗಳು ಇವೆ. ಮತ್ತು 300 ಜನಸಂಖ್ಯೆ ಇರುವ ಕಡೆ ಒಂದು ಸರ್ಕಾರಿ ಹೈಸ್ಕೂಲ್ ಇದೆ, ನಮ್ಮ ಸರ್ಕಾರಿ ಬಜೆಟ್ ಈ ರೀತಿ ಆಗಿದೆ.

ಶ್ರೀ ಎಸ್. ಆರ್. ಕಂಠಿ.—ಅದು ರಾಯಚೂರು ಜಿಲ್ಲೆ, ಬಿಜಾಪುರ ಜಿಲ್ಲೆ ಅಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಅಷ್ಟೇ ಅಲ್ಲ ಸ್ವಾಮಿ, ಒಂದು ಓರಿಯನ್‌ಟಲ್ ಸೈನ್ಸ್ ಕಾಲೇಜು ತೆರೆದಿದ್ದಾರೆ. ಅಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 3 ; ಶಿಕ್ಷಕರ ಸಂಖ್ಯೆ 5. ಇದು ನಮ್ಮ ರಾಜ್ಯದ ದುರ್ದೈವ. ಹಣಕಾಸಿನ ಮಂತ್ರಿಗಳಿಗೆ ಗೊತ್ತಿದೆಯೋ, ಗೊತ್ತಿಲ್ಲವೋ, ಆದರೆ ನಮ್ಮ ಮಂತ್ರಿಮಂಡಲ ಈ ತರಹ ಅಪ್ರಮಾಣಿಕತೆ ತೋರಿಸುತ್ತಾ ಇದ್ದಾರೆ. ಇದನ್ನು ಇಳಕಲ್ ವಿಜಯ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಎಂದು ತೆರೆದಿದ್ದಾರೆ. ಇದಕ್ಕೆ 1½ ಲಕ್ಷ ಹಣವನ್ನು ಕೊಟ್ಟಿದ್ದಾರೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಒಂದು ವಿಷಯ ಹೇಳಿದರು. ಅವರು ಜಾತಿವಾದ ಮಾತನಾಡಿದ್ದಾರೆ. ಅದಕ್ಕೆ ನಾನು ಪ್ರವೇಶಮಾಡುವುದಿಲ್ಲ. ಆದರೆ ನನಗೆ ತಿಳಿದಂತೆ ನಿಜಲಿಂಗಪ್ಪನವರು ಜಾತಿಗಿಂತಲೂ ಗುಂಪಿನ ಪ್ರವೃತ್ತಿಯುವರಿದ್ದಾರೆ. ಅನೇಕ ಸಜ್ಜನ ಲಿಂಗಾಯತರನ್ನು ಸಹ ಹತ್ತಿಕ್ಕಿದ ಸ್ವಾಮಿಗಳಿಗೂ ವಿರೋಧಿಸಿದ ಉದಾಹರಣೆಗಳು ನಮ್ಮೆದುರಿನಲ್ಲಿಲ್ಲವೇ ?

ದಾವಣಗೆರೆ ಮಾರ್ಕೆಟ್ ಕಮಿಟಿಯ ಚುನಾವಣೆಯಲ್ಲಿ ನಡೆದದ್ದು ಏನು ? ಆ ಮಾರ್ಕೆಟ್ ಕಮಿಟಿಯ ಚುನಾವಣೆಯಾಗಿದ್ದರೂ ಸಹ ತಮ್ಮ ಪಕ್ಷದವರು ಹೆಚ್ಚಾಗಿ ಆರಿಸಿ ಬಂದಿಲ್ಲ. ಚೇರಮನ್ ಚುನಾವಣೆಯಾದರೆ ತಮ್ಮ ಪಕ್ಷಕ್ಕೆ ಸಿಗಲಾರದು ಎಂದು ಚುನಾವಣಾ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಪಬ್ಲಿಷ್ ಆಗುವುದನ್ನು ತಡೆ ಹಿಡಿಯುವ ತನಕ ಹೋಗಿದೆ ಈ ಸರ್ಕಾರ. ಹೀಗಾದರೆ ಯಾವ ನಿಷ್ಪಕ್ಷಪಾತವಾದ ಸರ್ಕಾರ ಇದು ? ಇದಕ್ಕಿಂತ ಹೆಚ್ಚಾದ ಪ್ರಮಾದ ಬೇಕೇ ?

(ಶ್ರೀ ಕೆ. ಎಚ್. ಪಾಟೀಲ್)

ಇವರ ಮಾತುಗಳನ್ನು ಕೇಳಿಕೊಂಡು ಇವರು ಹೇಳಿದಂತೆ ನಡೆಯುವ ಭಟ್ಟಂಗಿಗಳನ್ನು ಸಮಾರಂಭ ಗಳಿಗೆ ಇವರನ್ನು ಕರೆಯುವವರು ಹೊಗಳುವುದು ಮೊದಲಾದ ಕೆಲಸಗಳಿಗೆ ಎಂದೋ ಏನೋ ಗೊತ್ತಿಲ್ಲ, ಇಂಥವರ ವಿಚಾರದಲ್ಲಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಬ್ಯಾಂಕಿನಲ್ಲಿ, ಸ್ಟೇಟ್ ಇಂಡಸ್ಟ್ರಿಯಲ್ ಬ್ಯಾಂಕಿನಲ್ಲಿ ಪ್ರತ್ಯಕ್ಷವಾದ ಹಣದ ದುರುಪಯೋಗ ನಡೆದಿದೆ ಎಂದು ತಿಳಿಸಿದರೂ ಸರಕಾರಕ್ಕೆ ಸ್ವತಃ ಗೊತ್ತಿದ್ದರೂ ಸಹ ಸುಮ್ಮನೆ ಇಲ್ಲವೇ ಎಂದು ಕೇಳುತ್ತೇನೆ. ಇಂಥವರ ಮೇಲೆ ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳದೆ ಇರುವುದು ನಿಮ್ಮ ಪಕ್ಷಾಂಧ ಧೋರಣೆಯಲ್ಲವೆ ಎಂದು ನಿರ್ವಂಚನೆಯಿಂದ ಕೇಳಬೇಕಾಗಿದೆ.

ಶ್ರೀ ಮಾನ್ ಜತ್ತಿಯವರಿಗೆ ಆಹಾರದ ಹಂಚಿಕೆಯಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳುತ್ತೇನೆ. ನಗರದ ಡಿವಿಜನ್‌ನಲ್ಲಿ ಮಾರತಕ್ಕ ಗೋಧಿ ಯಾವ ರೀತಿ ಕೆಟ್ಟಿದೆ ಎನ್ನುವುದನ್ನು ನೋಡಬಹುದು. ಹಳ್ಳಿಗಳಲ್ಲಿ ಜನ ಉಪವಾಸ ಬೀಳುತ್ತಿದ್ದಾರೆ. ದನಗಳಿಗೆ ಸಹ ತಿನ್ನಲು ಯೋಗ್ಯವಲ್ಲದ ಆಹಾರವನ್ನು ಜನಗಳಿಗೆ ಕೊಡುತ್ತ ಸರ್ಕಾರ ಪಶುವೃತ್ತಿಯಿಂದ ಅವರನ್ನು ನೋಡುತ್ತಿದೆ, ಮನುಷ್ಯವೃತ್ತಿ ಅವರಲ್ಲಿ ಇದೆಯೇ ಎಂದು ನೋಡಬೇಕು. ಜನರಿಗೆ ಒಳ್ಳೆಯ ಆಹಾರವನ್ನು ಒದಗಿಸಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಮತ್ತು ಗದಗ-ಬೆಟಗೇರಿ ನೇಕಾರರ ಸಂಖ್ಯೆ ಹೆಚ್ಚಿರುವಲ್ಲಿ ಹೆಚ್ಚು ಆಹಾರ ಧಾನ್ಯ ಪೂರೈಸಲು ಬಿನ್ನವಿಸುತ್ತೇನೆ.

ಇನ್ನು ಹೆಚ್ಚು ಹೇಳಲಿಕ್ಕೆ ಅವಕಾಶವಿಲ್ಲ. ಇವರು ನಿಜವಾಗಿ, ಪ್ರಾಮಾಣಿಕರಾಗಿದ್ದರೆ ನಮ್ಮ ತಕರಾರುಗಳನ್ನು ನಿಷ್ಪಕ್ಷಪಾತದಿಂದ ನೋಡತಕ್ಕ ಒಂದು ಸಮಿತಿಯನ್ನು ನೇಮಿಸಿ ವಿಚಾರಣೆ ನಡೆಸಿ ತಾವು ನಿಷ್ಪಕ್ಷಪಾತಿಗಳು ಎನ್ನುವುದನ್ನು ಜನಗಳಿಗೆ ತೋರಿಸಲಿ ಎಂದು ಹೇಳಿ ನನಗೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. R. KANTHI (Minister for Law and Parliamentary Affairs).—Sir, the hon'ble member has made certain personal allegations in his speech. It is true that there is an ancestral property, a big house, which costs more than one lakh of rupees. But, my share in that is only Rs. 10,000. The whole house is given to the District School Board for running a school. It is not a Government school; it is a Board school. My father did it. When I was a Parliamentary Secretary in Bombay, this was done. Even this portion of Rs. 10,000, I am thinking to hand over to one of the sons of my brother. Hon'ble member said, there is a Oriental College; there is no Oriental College at all. It is a Training College which has been shifted from Lingsugoor to ilkal. They wanted a Women's College and it has been transferred there. Some Colleges have been transferred from place to place. The member said that there are only five but there are hundred lady students learning in that college.

So far as the Arts and Science College is concerned, it is a Society and I have nothing to do with the College. As Education Minister and as a policy of Government, Government have helped. Not only that college but half-a-dozen colleges have been helped like that. It is not by me personally but it is by the Government as a matter of policy. This college is now able to stand on its own legs. In the initial stages, as a policy of Government, so many colleges have been helped in the past and this is also one of them.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲರು ತಮ್ಮ ಭಾಷಣದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ವ್ಯಕ್ತ ಮಾಡುವಾಗ ಮುಖ್ಯ ಮಂತ್ರಿಗಳ ಅಳಿಯಂದಿರಿಗೆ ಎಷ್ಟು ಕೆಲಸಗಳನ್ನು ಕೊಡಿಸಿದ್ದಾರೆ ಎನ್ನುವ ಪಟ್ಟಿಯನ್ನು ಓದಿದ್ದಾರೆ.

ಮುಖ್ಯ ಮಂತ್ರಿಗಳ ಅಳಿಯಂದರೇ ಆಗಲಿ ಅವರ ಸಂಬಂಧೀಕರೇ ಆಗಲೀ ಕಂಟ್ರಾಕ್ಟರ್ ಇರಬಾರದು ಎನ್ನುವುದನ್ನು ಹೇಳುತ್ತಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅವರಿಗೆ ಆ ಕೆಲಸಗಳನ್ನು ಕೊಟ್ಟಿದ್ದರೆ, ಅದರ ತಪಶೀಲು ನನ್ನ ಹತ್ತಿರ ಇಲ್ಲ. ಪ್ರೊಸೀಜರ್ ಪ್ರಕಾರ ಕೊಟ್ಟಿದ್ದಾರೆ. ಏನಾದರೂ ಫೇವರೆಟಿಸಂ ಇತ್ಯೋ ಎನ್ನುವಂಥದನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಏನು ಪ್ರೊಸೀಜರ್ ಇದೆ ಆ ಪ್ರಕಾರ ಕೊಟ್ಟಿರುತ್ತಾರೆ. ಮುಖ್ಯ ಮಂತ್ರಿಗಳ ಅಳಿಯಂದಿರು ಎಂದು ಪ್ರೊಸೀಜರ್ ಬಿಟ್ಟು ಯಾವುದೂ ಕೊಟ್ಟಿಲ್ಲ. ಯಾರಿಗಾದರೂ ಫೇವರಿಟಿಸಂ ಮಾಡುವುದರ ಸಲುವಾಗಿ ಪ್ರೊಸೀಜರ್ ನೋಡದೆ ಯಾವುದಾದರೂ ಕೆಲಸವನ್ನು ಕೊಟ್ಟಿದ್ದಾರೆ ಎನ್ನುವಂಥದ್ದು ಇದ್ದು, ಅದನ್ನು ಸಭೆಯ ಗಮನಕ್ಕೆ ತಂದರೆ ಅಥವಾ ನನಗೆ ಬರೆದರೆ, ಅದರ ಬಗ್ಗೆ ಈ ಸಭೆಯಲ್ಲಿ ಎಂಟು ದಿವಸಗಳಲ್ಲಿ ಅದಕ್ಕೆ ಬೇಕಾಗುವಂಥ ಎಲ್ಲ ದಾಖಲೆಗಳನ್ನೂ ತರಿಸಿಕೊಂಡು ಒಂದು ಹೇಳಿಕೆಯನ್ನು ಬೇಕಾದರೂ ಕೊಡುವುದಕ್ಕೆ ತಯಾರಿದ್ದೇನೆ. ಏಕೆ ಈ ಮಾತು ಹೇಳುತ್ತಿದ್ದೇನೆಂದರೆ, ಜನ ನಾಳೆ ಪತ್ರಿಕೆಗಳಲ್ಲಿ ಓದಿ ಮುಖ್ಯ ಮಂತ್ರಿಗಳ ಅಳಿಯಂದಿರಿಗೆ ಪಬ್ಲಿಕ್ ವರ್ಕ್ಸ್ ಖಾತೆಯಲ್ಲಿ ಎಲ್ಲ ಕೆಲಸ ಕಾರ್ಯಗಳನ್ನೂ ಪ್ರೊಸೀಜರ್ ಗಾಳಿಗೆ ತೂರಿ ಕೊಡುತ್ತಿದ್ದಾರೆ ಎನ್ನುವ ಭಾವನೆ ಬರುವುದು ಬೇಡ. ನಿಮಗೆ ಗೊತ್ತಿದ್ದ ಹಾಗೆ, ಪ್ರೊಸೀಜರ್‌ನಲ್ಲಿ ತಪ್ಪು ಮಾಡಿ, ಒಬ್ಬರಿಗೆ ಫೇವರ್ ಮಾಡುವುದರ ಸಲುವಾಗಿ ನಮ್ಮ ಅಧಿಕಾರಿಗಳು ಏನಾದರೂ ಮಾಡಿದ್ದಾರೆ ಎನ್ನುವಂಥದ್ದು ಗೊತ್ತಿದ್ದರೆ, ನನಗೆ ತಿಳಿಸಿದರೆ, ಎಂಟು ದಿವಸದಲ್ಲಿ ಇದೇ ಸಭೆಯಲ್ಲಿ, ಸ್ಟೇಟಮೆಂಟ್ ಮಾಡುತ್ತೇನೆ. ನನಗೆ ಗೊತ್ತಿದ್ದಮಟ್ಟಿಗೆ ಪ್ರೊಸೀಜರನಲ್ಲಿ ಏನೂ ವ್ಯತ್ಯಾಸವಿಲ್ಲ, ಯಾರಿಗೂ ಫೇವರ್ ಮಾಡಿಲ್ಲ. ಟೆಂಡರುಗಳನ್ನು ಕರೆದಾಗ ಯಾರು ಲೋಯೆಸ್ಟ್ ಟೆಂಡರರ್ ಇರುತ್ತಾರೆಯೋ ಅವರಿಗೆ ಕಾನೂನು ಪ್ರಕಾರ ಕೊಡಬೇಕಾಗುತ್ತದೆ. ಕೊಡಬಾರದು ಎಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಒಂದು ವಾತಾವರಣವನ್ನು ತಯಾರಿಸಿ ಒಳಗಿಂದೊಳಗೇ ಟೆಂಡರ್ ತೆಗೆದುಕೊಂಡು ಕೆಲಸ ಕೊಡುತ್ತಿದ್ದಾರೆ ಎನ್ನುವಂಥ ಮಾತು ಸತ್ಯಕ್ಕೆ ದೂರವಾದುದು. ನಮ್ಮ ಪ್ರೊಸೀಜರ್ ಪ್ರಕಾರ ಸಣ್ಣ ಕೆಲಸವೇ ಇರಲಿ, ದೊಡ್ಡ ಕೆಲಸವೇ ಇರಲಿ ಟೆಂಡರುಗಳನ್ನು ಕರೆದಾಗ, ಟೆಂಡಗರುಳು ಬಂದು ಮೇಲೆ ಟೆಂಡರುದಾರರ ಎದುರಿಗೆ ಅವುಗಳನ್ನು ಒಡೆಯುತ್ತಾರೆ. ಅನಂತರ ಒಂದು ಸ್ಟೇಟ್‌ಮೆಂಟ್ ತಯಾರು ಮಾಡಿ ಲೋಯೆಸ್ಟ್ ಟೆಂಡರರ್ ಯಾರಿದ್ದಾರೆ ಅವರಿಗೆ ಕೊಡುತ್ತಾರೆ. ಇವತ್ತು ಏನಾದರೂ ರೀತಿಯಿಂದ ಪ್ರೊಸೀಜರ್ ತಪ್ಪಿಸಿ ಅಥವಾ ಅವರಿಗೆ ಫೇವರ್ ಮಾಡುವಂಥದ್ದು ಯಾವುದಾದರೂ ಒಂದು ಘಟನೆ ಅವರಿಗೆ ಗೊತ್ತಿದ್ದರೆ ಅದನ್ನು ಸಭೆಯ ಗಮನಕ್ಕೆ ತಂದರೆ ಅಥವಾ ನನಗೆ ಬರೆದರೆ ಅದರ ಬಗ್ಗೆ ತಪ್ಪಾಗಿದ್ದರೆ ತಪ್ಪಾಗಿದೆ ಎಂದು ಹೇಳುತ್ತೇನೆ. ಹಿಂದು ಮುಂದು ನೋಡುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಬಹು ಗಮನಾರ್ಹವಾದ ವಿಷಯವನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಹೇಳಿದ ಪ್ರಕಾರ ಏನಾದರೂ ಅನ್ಯಾಯವಾಗಿದ್ದರೆ ಆ ಬಗ್ಗೆ ಸಭೆಯ ಮುಂದೆ ಹೇಳಿಕೆ ಕೊಡುತ್ತೇನೆ ಎಂದು ಹೇಳಿದರು. ನನ್ನ ಗಮನಕ್ಕೆ ಬಂದಿರತಕ್ಕ ವಿಷಯವನ್ನು ಈ ಸಭೆಯಲ್ಲಿ ಹೇಳಲೇ ಅಥವಾ ಮಂತ್ರಿಗಳಿಗೆ ಪ್ರತ್ಯೇಕವಾಗಿ ಬರೆದು ಹೇಳಬೇಕೇ ಎನ್ನುವುದನ್ನು ಅವರು ಮೊದಲು ನನಗೆ ಹೇಳಬೇಕು.

Sri VEERENDRA PATIL.—Sir, I have given a solemn assurance to this House. If the hon'ble member feels that I should make a statement on the floor of this House, I would make it.]

ಶ್ರೀ ಎಚ್. ಸಿದ್ದವೀರಪ್ಪ.—ಕರ್ನಾಟಕ ಟ್ರೇಡರ್ಸ್ ಕಂಪನಿಯವರು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎಷ್ಟೆಷ್ಟು ಕಂಟ್ರಾಕ್ಟುಗಳನ್ನು ಮಾಡಿಕೊಂಡಿದ್ದಾರೆ? ಈ ಸಂಸ್ಥೆಯಲ್ಲಿ ಮೊದಲು ಮುಖ್ಯ ಮಂತ್ರಿಯವರ ಮಕ್ಕಳು ಇದ್ದರು. ಈಗ ಇಲ್ಲ ಎಂದು ಕೇಳಿದ್ದೇನೆ. ಈಗ ಅವರ ತಮ್ಮ ಇದ್ದೇ ಇದ್ದಾರೆ. ಆ ಕಂಪನಿಯವರು ಎನೇನು ಹಾವಳಿ ಮಾಡಿದ್ದಾರೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಮತ್ತು ಹರಿಹರ ಸೇತುವೆ ನಿರ್ಮಾಣದ ಸಂಬಂಧದಲ್ಲಿ ಏನೇನು ನಡೆದಿದೆ ಎನ್ನುವುದಕ್ಕೆ ದಯವಿಟ್ಟು ಫೈಲನ್ನು ಸಭೆಯ ಮುಂದೆ ಇಡುತ್ತೀರಾ? ಅವರು ಮಾಡಿರತಕ್ಕ ಕೆಲಸ ಸರಿಯಾಗಿಲ್ಲ ಎಂದು ಯಾರಾದರೂ ಒಬ್ಬ ಅಸಿಸ್ಟೆಂಟ್ ಇಂಜನಿಯರ್ ಗಲಾಟೆ ಮಾಡಿದರೆ ಅವನಿಗೆ ಅಕ್ಚುಯಲ್ ಫಿಸಿಕಲ್ ಅಸಾಲ್ಟ್ ಮಾಡುತ್ತಾರೆ. ಅವನನ್ನು ಎಲ್ಲಿಗೋ ಹಾಕುತ್ತಾರೆ. ಇವರು ಎಷ್ಟೆಷ್ಟು ಕೆಲಸ ಮಾಡಿದ್ದಾರೆ, ಎಷ್ಟು ಜನ ಹಾಜರಿ ಇರುತ್ತಾರೆ ಎನ್ನುವುದೂ ಗೊತ್ತಿಲ್ಲ. ಈ ವಿಷಯದಲ್ಲಿ ಮೊನ್ನೆ ತಾನೇ ಚೀಫ್ ಇಂಜನಿಯರು ಸರ್ಕಾರಕ್ಕೆ ಏನು ರಿಪೋರ್ಟ್ ಕೊಟ್ಟಿದ್ದಾರೆ—ಸತ್ಯವಾದ ರಿಪೋರ್ಟ್ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅಯ್ಯಂಗಾರ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳಾದ ಮಾತ್ರಕ್ಕೆ ಅವರ ಕಡೆಯವರು ಯಾರೂ ಕೆಲಸ ಮಾಡ

(ಶ್ರೀ ಎಚ್. ಸಿದ್ದವೀರಪ್ಪ)

ಬಾರದು ಎಂದು ಹೇಳದೆ ಇರಬಹುದು. ಆದರೆ ರಕ್ತ ಸಂಬಂಧವಿದೆ ನೋಡಿ, ಆ ರಕ್ತ ಸಂಬಂಧ ಬಹಳ ಕೆಟ್ಟದ್ದು. ದಿವಾನ್‌ರಾಗಿ ಎಂ. ವಿಶ್ವೇಶ್ವರಯ್ಯನವರನ್ನು ಕೆಲಸಕ್ಕೆ ತೆಗೆದುಕೊಂಡಾಗ ಮನೆಯವರನ್ನೆಲ್ಲಾ ಕರೆದು ನಾನು ದಿವಾನ್‌ಗಿರಿಯಲ್ಲಿ ಇರುವವರೆಗೂ ಯಾರೂ ಏನೂ ಕೆಲಸಕ್ಕೆ ಬರುವುದಿಲ್ಲ ಎಂದು ಹೇಳಿದರೆ ನಾನು ಆ ದಿವಾನ್‌ಗಿರಿಯನ್ನು ಒಪ್ಪಿಕೊಳ್ಳುತ್ತೇನೆ, ಇಲ್ಲದೆ ಇದ್ದರೆ ಇಲ್ಲ ಎಂದು ಹೇಳಿದರು. ಅಂಥ ಮಹನೀಯರು ಆಳಿ ಹೋಗಿರತಕ್ಕ ರಾಜ್ಯ ಇದು. ಕರ್ಣಾಟಕ ಟ್ರೇಡರ್ಸ್ ಮಾಡಿರತಕ್ಕ ಹಾವಳಿಯನ್ನು ನೀವು ದಯವಿಟ್ಟು ನಮಗೆ ಹೇಳಬೇಕು. ಕೆಲವು ಕಡೆ ಅಳತೆಯಲ್ಲಿ ರಾಂಗ್ 'ಮೆಷರ್‌ಮೆಂಟ್ಸ್' ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಇವರು ಮುಖ್ಯ ಮಂತ್ರಿಯವರ ಸಂಬಂಧೀಕರಾಗಿರುವುದರಿಂದ ಅವರು ಮಾಡಿರುವುದನ್ನು ದಕ್ಕಿಸಿಕೊಂಡಿದ್ದಾರೆ. ಏನೇ ಹೇಳಲಿ ಮುಖ್ಯ ಮಂತ್ರಿಗಳು ಹುಸಿನಗೆ ಬೀರುತ್ತಾರೆ. ಜನರ ಮನಸ್ಸಿನಲ್ಲೇ ನಿದಯೆಂಬುದನ್ನು ಮೊನ್ನೆ ಕೆಲವರು ಹೇಳಿದ್ದಾರೆ. ಇನ್ನುಮುಂದಾದರೂ ದಯಮಾಡಿ ಗಮನದಲ್ಲಿಡಿ. ನಿಮ್ಮವಿಚಾರದಲ್ಲೇನೂ ಹೇಳುತ್ತಿಲ್ಲ. ಮುಖ್ಯ ಮಂತ್ರಿಗಳ ಸಂಬಂಧೀಕರು ಮಾಡಿರುವ ಅನ್ಯಾಯದ ಬಗ್ಗೆ ಜವಾಬು ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಕರ್ಣಾಟಕ ಟ್ರೇಡರ್ಸ್‌ಗೆ ಹರಿಹರದ ಸೇತುವೆ ಕೆಲಸ ಕೊಟ್ಟಿತ್ತು. ಮಾನ್ಯ ಸದಸ್ಯರು ಅದರಬಗ್ಗೆ ಪ್ರಶ್ನೆ ಹಾಕಿದ್ದಾರೆ, ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಅದು ಬಂದಮೇಲೆ ಏನು ಕೇಳುತ್ತಾರೋ ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ. ಆ ವಿಚಾರದಲ್ಲಿ ಅರ್ಧ ಘಂಟೆಯು ಚರ್ಚೆಗೆ ಅವಕಾಶಮಾಡಿಕೊಂಡು ಚರ್ಚೆಮಾಡಿದರೂ ಉತ್ತರ ಕೊಡುತ್ತೇನೆ. ಇಂಥ ಹಾವಳಿ ಮಾಡಿದ್ದಾರೆಂದು ಖಚಿತವಾಗಿ ಹೇಳಿದರೆ ಆ ಬಗ್ಗೆ ವರದಿ ತರಿಸಬಹುದು. ಸ್ಪೆಸಿಫಿಕ್ಕಾಗಿ ಯಾವುದೇ ಒಬ್ಬ ಕಂಟ್ರಾಕ್ಟರ ವಿಚಾರದಲ್ಲಿ ಅವರು ಸಮಾಚಾರ ಕೇಳಿದರೆ ಬೇಕಾದರೆ ತರಿಸಿಕೊಡಬಹುದು. ಅವರ ಮನಸ್ಸಿನಲ್ಲೇನೋ ಇಟ್ಟುಕೊಂಡು ಏನೋ ಹೇಳಿದರೆ ಹೇಗೆ ವರದಿ ತರಿಸುವುದು ? ಕರ್ಣಾಟಕ ಟ್ರೇಡರ್ಸ್ ಏನು ಅನಾಹುತ ಮಾಡಿದ್ದಾರೆ ಎಂಬುದನ್ನು ಬರೆಯಲಿ, ವಿಚಾರಿಸಿ ಮಾಡಿದ್ದಾರೆ ಎಂದು ಹೇಳುತ್ತೇನೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಮತ್ತು ಸಹಕಾರ ಶಾಖೆಗಳ ಮಂತ್ರಿಯವರು).—ಈಗ ದಾವಣಗೆರೆ ಮಾರ್ಕೆಟ್ ಕಮಿಟಿ ಸಂಬಂಧದಲ್ಲಿ ಹೈಕೋರ್ಟಿನಲ್ಲಿ ರಿಟ್ ಇವೆ. ಆದುದರಿಂದ ಆ ವಿಚಾರ ಪ್ರಸ್ತಾಪ ಮಾಡುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಹೈಕೋರ್ಟಿನ ರಿಟ್‌ಗೂ ಇದಕ್ಕೂ ಏನೂ ಸಂಬಂಧವಿಲ್ಲ. ಈ ಸಭೆಯ ಸದಸ್ಯರಲ್ಲಿ 23 ಜನರ ಮೇಲೆ ಕೇಸ್ ಇದೆ. ಆದರೆ ನಾವು ಇಲ್ಲಿ ಸದಸ್ಯರಾಗಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದೇವೆ. ಹೈಕೋರ್ಟಿಗೆ ಅರ್ಜಿ ಹಾಕಿದ್ದಾರೆ, ಆದರೆ ಸ್ಟೇ ಆರ್ಡರು ಕೊಟ್ಟಿಲ್ಲ. ಹಾಗೆಯೇ ಇದೆ. ನೀವು ಗೆಜೆಟ್ ನೋಟಿಫಿಕೇಷನ್ ಮಾಡಿಲ್ಲ. ಮಾಡಿದರೆ ಛೇರ್ಮನ್ನರು ಹೋಗುತ್ತಾರೆ ಎಂದು ಮಾಡಿಲ್ಲ. ಇದಕ್ಕಾಗಿ 8 ತಾಲ್ಲೂಕಿನ ಜನರು ನಿಮ್ಮನ್ನು ಶಪಿಸುತ್ತಿದ್ದಾರೆ.

Mr. PPEAKER.—If the matter is pending, the circumstance that stay has not been given does not make it less *sub judice*.

Sri K. H. PATIL.—Gazette Notification is a mere ministerial act of Government.

Sri VEERENDRA PATIL.—I will place all the papers before you and you can examine.

Sri H. SIDDAVEERAPPA.—If the Speaker says that the matter must rest there, we will abide by that decision. He may place all the papers before the Speaker and we will also place them before him.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಸಭಾಪತಿಯವರೇ, ಈ ಬಜೆಟ್ಟನ್ನು ಸ್ವಾಗತಿಸುತ್ತಾ ಎರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ನನಗೆ ಹೆಚ್ಚು ವೇಳೆ ಸಿಕ್ಕಿಲ್ಲ. ಆದುದರಿಂದ ಅವಶ್ಯಕವಿರುವಷ್ಟು ನಾಲ್ಕು ಮಾತುಗಳನ್ನು ಮಾತ್ರ ಹೇಳುತ್ತೇನೆ. ಈ ವರ್ಷದ ಬಜೆಟ್ಟನ್ನು ನೋಡಿದರೆ ಬಿದರೆ ಜಿಲ್ಲೆಗೆ 10 ವರ್ಷಗಳಿಂದ ಒದಗಿಸಿರುವ ಹಾಗೆ ಈ ಸಾರಿ ಖರ್ಚಿಗೆ ಹಣ ಕಡಮೆ ಒದಗಿಸಿದ್ದಾರೆ. ವಾಸ್ತವವಾಗಿ ಬಜೆಟ್ ಮಾಡುವಾಗ ಪ್ರತಿಯೊಂದು ತಾಲ್ಲೂಕಿನಿಂದಲೂ ಬರುವಷ್ಟು ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಅದೇ ಪ್ರಕಾರ ಹಂಚುವಾಗ ಕೂಡ ಪ್ರತಿಯೊಂದು ಕಡೆಗೂ ಸರಿಸಮವಾಗಿ ಎಷ್ಟುಮಟ್ಟಿಗೆ ಸಾಧ್ಯ ಅಷ್ಟುಮಟ್ಟಿಗೆ ಹಂಚಬೇಕು. ಆದರೆ ಕಳೆದ 10 ವರ್ಷಗಳಿಂದ ಹಾಗೆ ಮಾಡುತ್ತಿಲ್ಲ. 1956 ರಿಂದ ಬಿದರೆ ಜಿಲ್ಲೆ ಮೈಸೂರು ಸಂಸ್ಥಾನದಲ್ಲಿದ್ದರೂ ಸಹ ಯಾವ ಯಾವ ಕ್ಷೇತ್ರದಲ್ಲಿ ಎಷ್ಟು ಖರ್ಚಾಗಬೇಕು ಅಷ್ಟು ಆಗಿಲ್ಲ. ವಾಸ್ತವಿಕ ಪರಿಸ್ಥಿತಿ ಹೀಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಬ್ರಿಟಿಷರ ಕಾಲದಲ್ಲಿ ಅಂಡಮಾನಿನಲ್ಲಿ ತಪ್ಪು ಮಾಡಿದವರನ್ನು ಕೂಡುತ್ತಿದ್ದ ಹಾಗೆ ಬೀದರ್ ಜಿಲ್ಲೆಯನ್ನು ಕಷ್ಟಕ್ಕೆ ಈಡುಮಾಡಿದ್ದಾರೆ. ತಪ್ಪು ಮಾಡುವವರು, ಲಂಚ ತಿನ್ನುವವರು ಇಂಥ ಆಫೀಸರುಗಳು ಉತ್ತಮ ಮಟ್ಟಕ್ಕೇರುತ್ತಿದ್ದಾರೆ, ಸರಿಯಾದ ಕೆಲಸವಾಗಿಲ್ಲ. ಇದನ್ನು ಸರಿಯಾಗಿ ನೋಡಿಕೊಳ್ಳಬೇಕು. ಶಾಲೆಗಳಿಗೆ, ರಸ್ತೆಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ ಬಿದರೆ ಜಿಲ್ಲೆಯಲ್ಲಿ ಎಷ್ಟು ಖರ್ಚಾಗಬೇಕೋ ಅಷ್ಟು ಆಗುತ್ತಿಲ್ಲ ಸರ್ವೇಸಾಧಾರಣವಾಗಿ ನಮ್ಮ ದೇಶದಲ್ಲೆಷ್ಟು ಜಿಲ್ಲೆಗಳಿಗೆ ಅವುಗಳಿಗೆಲ್ಲಾ ಸಮನಾಗಿ ಹಣವನ್ನು ಬಜೆಟ್ಟಿನಲ್ಲಿ ಹಂಚಬೇಕು, ಇದು ಒಂದು ಸರಿಯಾದ ತತ್ವ. ಮೇಜರ್ ಇರಿಗೇಷನ್ ಅಥವಾ ಮೈನರ್ ಇರಿಗೇಷನ್ ಕೆಲಸ ಎಲ್ಲ ಕಡೆಯೂ ತೆಗೆದುಕೊಳ್ಳಬೇಕು. ನಮ್ಮ ಬಿದರೆ ಜಿಲ್ಲೆಯಲ್ಲಿ ಮೇಜರ್ ಇರಿಗೇಷನ್ ಕೆಲಸ ಅಥವಾ ಮೇಜರ್ ಕೆಲಸವೊಂದನ್ನೂ ತೆಗೆದುಕೊಂಡಿಲ್ಲ. ಹಣವೆಷ್ಟಿದೆಯೆಂಬುದನ್ನು ನೋಡಿ ಜಿಲ್ಲೆಗಳಿಗೆ ಸಮನಾಗಿ ಹಂಚಬೇಕು ಮತ್ತು ಎಲ್ಲಾ ಸರ್ವಿಸ್ಸುಗಳಿಗೂ ಜಿಲ್ಲಾವಾರು ತೆಗೆದುಕೊಳ್ಳಬೇಕೆಂದು ಹಿಂದೆಯೂ ಹೇಳಿದ್ದೆ, ಈಗಲೂ ಹೇಳುತ್ತೇನೆ. ಈ ದೇಶಕ್ಕೆ 5 ಭಾಗಗಳಿಂದ ಜನರು ಬಂದಿದ್ದಾರೆ, ನಮ್ಮಲ್ಲಿ ಅಕ್ಷರಸ್ತರ ಸಂಖ್ಯೆ ಕಡಮೆ ಇದೆ, ಅಲ್ಲಿ ಶೇಕಡ 10 ಭಾಗವಿದ್ದರೆ ಇತರ ಕಡೆಗಳಲ್ಲಿ ಸೇಕಡ 40 ರಷ್ಟಿದೆ. ಎಲ್ಲಾ ಕಡೆಯೂ ಒಂದೇ ರೀತಿಯಿಂದ ಈ ಈ ಸಂಬಂಧದಲ್ಲಿ ಪ್ರೋತ್ಸಾಹ ಕೊಟ್ಟರೆ ನಮ್ಮ ಜಿಲ್ಲೆಗೆ ಏನೂ ಅನುಕೂಲವಾಗುವುದಿಲ್ಲ. ಆದುದರಿಂದ ನಮ್ಮ ಕಡೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಒಂದಾದರೂ ದೊಡ್ಡ ಇರಿಗೇಷನ್ ಪ್ರಾಜೆಕ್ಟ್ ಆಗಲೇಬೇಕು. 10 ವರ್ಷಗಳಲ್ಲಿ 10 ಸಾವಿರ ರೂಪಾಯಿಗಳನ್ನು ಒಂದು ಯೋಜನೆಗೆ ಒದಗಿಸಿದ್ದಾರೆ. ನಮ್ಮಲ್ಲಿ ಕಾರಂಜಿ ನದಿ ಇದೆ, ಗೋದಾವರಿ ಬೇಸಿನ್ನಿನಲ್ಲಿ ಎರಡು ನದಿಗಳಿವೆ, ಇವುಗಳಿಗೆ ಸಂಬಂಧಪಟ್ಟ ಪ್ರಾಜೆಕ್ಟನ್ನು ತೆಗೆದುಕೊಂಡಿಲ್ಲ, ಖರ್ಚು ಇತರ ಬಾಬುಗಳಲ್ಲಿ ಕಡಮೆಮಾಡಿ ನಮ್ಮ ಕಡೆ ನೀರಾವರಿ ಸಲುವಾಗಿ ಸರಕಾರ ಗಮನಕೊಡಬೇಕು. ಮನಸ್ಸು ಮಾಡಿದರೆ ಅಪ್ಪರ್ ಕೃಷ್ಣ ಮುಂತಾದ ಯೋಜನೆ ಮಾಡಬಹುದು. ಆದರೆ ಯಾವಾಗ ಕೇಳಿದರೂ ಬಿದರೆ ಜಿಲ್ಲೆಗೆ ಹಣವಿಲ್ಲವೆಂದು ಹೇಳುವುದು ಸರಿಯಲ್ಲ. ಗೋದಾವರಿ ಬೇಸಿನ್ನಿನಲ್ಲಿ 2 ನದಿಗಳಿರುವಾಗ ಸರಕಾರ ಅದಕ್ಕೆ ಸಂಬಂಧಪಟ್ಟ ಒಂದು ಪ್ರಾಜೆಕ್ಟನ್ನೂ ತೆಗೆದುಕೊಂಡಿಲ್ಲ. ಆಂಧ್ರದವರು ಯೋಜನೆಗಳನ್ನು ಮಾಡಿ ಉಪಯೋಗ ಪಡೆಯುತ್ತಿದ್ದಾರೆ, ನಮಗೆ ಸೇಕಡ 8ರಷ್ಟು ನೀರಿದೆ, ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡರೆ ಅನುಕೂಲವಾಗಬಹುದು. ಪಂಚವಾರ್ಷಿಕ ಯೋಜನೆಯಲ್ಲಿ ಕಾರಂಜಿ ಯೋಜನೆ ಸೇರಿದೆ. ಆದರೆ ಕೆಲಸ ತೆಗೆದುಕೊಂಡಿಲ್ಲ. ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು. ಈ ವರ್ಷವೇ ಕಾರಂಜಿ ಯೋಜನೆ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲು ಅನುಕೂಲವಾಗುವಂತೆ ಬಜೆಟ್ಟಿನಲ್ಲಿ ಹಣ ಸೇರಿಸಬೇಕು. ಅದಕ್ಕೆ ಪಂಚವಾರ್ಷಿಕ ಯೋಜನೆಯಲ್ಲಿ ದಶಲಕ್ಷ ರೂಪಾಯಿ ಒದಗಿಸಿದೆ ಎಂದು ಹೇಳುತ್ತಿದ್ದಾರೆ. ಅದನ್ನು ಈಗಲೇ ತೆಗೆದುಕೊಂಡರೆ ಜಾಗ್ರತೆ ಆಗಬಹುದು. ಅದರಿಂದ 67 ಸಾವಿರ ಎಕರೆ ನೀರಾವರಿಯಾಗುವುದು

6-00 P.M.

ಇದಕ್ಕಾಗಿ ಸಕಾಲದಲ್ಲಿ ಸರ್ಕಾರಕ್ಕೆ ಆಗಿಂದಾಗ್ಗೆ ಸ್ಪಷ್ಟವಾಗಿ ವಿನಂತಿ ಮಾಡುತ್ತಿದ್ದರೂ ನಮ್ಮ ಭಾಗದಲ್ಲಿ ಅಷ್ಟು ಅನುಕೂಲಗಳು ಆಗಲಿಲ್ಲ. ನಮ್ಮ ಬೀದರ್ ಭಾಗಕ್ಕೆ ನಿಗದಿಯಾಗಿರುವ ಹಣವನ್ನು ಈಗಲಾದರೂ ಸರಿಯಾಗಿ ಹಂಚಿಕೆ ಮಾಡುವ ಏರ್ಪಾಡು ಮಾಡಬೇಕು. ಹನ್ನೆರಡು ಡಿಸ್ಟ್ರಿಕ್ಟ್‌ಗಳಿಗೆ ಒಂದು ರೀತಿಯಾಗಿ, ನಮ್ಮ ಭಾಗದಲ್ಲಿರುವ ಸುಮಾರು ಎಂಟು ಡಿಸ್ಟ್ರಿಕ್ಟ್‌ಗಳಿಗೆ ಒಂದು ರೀತಿಯಾಗಿ ಸಹಾಯಗಳನ್ನು ಮಾಡುತ್ತಿದ್ದಾರೆ. ನಮ್ಮ ಭಾಗದಲ್ಲಿರುವ ಕಾರಂಜಿ ಪ್ರಾಜೆಕ್ಟ್ ಬಹು ಮುಖ್ಯವಾದುದು. ಇದಕ್ಕಾಗಿ ಸರಕಾರ ಸ್ವಲ್ಪ ಹಣವನ್ನೂ ಕೂಡ ಹಿಂದೆ ಒದಗಿಸಿತ್ತು. ಈಗ ಇದರ ಬಗ್ಗೆ ಏನೂ ಕಾಣಬರುತ್ತಿಲ್ಲ. ಇದೂ ಅಲ್ಲದೆ ನಮ್ಮ ಭಾಗದಲ್ಲಿರುವ ಎರಡು ಜೀವ ನದಿ

(ಶ್ರೀ ಎಸ್. ಭೀಮಣ್ಣ)

ಗಳಾದ ಮಾಂದ್ರ ಹಾಗೂ ಕಾರಂಜಿ ನದಿಗಳಿಗೆ ಆದಷ್ಟು ಬೇಗನೆ ಒಂದು ಸಣ್ಣ ಪ್ರಾಜೆಕ್ಟನ್ನು ಮಾಡಿಸಿಕೊಟ್ಟರೆ ನಮ್ಮ ಭಾಗದ ಜನರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, 1967-68ನೇ ಸಾಲಿನ ಬಜೆಟ್ಟನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕು ಎಂದು ನನ್ನ ಇಷ್ಟವಿದೆ. ಆಹಾರದ ದವಸಗಳು ನಮ್ಮಲ್ಲಿಲ್ಲ ಎಂದು ನಾವು ಪರದೇಶಗಳಿಗೆ ಹೋಗಿ ಅವರನ್ನು ಬೇಡಿ ನಮ್ಮ ಇಂಡಿಯಾ ದೇಶಕ್ಕೆ ತರಬೇಕು ಎಂದರೆ ಇದು ಬಹಳ ಅವಮಾನಕರವಾದ ಸಂಗತಿ. ಮತ್ತು ನಮ್ಮ ಇಂಡಿಯಾ ದೇಶದಲ್ಲಿ ಇರುವ ಜನ ಸುಮಾರು ವ್ಯವಸಾಯದಿಂದಲೇ ಜೀವನ ಮಾಡತಕ್ಕವರು ಶೇಕಡ 80 ಜನರಿದ್ದಾರೆ. ಪರದೇಶದಲ್ಲಿ ಸೇಕಡ ಎಂಟರಷ್ಟು ಜನ ಕೂಡ ವ್ಯವಸಾಯದಲ್ಲಿ ಇಲ್ಲದೇ ಇದ್ದರೂ ಕೂಡ ಅವರಿಂದ ನಾವು ಆಹಾರ ದವಸಗಳನ್ನು ಪಡೆಯುತ್ತಿರುವುದನ್ನು ನೋಡಿದರೆ ನಮಗೆ ಬಹಳ ಅವಮಾನಕರವಾಗಿ ಕಾಣಿಸುತ್ತದೆ, ರೈತರಿಗೆ ನಮ್ಮ ದೇಶದಲ್ಲಿ ಹಿಂದೆ ಏನು ಸಹಾಯ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ಸರಕಾರ ಸಹಾಯ ಸಲಕರಣೆಗಳನ್ನು ಒದಗಿಸಿಕೊಡಬೇಕು. ನಮ್ಮ ಮಂತ್ರಿಗಳೇನೋ ಈ ದಿವಸ ಇಲ್ಲಿ ಹೇಳುತ್ತಾರೆ. ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕಾಗಿ ಬೇಕಾದಷ್ಟು ಸಹಾಯ ಮಾಡುತ್ತಿದ್ದೇವೆ, ಬಾವಿಗಳನ್ನು ತೋಡಿಸುವುದಕ್ಕಾಗಿ ಸಹಾಯ ಮಾಡುತ್ತಿದ್ದೇವೆ, ಟ್ರಾಕ್ಟರುಗಳನ್ನು ಕೊಡುತ್ತಿದ್ದೇವೆ ಮತ್ತು ಇದಕ್ಕಾಗಿ ಇನ್ನೂ ಹೆಚ್ಚಿನ ಅವಕಾಶ ಕೂಡ ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ನಿಜ ಈ ದಿವಸ ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು ಇಪ್ಪತ್ತು ಕೋಟಿಯವರೆಗೆ ಬಾವಿಗಳನ್ನು ತೆಗೆಯುವುದಕ್ಕಾಗಿ ಸಾಲವಾಗಿ ಕೊಟ್ಟಿದ್ದಾರೆ ಮತ್ತು ಇದಕ್ಕೆ ಅನುಸಾರವಾಗಿ ತಕ್ಕ ಯೋಜನೆಗಳನ್ನೂ ಮಾಡುತ್ತಿದ್ದಾರೆ. ಇದರ ಜೊತೆಗೆ ಬೀಜ, ಗೊಬ್ಬರ ಇತ್ಯಾದಿಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದಾರೆ. ಅದರಲ್ಲೂ ನಮ್ಮ ಸರಕಾರ ರೈತ ನಮ್ಮ ದೇಶದ ಬೆನ್ನುಮೂಳೆ ಎಂದು ಹೇಳುತ್ತಾ ಇರುವವರು ಈಗ ಆ ರೈತರ ಬೆನ್ನಿನ ಮೂಳೆಗಳನ್ನು ಮುರಿಯುತ್ತಿದ್ದಾರೆ. ಅಲ್ಲದೆ ಟ್ರಾಕ್ಟರುಗಳಿಗಾಗಿ ಹೆಚ್ಚು ಸಹಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಾ 280 ಟ್ರಾಕ್ಟರುಗಳನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಸುಮಾರು ನೂರಾರು ಎಕರೆಗಳಷ್ಟು ಭೂಮಿ ಹೊಂದಿರುವ ಜನಕ್ಕೆ ಅನುಕೂಲವಾಗುತ್ತದೆಯೇ ಹೊರತು ಇತರ ಜನರಿಗೆ ಅನುಕೂಲವಾಗುತ್ತಿಲ್ಲ. ಸುಮಾರು 10 ಅಥವಾ 20 ಎಕರೆಗಳಷ್ಟು ಇರುವ ಜಮೀನುದಾರರುಗಳಿಗೆ ಟ್ರಾಕ್ಟರುಗಳು ಹಾಗೂ ಪಂಪುಸೆಟ್ಟುಗಳನ್ನು ಕೊಟ್ಟು ಸಹಾಯ ಮಾಡಬೇಕು. ನಮ್ಮ ದೇಶದಲ್ಲಿ ಬೆಳೆಯುವವರೇ ಹೆಚ್ಚಾಗಿರುವುದರಿಂದ ಅವರಿಗೆ ಬೇಕಾಗುವ ಸಾಮಾನುಗಳನ್ನು ಸಹಾಯ ಮಾಡಿ ಅನುಕೂಲ ಮಾಡಿಕೊಡಬೇಕು. ಅಲ್ಲದೆ ನಮ್ಮ ಎದುರು ಭಾಗದಲ್ಲಿ ಕುಳಿತಿರುವ ವಿರೋಧ ಪಕ್ಷದವರು ಅನೇಕರು ನಮ್ಮ ಮಾನ್ಯ ಮಂತ್ರಿಗಳ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅವರಲ್ಲಿ ಕೆಲವರು 1939 ನೇ ಇಸವಿಯಿಂದ 1962ರ ವರೆಗೆ ಕಾಂಗ್ರೆಸ್ಸು ಸಂಸ್ಥೆಯಲ್ಲೇ ಇದ್ದವರು ಹಾಗೂ ಆಡಳಿತವನ್ನು ನಡೆಸಿದರು. ಈಗ ಬೇರೆ ಪಕ್ಷದಲ್ಲಿ ಇದ್ದೇವೆ ಎಂದು ಆಡಳಿತ ಪಕ್ಷದವರ ಮೇಲೆಯೇ ಆರೋಪಗಳನ್ನು ಹಾಗೂ ಟೀಕೆಗಳನ್ನು ಮಾಡುವುದು ಸಾಧ್ಯವಿಲ್ಲ ಎನ್ನುವುದನ್ನು ಅವರೂ ತಿಳಿದುಕೊಳ್ಳಬೇಕು. ನೀವು ಟೀಕೆ ಮಾಡುವುದು ಹೆಚ್ಚಲ್ಲ. ಆದರೆ ರಾಜ್ಯವನ್ನು ಕಲಕುವಂತಹ ಟೀಕೆಗಳನ್ನು ಮಾಡುವುದು ಸರಿಯಲ್ಲ. ಜನಗಳನ್ನು ನೀವು ಹೊಂದಿಸಿಕೊಳ್ಳಬೇಕೆಂದು ಈ ರೀತಿ ಟೀಕೆಗಳನ್ನು ಮಾಡುವುದು ಸರಿಯಲ್ಲ. ಹಿಂದೆ ಹೇಳುತ್ತಿದ್ದರು ನಾವೆಲ್ಲ ಸತ್ಯವಂತರೇ ಎಂದು. ಹೀಗೆ ಸತ್ಯವಂತರಾಗಿ ಕೆಲಸ ಮಾಡಬೇಕಾದರೆ ನಾವೆಲ್ಲ ಸರಕಾರಕ್ಕೆ ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕು. ಅಂತಹ ಸಲಹೆಗಳನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಒಳ್ಳೆಯ ಆಡಳಿತ ನಡೆಸುವಂತೆ ಮಾಡಬೇಕು ಎಂದು ಇಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಹೆಚ್ಚು ಕಾಲಾವಕಾಶವಿಲ್ಲದುದರಿಂದ ಮುಂದೆ ಅವಕಾಶ ಸಿಕ್ಕಿದಾಗ ಇನ್ನೂ ಹೆಚ್ಚು ವಿಚಾರಗಳನ್ನು ಸರಕಾರದ ಗಮನಕ್ಕೆ ತರುತ್ತೇನೆ ಎಂದು ಹೇಳಿ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸುತ್ತೇನೆ.

† **Sri S. R. BOMMAI** (Kundgol).—Mr. Speaker, Sir, participating in the General Discussion it pains me, sitting here in this House, to say that I differ from the statement made by my Whip Sri Huchmasthi Gowda that the present rule has helped the major community. He said that it is the honest opinion of the common man that during the Chief

Ministership of Sri Jathi and Sri Nijalingappa they have favoured the major community and done everything to advance the interests of the major community just to keep themselves in power as the Chief Minister. I may tell the House that it is the major community which has suffered during the last 10 years. In the appointments made in Vidhana Soudha during the last 10 years not one per cent has been recruited from North Karnatak Area. Let me assure the House I am not at all encouraging or supporting communalism. It may not be out of place to mention here that I am the follower of the late leader Sri M. N. Roy and that the Congress Ministry has not bettered the lot of the common man. Because of their misrule and their policy of supporting landlordism during the last 20 years, they have not been able to serve the common man. As I have no time, I only wish to make one remark.

It is that the budget of our Finance Minister is not the budget of the common man ; I can say it is the budget of no man, neither the budget of the agriculturists nor of the merchants nor of the labourers. Nobody is happy with this budget ; everybody complains about it. That is because there is inherent defect in the policies of the Congress ; there is inherent defect in the programmes of the Congress. Therefore, I only pity our Finance Minister. He cannot do better because of the inherent defects in the policies and programmes of the Congress. Unless they radically change their ideology and their financial policy, the Finance Minister cannot do anything. Therefore, if they are interested in the uplift of the common man, let them change their policies and things will improve.

The other side said that there are no constructive suggestions. It pains me to say that there is a fullbench decision of our High Court so far as making of laws is concerned.

Mr. SPEAKER.—High Court judgment on budget debate !

Sri S.R. BOMMAI.—They have said that the Government have not been able to frame uniform laws and make rules even after the laws are passed and thus the benefit is not given to the common man. Whenever there are strictures or observations or suggestions made by the highest judicial body in the State, they are not taken note of. In fact, they do not look at the judgements. I would only refer to the judgement of the full bench of the High Court delivered on 22nd November 1965.

Mr. SPEAKER.—The member may kindly pass on the reference to me ; I will see that it is passed on to the Government so that it can be looked into and answered by them.

Sri S. R. BOMMAI.—For instance, there are strictures passed against the executive officers and police officers in respect of which no enquiry has been held.

Sri H. SIDDAVEERAPPA.—In what year ?

Sri S. R. BOMMAI.—It is reported in the Mysore Law Journal, page 768.

(SRI S. R. BOMMAI)

I have so many things to say but because I have no time I thank the Chair and close my speech.

MR. SPEAKER.—The House will now adjourn to meet at 9 A.M. tomorrow.

The House adjourned at Thirteen Minutes past Six of the Clock to meet again at Nine of the Clock on Tuesday, the 4th July 1967.

WD 8847—GPB—500—5 8-67